ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಜನವರಿ 13 ಶನಿವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 267 | ಪುಟಗಳು: 12

₹4

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com


ಮೈಸೂರು ಜಿಲ್ಲಾ ಮಹಿಳಾ ಸಹಕಾರ ಬ್ಯಾಂಕ್ ಚುನಾವಣೆ – 2024

ಸನ್ಮಾನ್ಯ ಮತದಾರ ಬಂಧುಗಳೇ, ತಮಗೆ ಹೊಸ ವರ್ಷ ಹಾಗೂ ಸಂಕ್ರಾಂತಿ ಹಬ್ಬದ ಶುಭಾಶಯಗಳು


ಪ್ರಜ್ಞಾವಂತ ಮತದಾರರಾದ ತಾವುಗಳು ಬ್ಯಾಂಕಿನ ಅಭಿವೃದ್ಧಿಗೆ ಷೇರುದಾರರಾಗಿ ಸಹಕರಿಸಿದ್ದೀರಿ ಮತ್ತು ಬೆಳೆಸಿದ್ದೀರಿ. ಇದುವರೆಗೆ ತಾವು ಕಟ್ಟಿ ಬೆಳೆಸಿದ ಈ ಸಂಸ್ಥೆಯ ಅಭಿವೃದ್ಧಿಗಾಗಿ ಈ ಕೆಳಕಂಡ ನಮ್ಮ ಗುಂಪಿನ ಹತ್ತೊಂಬತ್ತು (19) ಅಭ್ಯರ್ಥಿಗಳಿಗೆ ಮತ ನೀಡುವ ಮೂಲಕ ಜಯಶೀಲರನ್ನಾಗಿ ಮಾಡಬೇಕೆಂದು ಕೋರುತ್ತೇವೆ.

4 
ಹುಣಸೂರು ತಾಲ್ಲೂಕು
ಶ್ರೀಮತಿ ಕಲ್ಪನಾ ಕೆ.ಎನ್.
W/o ಬೊಮ್ಮೇಗೌಡ, ಪ್ರಗತಿಪರ ರೈತ ಮಹಿಳೆ
ಸಮಾಜ ಸೇವಕರು, ಹುಣಸೂರು, ಮೊ. : 90088 82875


6 
ಗುಂಡ್ಲುಪೇಟೆ ತಾಲ್ಲೂಕು
ಶ್ರೀಮತಿ ಗೀತಾ ಪಿ. B.A.
W/o ಬಿ.ಎಸ್. ಕಿರಣ್, ಸಮಾಜ ಸೇವಕರು
ಗುಂಡ್ಲುಪೇಟೆ, ಮೊ. : 92429 04248


7 
ಮೈಸೂರು ತಾಲ್ಲೂಕು
ಶ್ರೀಮತಿ ಗೀತಾ ಪುಟ್ಟಸ್ವಾಮಿ
ಮಾಜಿ ನಿರ್ದೇಶಕರು, ಮೈ.ಜಿ.ಮ.ಸ.ಬ್ಯಾಂಕ್
ಮಾಜಿ ನಿರ್ದೇಶಕರು, ಮೈ.ಚಾ.ಜಿ.ಒ.ಸಂಘ
ನಿರ್ದೇಶಕರು, ಅ.ಕ.ಒ.ಮಹಾಸಭಾ, ಮೈಸೂರು
ಮೊ.: 9611186752


8 
ಮೈಸೂರು ನಗರ
ಶ್ರೀಮತಿ ಗೌರಮ್ಮ ಡಿ.
ಸಂಸ್ಥಾಪಕ ಮಾಜಿ ಉಪಾಧ್ಯಕ್ಷರು, ಮಾಜಿ ಅಧ್ಯಕ್ಷರು,
ಹಾಲಿ ನಿರ್ದೇಶಕರು, ಮೈ.ಜಿ.ಮ.ಸ.ಬ್ಯಾಂಕ್ ಹಾಗೂ
ಮೈ.ನ.ಪಾ. ಮಾಜಿ ಸದಸ್ಯರು, ಮೊ. : 90088 55831


9 
ಮೈಸೂರು ನಗರ
ಶ್ರೀಮತಿ ಜ್ಯೋತಿ ಕೆ.ಹೆಚ್. B.Com.
ಸಮಾಜ ಸೇವಕರು
ಮೈಸೂರು, ಮೊ. : 91489 60475



10 
ಕೆ.ಆರ್. ನಗರ ತಾಲ್ಲೂಕು
ದೀಪ ಎಸ್. ಗೌಡ M.A., B.Ed.
ಸಿ. ಸುರೇಶ, ನವನಗರ ಅರ್ಬನ್ ಬ್ಯಾಂಕ್ ಎಂ.ಡಿ. ಇವರ ಮಗಳು
ಸಮಾಜ ಸೇವಕಿ, ಕೆ.ಆರ್. ನಗರ, ಮೊ. : 70900 96488


12 
ಮೈಸೂರು ನಗರ
ಶ್ರೀಮತಿ ನಿಖಿತಾ ಎನ್. B.E
ಆರ್. ನರೇಂದ್ರ, ಮಾಜಿ ಶಾಸಕರು, ಹನೂರು ಕ್ಷೇತ್ರ
ಇವರ ಮಗಳು, ಕೊಳ್ಳೇಗಾಲ, ಮೊ. : 96113 19111


16 
ಮೈಸೂರು ನಗರ
ಶ್ರೀಮತಿ ಎಸ್. ಪ್ರೇಮ
(ಪ್ರೇಮ ಶಂಕರೇಗೌಡ)
ಹಾಲಿ ನಿರ್ದೇಶಕರು ಮತ್ತು ಮೈ.ನ.ಪಾ. ಮಾಜಿ ಸದಸ್ಯರು
ಮೈಸೂರು, ಮೊ. : 99457 32169


20 
ಟಿ. ನರಸೀಪುರ ತಾಲ್ಲೂಕು
ಶ್ರೀಮತಿ ಎಂ.ಎಸ್. ಭಾರತಿ M.A.
ಮಾಜಿ ನಿರ್ದೇಶಕರು ಮತ್ತು ಆಕಾಶವಾಣಿ ನಿರೂಪಕಿ,
ಟಿ. ನರಸೀಪುರ ಮೊ. : 96320 79668



21 
ಒ.ಬಿ.ಸಿ. ಮೀಸಲು
ಶ್ರೀಮತಿ ಪಿ. ಭಾರತಿ M.A.
ಮೈಸೂರು ಮಹಾನಗರ ಪಾಲಿಕೆ
ಮಾಜಿ ಸದಸ್ಯರು, ಮೊ. : 93424 23263



26 
ಮೈಸೂರು ನಗರ
ಶ್ರೀಮತಿ ಮೋದಾಮಣಿ M.A.
ಮಾಜಿ ನಿರ್ದೇಶಕರು ಹಾಗೂ ಮಾಜಿ ಮೇಯರ್,
ಮೈ.ನ.ಪಾ., ಮೈಸೂರು, ಮೊ. : 98804 94998


27 
ಮೈಸೂರು ನಗರ
ಶ್ರೀಮತಿ ಮಂಜುಳಾ ಮಾನಸ M.A., LL.B.
ವಕೀಲರು, ಹಾಲಿ ನಿರ್ದೇಶಕರು, ಮಾಜಿ ಉಪಾಧ್ಯಕ್ಷರು, ಮೈ.ನ.ಪಾ. ಮಾಜಿ ಸದಸ್ಯರು
ಮಾಜಿ ಅಧ್ಯಕ್ಷರು, ರಾಜ್ಯ ಮಹಿಳಾ ಆಯೋಗ ಮೊ. : 94484 48397


28 
ಚಾಮರಾಜನಗರ ತಾಲ್ಲೂಕು
ಶ್ರೀಮತಿ ರತ್ನಮ್ಮ ಬಿ. M.A.
W/o ಬಸವರಾಜು ಕೆ.ಆರ್.
ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರು ಹಾಗೂ
ಮಾಜಿ ಎಪಿಎಂಸಿ ಸದಸ್ಯರು, ಚಾಮರಾಜನಗರ, ಮೊ.: 9916980605


29 
ಒ.ಬಿ.ಸಿ. – ಬಿ ಮೀಸಲು
ಶ್ರೀಮತಿ ಎಸ್.ರೇಣುಕಾ
W/o ರಾಜು
ಮಾಜಿ ರಾಜ್ಯ ನಿರ್ದೇಶಕರು,
ಮಹಿಳಾ ಅಭಿವೃದ್ಧಿ ನಿಗಮ, ಮೊ. : 80507 99609


30 
ನಂಜನಗೂಡು ತಾಲ್ಲೂಕು
ಶ್ರೀಮತಿ ಜೆ. ಲತಾ M.A., M.Phil
W/o ಮುದ್ದುಮೋಹನ್
ಉಪನ್ಯಾಸಕರು ಹಾಗೂ ಅಧ್ಯಕ್ಷರು,
ತಾ.ಕ.ಸಾ.ಪ. ನಂಜನಗೂಡು, ಮೊ. : 96639 73237


31 
ಮೈಸೂರು ನಗರ
ಶ್ರೀಮತಿ ಲತಾ ಬಿ.ಎಸ್. B.Sc., LLB
W/o ರಮೇಶ್
ಮಾಜಿ ಅಧ್ಯಕ್ಷರು, ಶುಭೋದಯ ಲೇಡಿಸ್ ಕ್ಲಬ್,
ಸಿದ್ಧಾರ್ಥನಗರ, ಮೈಸೂರು, ಮೊ. : 9900 190467


33 
ಮೈಸೂರು ನಗರ
ಶ್ರೀಮತಿ ಡಾ. ಶಾರದ ಎಂ. M.A., M.Ed., Ph.D.
ಪ್ರಾಂಶುಪಾಲರು, ಶ್ರೀ ನಟರಾಜ ಮಹಿಳಾ ಪದವಿ ಕಾಲೇಜು
ಶ್ರೀ ಹೊಸಮಠ, ಮೈಸೂರು, ಮೊ. : 94818 33104


36 
ಎಸ್.ಟಿ. ಮೀಸಲು
ಶ್ರೀಮತಿ ಶೋಭ ಎಂ.ಎಸ್. B.C.A.
ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯರು
ಮೊ. : 9686202120


38 
ಎಸ್.ಸಿ. ಮೀಸಲು
ಶ್ರೀಮತಿ ಎಸ್.ಸರೋಜಮ್ಮ B.A., LL.B.
ವಕೀಲರು ಮತ್ತು ಸಮಾಜ ಸೇವಕರು
ಮೊ. : 89712 77908


ದಿನಾಂಕ : 14–01–2024ರ ಭಾನುವಾರ
ಬೆಳಗ್ಗೆ 9 ರಿಂದ ಸಂಜೆ 4 ರವರೆಗೆ
ಸ್ಥಳ : ಹಾರ್ಡ್ವಿಕ್ ಸ್ಕೂಲ್, ಆರ್.ಟಿ.ಓ. ಸರ್ಕಲ್ ಹತ್ತಿರ, ಮೈಸೂರು

ಬ್ಯಾಂಕಿನ ಗುರುತಿನ ಚೀಟಿ / ಬ್ಯಾಂಕಿನ ಷೇರು ಪಾಸ್ ಪುಸ್ತಕವನ್ನು ಕಡ್ಡಾಯವಾಗಿ ಮತದಾನದ ವೇಳೆ ತರಬೇಕಾಗಿ ಮನವಿ.
ಒಬ್ಬ ಮತದಾರರು 19 ಜನರನ್ನು ಆಯ್ಕೆ ಮಾಡುವ ಅಧಿಕಾರವಿದೆ. ದಯವಿಟ್ಟು ನಮ್ಮ ಗುಂಪಿಗೆ ಮತ ನೀಡಬೇಕೆಂದು ಕೋರಿಕೊಳ್ಳುತ್ತೇವೆ.

ನಾಸಿಕ್‌ನ ಕಲಾರಾಮ ದೇವಾಲಯದ ಆವರಣ ಸ್ವಚ್ಛಗೊಳಿಸಿದ ಪ್ರಧಾನಿ ಮೋದಿ




ನಾಸಿಕ್, ಜ.12– ಸ್ವಚ್ಛತಾ ಅಭಿಯಾನದ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಮಹಾರಾಷ್ಟ್ರದ ನಾಸಿಕ್‌ನಲ್ಲಿರುವ ಕಲಾರಾಮ ದೇವಾಲಯದ ಆವರಣವನ್ನು ಸ್ವಚ್ಛಗೊಳಿಸಿದರು. ಮೋದಿ ಅವರು ಮಾಪ್ ಸ್ಟಿಕ್ ಹಿಡಿದು, ಬಕೆಟ್‌ನೊಂದಿಗೆ ದೇವಾಲಯದ ನೆಲವನ್ನು ಒರೆಸುವ ದೃಶ್ಯಗಳು ವಿಡಿಯೋದಲ್ಲಿ ಸೆರೆಯಾಗಿದೆ. ಸಂಸದ ಪ್ರತಾಪ್ ಸಿಂಹ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಈ ವಿಡಿಯೋವನ್ನು ಹಂಚಿಕೊಂಡಿದ್ದಾರೆ.

ಅಯೋಧ್ಯೆಯಲ್ಲಿ ರಾಮಮಂದಿರ ಉದ್ಘಾಟನೆಗೂ ಮುನ್ನ ದೇಶಾದ್ಯಂತ ದೇವಾಲಯಗಳಲ್ಲಿ ಸ್ವಚ್ಛತಾ ಚಟುವಟಿಕೆಗಳನ್ನು (ಸ್ವಚ್ಛತಾ ಅಭಿಯಾನ) ಕೈಗೊಳ್ಳುವಂತೆ ಪ್ರಧಾನಿ ಜನರಿಗೆ ಮನವಿ ಮಾಡಿದ್ದಾರೆ.

ಇದಕ್ಕೂ ಮುನ್ನ ಕಲಾರಾಮ ಮಂದಿರದಲ್ಲಿ ದರ್ಶನ ಹಾಗೂ ಪೂಜೆ ಸಲ್ಲಿಸಿದರು. ಗೋದಾವರಿ ನದಿಯ ದಡದಲ್ಲಿರುವ ಶ್ರೀ ರಾಮ್ ಕುಂಡದಲ್ಲಿಯೂ ವಿಶೇಷ ಪೂಜೆ ಸಲ್ಲಿಸಿದರು. ಇದೇ ಸಂದರ್ಭದಲ್ಲಿ ಮೋದಿ ಅವರು ರಾಮಾಯಣ ಮಹಾಕಾವ್ಯದ 'ಯುದ್ಧ ಕಾಂಡ' ಭಾಗವನ್ನು ಕೇಳಿದ್ದಾರೆ. ರಾಮನು ಅಯೋಧ್ಯೆಗೆ ಹಿಂದಿರುಗುವುದನ್ನು ಇದು ತಿಳಿಸುತ್ತದೆ. ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪ್ರಧಾನಿ ಮೋದಿ ತಮ್ಮ ಅನುಭವ ಹಂಚಿಕೊಂಡಿದ್ದಾರೆ. ಹಲವಾರು ಪುರೋಹಿತರು ರಾಮ ಭಜನೆ ಹಾಡುತ್ತಿರುವಾಗ ಪ್ರಧಾನಮಂತ್ರಿಯವರು ಸಂಗೀತ ವಾದ್ಯವನ್ನು ನುಡಿಸುತ್ತಾ ದೇವಾಲಯದಲ್ಲಿ ನೆಲದ ಮೇಲೆ ಕುಳಿತಿರುವ ದೃಶ್ಯಗಳು ವೈರಲ್ ಆಗಿವೆ.

ಮೋದಿಯೇ ರಾಮಮಂದಿರ ಉದ್ಘಾಟನೆ ಮಾಡಬೇಕೆಂದು ಶ್ರೀರಾಮನೇ ನಿಶ್ಚಯಿಸಿದ್ದಾನೆ

ನವದೆಹಲಿ, ಜ.12– ಅಯೋಧ್ಯೆಯಲ್ಲಿ ಜನವರಿ 22ರಂದು ನಡೆಯಲಿರುವ ರಾಮಮಂದಿರ ಪ್ರಾಣ ಪ್ರತಿಷ್ಠಾ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಬಿಜೆಪಿಯ ಹಿರಿಯ ನಾಯಕ ಲಾಲ್ ಕೃಷ್ಣ ಅಡ್ವಾಣಿಯವರು ಮಹತ್ವದ ಸಂದರ್ಶನದಲ್ಲಿ ಮಾತನಾಡಿದ್ದಾರೆ. ತಮ್ಮ ಜೀವಮಾನದ ಕನಸೊಂದು ಈಗ ಈಡೇರಿದಂತಾಗಿದೆ ಎಂದು ಹೇಳಿರುವ ಅವರು, ರಾಮಲಲ್ಲಾನ ಪ್ರಾಣ ಪ್ರತಿಷ್ಠ ಕಾರ್ಯಕ್ರಮವನ್ನು ವೀಕ್ಷಿಸಲು ಉತ್ಸುಕನಾಗಿದ್ದೇನೆ ಎಂದು ತಿಳಿಸಿದ್ದಾರೆ. ಹಿಂದಿ ಸಾಹಿತ್ಯ ಮಾಸ ಪತ್ರಿಕೆ ರಾಷ್ಟ್ರಧರ್ಮ ತನ್ನ ಜನವರಿ 15 ರಂದು ಬರಲಿರುವ ಸಂಚಿಕೆಯಲ್ಲಿ ಲಾಲ್ ಕೃಷ್ಣ ಅಡ್ವಾಣಿ ಅವರನ್ನು ರಾಮ ಮಂದಿರ ಪ್ರಾಣ ಪ್ರತಿಷ್ಠಾಪನೆ ಸಂದರ್ಭದಲ್ಲಿ ಮಾತನಾಡಿಸಿದೆ. ಈ ವೇಳೆ ಅವರು ತಮ್ಮ ಐತಿಹಾಸಿಕ ರಥ ಯಾತ್ರೆಯ ಬಗ್ಗೆಯೂ ಮಾತನಾಡಿದ್ದಾರೆ.



1990ರ ಸೆಪ್ಟೆಂಬರ್ 25ರ ಬೆಳಗ್ಗೆ ರಥ ಯಾತ್ರೆ ಆರಂಭವಾಗಿತ್ತು. ರಥಯಾತ್ರೆಯ ವೇಳೆ ಈಗಿನ ಪ್ರಧಾನಿ ನರೇಂದ್ರ ಮೋದಿ ನನ್ನ ಸಹಾಯಕರಾಗಿದ್ದರು. ಇಡೀ ರಥಯಾತ್ರೆಯ ಪ್ರಯಾಣದಲ್ಲಿ ಅವರು ನನ್ನ ಜೊತೆಗಿದ್ದರು. ಅಂದು ಅವರು ಇಷ್ಟು ಪ್ರಸಿದ್ಧರಾಗಿರಲಿಲ್ಲ. ಆದರೆ, ಅದಾಗಲೇ ರಾಮ ಮಾತ್ರ ತನ್ನ ದೇವಸ್ಥಾನದ ಪುನರ್‌ನಿರ್ಮಾಣಕ್ಕೆ ವಿಶೇಷ ಭಕ್ತನನ್ನು ಆರಿಸಿಕೊಂಡಿದ್ದ ಎಂದು ತಿಳಿಸಿದ್ದಾರೆ.

7 ವರ್ಷಗಳ ಹಿಂದೆ ನಾಪತ್ತೆಯಾಗಿದ್ದ ವಿಮಾನದ ಅವಶೇಷಗಳು ಪತ್ತೆ

ದೆಹಲಿ, ಜ. 12– 29 ಜನರೊಂದಿಗೆ 2016 ರಲ್ಲಿ ಬಂಗಾಳ ಕೊಲ್ಲಿಯಲ್ಲಿ ನಾಪತ್ತೆಯಾಗಿದ್ದ ಭಾರತೀಯ ವಾಯು ಪಡೆಯ ಎಎನ್–32 ವಿಮಾನದ ಅವಶೇಷಗಳು ಏಳು ವರ್ಷಗಳ ನಂತರ ಪತ್ತೆಯಾಗಿವೆ ಎಂದು ಕೇಂದ್ರ ರಕ್ಷಣಾ ಸಚಿವಾಲಯ ಶುಕ್ರವಾರ ತಿಳಿಸಿದೆ. ಅಧಿಕೃತ ಹೇಳಿಕೆಯ ಪ್ರಕಾರ, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಓಶಿಯನ್ ಟೆಕ್ನಾಲಜಿ ನಿಯೋಜಿಸಿದ ಸ್ವಾಯತ್ತ ಅಂಡರ್‌ವಾಟರ್ ವೆಹಿಕಲ್ (AUV) ಅನ್ನು ಚೆನ್ನೈ ಕರಾವಳಿಯಿಂದ ಸುಮಾರು 310 ಕಿಲೋಮೀಟರ್ ಸಮುದ್ರದ ತಳದಲ್ಲಿ ಕಾಣೆಯಾದ ವಿಮಾನವನ್ನು ಪತ್ತೆಹಚ್ಚಲು ಬಳಸಲಾಯಿತು.

ಜುಲೈ 22, 2016 ರಂದು IAF ನ An–32 ಅವಳಿ–ಎಂಜಿನ್ ವಿಮಾನವು ಬಂಗಾಳ ಕೊಲ್ಲಿಯಲ್ಲಿ ನಿಗೂಢವಾಗಿ ಕಣ್ಮರೆಯಾಯಿತು. ವಿಮಾನವು ಚೆನ್ನೈನ ತಾಂಬರಂ ಏರ್‌ಫೋರ್ಸ್ ಸ್ಟೇಷನ್‌ನಿಂದ ಬೆಳಿಗ್ಗೆ 8:30ರ ಸುಮಾರಿಗೆ ಹೊರಟಿದ್ದು



ಮಧ್ಯಾಹ್ನ ಹೊತ್ತಿಗೆ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಪೋರ್ಟ್‌ಬ್ಲೇರ್‌ಗೆ ಆಗಮಿಸಬೇಕಿತ್ತು. ಆದಾಗ್ಯೂ, ವಿಮಾನವು ಚೆನ್ನೈನಿಂದ ಪೂರ್ವಕ್ಕೆ 280 ಕಿಲೋಮೀಟರ್ ದೂರದಲ್ಲಿದ್ದಾಗ ಬೆಳಿಗ್ಗೆ 9:12ರ ಸುಮಾರಿಗೆ ವಿಮಾನದೊಂದಿಗೆ ರಾಡಾರ್ ಸಂಪರ್ಕವನ್ನು ಕಳೆದುಕೊಂಡರು.

ಆರು ಸಿಬ್ಬಂದಿ, 11 ಐಎಎಫ್ ಸಿಬ್ಬಂದಿ, ಇಬ್ಬರು ಭಾರತೀಯ ಸೇನೆಯ ಸೈನಿಕರು, ತಲಾ ಒಬ್ಬರು ಭಾರತೀಯ ನೌಕಾಪಡೆ ಮತ್ತು ಭಾರತೀಯ ಕೋಸ್ಟ್ ಗಾರ್ಡ್ ಮತ್ತು ನೌಕಾ ಶಸ್ತ್ರಾಸ್ತ್ರ ಡಿಪೋದಲ್ಲಿ ಕೆಲಸ ಮಾಡುವ ಎಂಟು ರಕ್ಷಣಾ ನಾಗರಿಕರು ಸೇರಿದಂತೆ ವಿಮಾನದಲ್ಲಿ 29 ಜನರಿದ್ದರು.

ಡಾ.ಎಂ.ಮೋಹನದಾಸ್ ಶೆಣೈ ನಿಧನ

ಮೈಸೂರು, ಜ. 12– ಹುಣಸೂರಿನ ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರಿಸರ್ಚ್‌ನ (ಐಸಿಎಆರ್) ನಿವೃತ್ತ ನಿರ್ದೇಶಕರಾದ ಡಾ. ಎಂ. ಮೋಹನದಾಸ್ ಶೆಣೈ (74) ಶುಕ್ರವಾರ ಚೆನ್ನೈನಲ್ಲಿ ನಿಧನರಾದರು. ಇವರು ಮೈಸೂರು ಗ್ರಾಹಕರ ಪರಿಷತ್ ಅಧ್ಯಕ್ಷರಾಗಿ ಹಾಗೂ ಮೈಸೂರಿನ ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟಿಸ್ (ಪಿಯುಸಿಎಲ್) ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದರು.



ಸಂತಾಪ: ಮೈಸೂರು ಗ್ರಾಹಕರ ಪರಿಷತ್ ಸಂಸ್ಥಾಪಕ ಅಧ್ಯಕ್ಷರಾದ ಭಾಮಿ ವಿ.ಶೆಣೈ ಅವರು ಓರ್ವ ಸಮರ್ಥ ಅಧ್ಯಕ್ಷರನ್ನು ಎಂಜಿಪಿ ಕಳೆದುಕೊಂಡಿದೆ ಎಂದರು.

ತಮ್ಮ ಸಂತಾಪ ಸಂದೇಶದಲ್ಲಿ, ಡಾ. ಎಂ.ಎಂ. ಶೆಣೈ, ಇವರು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಚಾಮುಂಡಿಬೆಟ್ಟ ಉಳಿಸಿ, ಕುಕ್ಕರಹಳ್ಳಿ ಕೆರೆ ಉಳಿಸಿ ಸೇರಿದಂತೆ ಹಲವಾರು ಯೋಜನೆಗಳನ್ನು ಕೈಗೊಂಡಿದ್ದರು. ಅಲ್ಲದೆ ವಾರ್ಡ್ ಸಮಿತಿ ರಚನೆಗೆ ಶ್ರಮಿಸಿದ್ದರು. ಡಾ.ಎಂ.ಎಂ.ಶೆಣೈ ಅವರು ಮೈಸೂರು ವಿಶ್ವವಿದ್ಯಾನಿಲಯದ ಇಂಟರ್‌ನಲ್ ಕ್ವಾಲಿಟಿ ಅಶ್ಯೂರೆನ್ಸ್ ಸೆಲ್‌ನ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ಡಾ.ಎಂ.ಎಂ. ಶೆಣೈ ಅವರು ಕ್ಯಾನ್ಸರ್‌ನಿಂದ ಶಸ್ತ್ರಚಿಕಿತ್ಸೆಗೆ ಒಳಗಾದ ನಂತರ ಚೇತರಿಸಿಕೊಳ್ಳುವ ಹಾದಿಯಲ್ಲಿದ್ದರು ಮತ್ತು ಮೈಸೂರಿಗೆ ಮರಳಲು ಎದುರು ನೋಡುತ್ತಿದ್ದರು. ಆದರೆ ದುರದೃಷ್ಟವಶಾತ್ ಅವರು ಇಂದು ಬೆಳಿಗ್ಗೆ ನಿಧನರಾದರು ಎಂದು ಭಾಮಿ ವಿ.ಶೆಣೈ ತಿಳಿಸಿದ್ದಾರೆ. ಡಾ. ಎಂ.ಎಂ. ಶೆಣೈ ಅವರ ಪತ್ನಿ ಹಾಗೂ ಮೈಸೂರು ಗ್ರಾಹಕರ ಪರಿಹಾರ ವೇದಿಕೆ ಮಾಜಿ ಸದಸ್ಯೆ ಉಮಾಶೆಣೈ, ಪತಿ ಬದುಕಿನ ಕೊನೆ ಕ್ಷಣದಲ್ಲಿ ಅವರ ಪಕ್ಕದಲ್ಲಿದ್ದರು.



ಶತಾಯುಷಿ ಪಟೇಲ್ ಮಾದೇಗೌಡ್ರು

ಮೈಸೂರು, ಜ.12– ತಾಲೂಕಿನ ಕೆ.ಬಡಗಲಹುಂಡಿ ಗ್ರಾಮದ ನಿವಾಸಿ, ಶತಾಯುಷಿ ಪಟೇಲ್ ಮಾದೇಗೌಡ್ರು(102) ಶುಕ್ರವಾರ ನಿಧನರಾದರು. ಮೃತರು ಮಕ್ಕಳು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ(ಜ.13) ಬೆಳಗ್ಗೆ 11.30ಕ್ಕೆ ಸ್ವಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿ.ಕೃ.ಗೋಕಾಕ್ ಪ್ರಶಸ್ತಿ ಪ್ರದಾನ

ಮೈಸೂರು,ಜ.12(ಜಿಎ)–ಕನ್ನಡ ಮತ್ತಷ್ಟು ಅಭಿವೃದ್ಧಿಯಾಗಲು ಕನ್ನಡದಲ್ಲಿ ಹೆಚ್ಚು ಪುಸ್ತಕಗಳು ಬರೆಯಬೇಕಿದೆ ಎಂದು ಹಿರಿಯ ಪತ್ರಕರ್ತ ಗೌರಿಸತ್ಯ ಅಭಿಪ್ರಾಯಪಟ್ಟರು.

ಮೈಸೂರಿನ ಸುಬ್ಬರಾಯನ ಕೆರೆಯ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನದಲ್ಲಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಆಯೋಜಿಸಿದ್ದ ವಿ.ಕೃ.ಗೋಕಾಕ್ ಪ್ರಶಸ್ತಿ ಪದಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಇಂದು ಕನ್ನಡ ಪ್ರಥಮ ಭಾಷೆಯಾಗಲು ಕಾರಣೀಕರ್ತರಾದ ವಿ.ಕೃ.ಗೋಕಾಕ್, ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಮತ್ತು ಕನ್ನಡಪರ ಹೋರಾಟಗಾರರನ್ನು ಸದಾ ನೆನೆಯಬೇಕು ಎಂದರು. ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಅವರ ಅವಧಿಯಲ್ಲಿ ಇಂಗ್ಲಿಷ್‌ನಿಂದ ಕನ್ನಡವನ್ನು ಪ್ರಥಮ ಭಾಷೆಯನ್ನಾಗಿ ಮಾಡಿದ್ದರು. ತದನಂತರ ಮುಖ್ಯಮಂತ್ರಿಗಳಾದ ಗುಂಡೂರಾವ್ ಅವರು ಅದನ್ನು ಬದಲಾಯಿಸಿ, ಇಂಗ್ಲಿಷ್ ಅನ್ನು ಪ್ರಥಮ ಭಾಷೆಯನ್ನಾಗಿ ಮಾಡಿದ್ದ ಪರಿಣಾಮ ರಾಜ್ಯದಲ್ಲಿ ಸಾಕಷ್ಟು ಹೋರಾಟಗಳು ನಡೆಯಿತು. ಬೆಂಗಳೂರಿನಲ್ಲಿ ಮೊದಲು ಕನ್ನಡ ಹೋರಾಟಗಾರರು ಪ್ರತಿಭಟನೆ ಆರಂಭಿಸಿದರು. ಅದರ ಕಿಚ್ಚು ಮೈಸೂರಿಗೂ ಪಸರಿಸಿತ್ತು. ಪ್ರತಿದಿನ ಪ್ರತಿಭಟನೆಗಳು ನಡೆಯಿತು. ಈ ನಡುವೇ ನಟ ಡಾ.ರಾಜ್‌ಕುಮಾರ್ ಅವರು ಪ್ರತಿಭಟನೆಗೆ ಸಾಥ್ ನೀಡಿದ ನಂತರ ಅದರ ಪ್ರಖರತೆ ಹೆಚ್ಚಾಯಿತು. ಈ ವೇಳೆ ಸರ್ಕಾರ ವಿಶೇಷ ವರದಿಯನ್ನು ಸಿದ್ಧಪಡಿಸಲು ವಿ.ಕೃ.ಗೋಕಾಕ್ ಅವರನ್ನು ಆಯ್ಕೆ ಮಾಡಿತು. ಇಂಗ್ಲಿಷ್ ಪ್ರೊಫೆಸರ್ ಆದ ಅವರು ಕನ್ನಡಿಗರ ಪರವಾಗಿ ವರದಿ ಸಿದ್ಧಪಡಿಸುವುದಿಲ್ಲ ಎಂಬ ಭಾವನೆ ಎಲ್ಲರೂ ಇತ್ತು. ಆದರೆ, ಅವರ ವರದಿ ಸಂಪೂರ್ಣ ಕನ್ನಡದ ಪರವಾಗಿತ್ತು ಎಂದು ಗೋಕಾಕ್ ವರದಿ ಕುರಿತು ವಿವರಿಸಿದರು.



ಮೈಸೂರಿನ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನದಲ್ಲಿ ಮೈಸೂರು ಕನ್ನಡ ವೇದಿಕೆ ವತಿಯಿಂದ ವಿವಿಧ ಕ್ಷೇತ್ರದ ಸಾಧಕರಿಗೆ ಶುಕ್ರವಾರ ವಿ.ಕೃ.ಗೋಕಾಕ್ ಪ್ರಶಸ್ತಿ ಪದಾನ ಮಾಡಲಾಯಿತು.

ಇಂದು ಅಂತರ್ಜಾಲ (ಇಂಟರ್‌ನೆಟ್) ದಲ್ಲಿ ಇಂಗ್ಲಿಷ್‌ನಲ್ಲಿ ಸಿಗುವಷ್ಟು ಮಾಹಿತಿ ಕನ್ನಡದಲ್ಲಿ ಸಿಗುತ್ತಿಲ್ಲ. ಅಂತರ್ಜಾಲದಲ್ಲಿಯೂ ಕನ್ನಡ ಬಳಕೆ ಹೆಚ್ಚಾಗಬೇಕಿದೆ. ಆದ್ದರಿಂದ ಕನ್ನಡದಲ್ಲಿ ಹೆಚ್ಚು ಪುಸ್ತಕಗಳು ಬರಬೇಕಿದೆ. ಇದರಿಂದ ಕನ್ನಡ ಅಂತರ ರಾಷ್ಟ್ರೀಯ ಭಾಷೆಯಾಗಲಿದೆ. ಶಾಲೆಗಳಲ್ಲಿ ಮಕ್ಕಳಿಗೆ ಕನ್ನಡ ಕಲಿಸಬೇಕಿದೆ. ಇದರಿಂದ ಕನ್ನಡ ಹೆಚ್ಚು ಬೆಳವಣಿಗೆ ಆಗಲಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಗೌರಿ ಸತ್ಯ, ಹಿರಿಯ ಕನ್ನಡ ಪರ ಹೋರಾಟಗಾರರಾದ ರಾಮೇಗೌಡ, ಮೂಗೂರು ನಂಜುಂಡಸ್ವಾಮಿ, ಮಹದೇವಸ್ವಾಮಿ, ನಾಗೇಶ್, ಸಮಾಜ ಸೇವಕರಾದ ಡಾ.ರಘುರಾಂ ವಾಜಪೇಯಿ, ಎಸ್.ಗುರು, ವೈದ್ಯ ಡಾ. ಪ್ರದೀಪ್ ಅವರುಗಳಿಗೆ ವಿ.ಕೃ.ಗೋಕಾಕ್ ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು.

ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ವೇದಿಕೆ ಅಧ್ಯಕ್ಷ ಎಸ್. ಬಾಲಕೃಷ್ಣ ನಾಲಾಬೀದಿ ರವಿ, ಕಾವೇರಮ್ಮ, ಗುರು ಬಸಪ್ಪ ಪ್ಯಾಲೇಸ್ ಬಾಬು, ಗೋಪಿ, ಮಸನ್, ಹರೀಶ್ ಕುಮಾರ್ ಸೇರಿದಂತೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

ನಾಳೆ 'ಅಗಸ್ತ್ಯ ಸಿದ್ಧ ವೈದ್ಯ ಪದ್ಧತಿ' ಗ್ರಂಥ ಲೋಕಾರ್ಪಣೆ

ಮೈಸೂರು, ಜ.12– ಮೈಸೂರಿನ ಅಗಸ್ತ್ಯ ಸಿದ್ಧ ಸಾಹಿತ್ಯ ಸಂಶೋಧನಾ ಕೇಂದ್ರದ ವತಿಯಿಂದ ಸಿದ್ಧ ವೈದ್ಯರಾದ ನರಸಿಂಹಸ್ವಾಮಿ ಪಿ.ಎಸ್. ಅವರ 'ಅಗಸ್ತ್ಯ ಸಿದ್ಧ ವೈದ್ಯ ಪದ್ಧತಿ' ಗ್ರಂಥದ ಲೋಕಾರ್ಪಣಾ ಕಾರ್ಯಕ್ರಮವನ್ನು ಲಕ್ಷ್ಮೀಪುರಂನಲ್ಲಿರುವ ಗೋಪಾಲ ಸ್ವಾಮಿ ಶಿಶು ವಿಹಾರದಲ್ಲಿ ಜ.14ರಂದು ಭಾನುವಾರ ಬೆಳಿಗ್ಗೆ 10ಕ್ಕೆ ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ, ಹಿರಿಯ ನ್ಯಾಯವಾದಿ ಓ.ಶ್ಯಾಂಭಟ್, ಮಣಿಪಾಲ್‌ನ ಅಕಾಡೆಮಿ ಆಫ್ ಹೈಯರ್ ಸೈನ್ಸ್‌ನ ಸಿದ್ಧ ವೈದ್ಯ ಡಾ.ಅರುಳ್ ಅಮುದನ್, ಚೆನ್ನೈನ ಸಿದ್ಧ ವೈದ್ಯ ಡಾ.ಸೆಲ್ವ ಷಣ್ಮುಗಂ, ಮೈಸೂರಿನ ಹಿರಿಯ ಆಯುರ್ವೇದ ತಜ್ಞ ಡಾ.ಎನ್.ಎಸ್. ರಾಮಚಂದ್ರ, ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಕೆ.ಎಸ್.ರಾಧಾ ಕೃಷ್ಣರಾವ್, ಹಿರಿಯ ಆಯುರ್ವೇದ ತಜ್ಞ ಡಾ.ಎ.ಎಸ್. ಚಂದ್ರಶೇಖರ್ ಭಾಗವಹಿಸಲಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ 9845167119 ಸಂಪರ್ಕಿಸಬಹುದು.

ಮೈಸೂರು ಜಿಲ್ಲಾ ಮಹಿಳಾ ಸಹಕಾರ ಬ್ಯಾಂಕ್ ಚುನಾವಣೆಯಲ್ಲಿ ಬೃಹದಾಂಬ ತಂಡ ಬೆಂಬಲಿಸಲು ಮನವಿ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಮಹಿಳಾ ಸಹಕಾರಿ ಬ್ಯಾಂಕ್ ಸಂಸ್ಥಾಪಕರಲ್ಲೊಬ್ಬರಾದ ಡಾ.ಎಂ.ವಿ.ಬೃಹದಾಂಬ ಮಾತನಾಡಿದರು.

ಮೈಸೂರು, ಜ. 12(ಎಂಟಿವೈ)– ಮೈಸೂರಿನ ಹಾರ್ಡ್ವಿಕ್ ಶಾಲಾ ಆವರಣದಲ್ಲಿ ಜ. 14 ರಂದು ನಡೆಯುವ ಮೈಸೂರು ಜಿಲ್ಲಾ ಮಹಿಳಾ ಸಹಕಾರ ಬ್ಯಾಂಕ್ ನಿರ್ದೇಶಕರ ಸ್ಥಾನದ ಚುನಾವಣೆಯಲ್ಲಿ ನಮ್ಮ ತಂಡವನ್ನು ಬೆಂಬಲಿಸುವಂತೆ ಬ್ಯಾಂಕ್‌ನ ಸಂಸ್ಥಾಪಕರಲ್ಲೊಬ್ಬರಾದ ಡಾ.ಎಂ.ವಿ.ಬೃಹದಾಂಬ ಮನವಿ ಮಾಡಿದ್ದಾರೆ. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 1995ರಲ್ಲಿ ಜಿಲ್ಲಾ ಮಹಿಳಾ ಸಹಕಾರಿ ಬ್ಯಾಂಕ್ ಸ್ಥಾಪಿಸಿದಾಗ 3119 ಮಂದಿ ಸದಸ್ಯರಿದ್ದರು. ಷೇರುಧನ 21.65 ಲಕ್ಷ ರೂ. ಸಂಗ್ರಹವಾಗಿತ್ತು. ಇದೀಗ 6800 ಸದಸ್ಯರಿದ್ದು, ಎರಡು ಕೋಟಿ ರೂ. ಷೇರು ಧನವಿದೆ. ಪ್ರಸ್ತುತ ಸಾಲಿನಲ್ಲಿ ಸುಮಾರು 50 ಲಕ್ಷ ರೂ. ಲಾಭ ಗಳಿಸಿದೆ. ಇನ್ನಷ್ಟು ಅಭಿವೃದ್ಧಿ ಕಾರ್ಯ, ಸದಸ್ಯರಿಗೆ ಸೌಲಭ್ಯ ದೊರಕಿಸುವ ನಿಟ್ಟಿನಲ್ಲಿ ಸದಸ್ಯರು ತಮ್ಮ ಗುಂಪಿನ ಎಲ್ಲ ಸದಸ್ಯರನ್ನು ಚುನಾಯಿಸಬೇಕೆಂದು ಕೋರಿದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಮಹಿಳಾ ಸಹಕಾರಿ ಬ್ಯಾಂಕ್ ಸದಸ್ಯರಾದ ಮೀನಾ ತೂಗುದೀಪ ಶ್ರೀನಿವಾಸ್, ಸುಶೀಲ ನಂಜಪ್ಪ, ಭಾಗೀರಥಿ, ಪ್ರಭಾ ಸುರೇಂದ್ರ, ಡಾ. ಶೀಲಾ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

13.1.2024 ಶನಿವಾರ, ಮಳೆ ನಕ್ಷತ್ರ: ಉತ್ತರಾಷಾಢ 11.1.2024 ರಿಂದ 23.01.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಶುಕ್ಲ ಪಕ್ಷ,
ತಿಥಿ: ಬಿದಿಗೆ, ನಕ್ಷತ್ರ: ಶ್ರಾವಣ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಉದ್ಯೋಗಧಾತ ಸಂಸ್ಥೆ, ರೋಟರಿ, ಓಂ ಶ್ರೀನಿಕೇತನ ಟ್ರಸ್ಟ್:** ಸ್ವಾಮಿ ವಿವೇಕಾನಂದರ ಜಯಂತ್ಯೋತ್ಸವ ಪ್ರಯುಕ್ತ ಉದ್ಯೋಗ ಮೇಳ, ಸ್ಥಳ: ಪರಿವರ್ತನ ಬಿ ಸ್ಕೂಲ್, ರಾಯಲ್ ಇನ್ ಹೋಟೆಲ್ ಮುಂಭಾಗ, ಮೇಟಗಳ್ಳಿ, ಬೆಳಗ್ಗೆ 9 ರಿಂದ.

■ **ಪ್ರಮತಿ ಹಿಲ್‌ವ್ಯೂ ಅಕಾಡೆಮಿ :** ವಿಜ್ಞಾನ ಪ್ರಾತ್ಯಕ್ಷಿಕೆ ಪ್ರದರ್ಶನ, ಉದ್ಘಾಟನೆ : ಡಿಎಫ್‌ಆರ್‌ಎಲ್ ವಿಜ್ಞಾನಿ ಡಾ. ಡಿ.ಡಿ. ವಾಡಿಕರ್, ಸ್ಥಳ: ಅಕಾಡೆಮಿ ಆವರಣ, ಕುವೆಂಪುನಗರ, ಬೆಳಗ್ಗೆ 9.30 ರಿಂದ.

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಲಕ್ಷಾರ್ಚನಾ ಮತ್ತು ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಬಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ರಾಘವೇಂದ್ರನಗರ, ಬೆಳಗ್ಗೆಯಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ.

■ **ಶ್ರೀ ವಿವೇಕ ಬಾಲೋದ್ಯಾನ ಪಬ್ಲಿಕ್ ಸ್ಕೂಲ್ :** ವಿಜ್ಞಾನ ವಸ್ತುಪ್ರದರ್ಶನ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಕುವೆಂಪು ವಿಶ್ವವಿದ್ಯಾನಿಲಯ ವಿಶ್ರಾಂತ ಕುಲಪತಿ ಪ್ರೊ. ಪಿ. ವೆಂಕಟರಾಮಯ್ಯ, ಸ್ಥಳ: ಶಾಲೆ ಆವರಣ, ಜಯನಗರ, ಬೆಳಗ್ಗೆ 10 ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಚರ್ಮರೋಗಿಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 10 ರಿಂದ.

■ **ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜು:** ಕಾಲೇಜು ವಾರ್ಷಿಕೋತ್ಸವ ಹಾಗೂ ಸಹಪಠ್ಯ ಚಟುವಟಿಕೆಗಳ ಸಮಾರೋಪ ಸಮಾರಂಭ, ಅಧ್ಯಕ್ಷತೆ: ಶಾಸಕ ಟಿ.ಎಸ್.ಶ್ರೀವತ್ಸ, ಮುಖ್ಯ ಅತಿಥಿಗಳು: ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಂ.ಮರಿಸ್ವಾಮಿ, ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಮಂಜುನಾಥ ನಾಯಕ್, ಬಿ.ಸಿ.ರಘುನಂದನ್, ಉಪಸ್ಥಿತರು: ಕಾಲೇಜು ಪ್ರಿನ್ಸಿಪಾಲ್ ಹೆಚ್.ಎನ್. ಪುಟ್ಟಗೌರಮ್ಮ, ಸಿ.ಎನ್.ಫಣಿರಾಜ್, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10ಕ್ಕೆ.

■ **ಶರಣ ಸಾಹಿತ್ಯ ಪರಿಷತ್, ಮೈಸೂರು ನಗರ ಘಟಕ, ಜೆಎಸ್‌ಎಸ್ ಪ್ರೌಢಶಾಲೆ :** ಶರಣ ದರ್ಶನ ಕುರಿತು ಆಶು ಭಾಷಣ ಸ್ಪರ್ಧೆ, ಉದ್ಘಾಟನೆ : ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯ ಉಪನ್ಯಾಸಕ ಡಿ. ಉದಯ ಕುಮಾರ್ ಅವರಿಂದ ವಚನ ಸಾಹಿತ್ಯದ ಪ್ರಸ್ತುತತೆ ಕುರಿತು ಉಪನ್ಯಾಸ, ಪ್ರಶಸ್ತಿ ಪತ್ರ ವಿತರಣೆ: ಜೆಎಸ್‌ಎಸ್ ಪ್ರೌಢಶಾಲೆ ಮುಖ್ಯೋಪಾಧ್ಯಾಯ ಎಂ.ಸಿ. ದೇವರಾಜು, ಅಧ್ಯಕ್ಷತೆ : ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಮ.ಗು. ಸದಾನಂದಯ್ಯ, ಸ್ಥಳ: ಜೆಎಸ್‌ಎಸ್ ಪ್ರೌಢಶಾಲೆ, ಲಕ್ಷ್ಮೀಪುರಂ, ಬೆಳಗ್ಗೆ 10ಕ್ಕೆ.

■ **ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ, ಭುವನೇಶ್ವರಿ ಸೇವಾ ಟ್ರಸ್ಟ್:** ಸ್ವಾಮಿ ವಿವೇಕಾನಂದ ಜಯಂತಿ, ಜ್ಞಾನಯೋಗಿ ಶ್ರೀ ಸಿದ್ದೇಶ್ವರ ಸ್ವಾಮಿಗಳಿಗೆ ನುಡಿನಮನ, ಜ್ಞಾನಯೋಗಿ ಪ್ರಶಸ್ತಿ, ವಿವೇಕ ಯುವಸಿರಿ ಪ್ರಶಸ್ತಿ ಪ್ರದಾನ, ಉದ್ಘಾಟನೆ: ಸಾಹಿತಿ ಬನ್ನೂರು ಕೆ.ರಾಜು, ಪುಷ್ಪಾರ್ಚನೆ: ನಜರ್‌ಬಾದ್ ನಟರಾಜು, ಅಧ್ಯಕ್ಷತೆ: ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು: ಸಾಹಿತಿ ಜಯಪ್ಪ ಹೊನ್ನಾಳಿ, ಸುಪ್ರೀತ್, ಬಿ.ಬಿ.ರಾಜಶೇಖರ್, ಡಾ.ನಂದಿನಿ, ಸ್ಥಳ: ನಮನ ಕಲಾಮಂಟಪ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10.30ಕ್ಕೆ

■ **ಮೈಸೂರು ಆರ್ಟ್ ಗ್ಯಾಲರಿ :** ಸಾಧಕರೊಂದಿಗೆ ಸಂವಾದ ಮತ್ತು ಪ್ರಶಸ್ತಿ ಪಡೆದಿದ್ದ ಛಾಯಾಚಿತ್ರಗಳ ಪ್ರದರ್ಶನ, ತಿಂಗಳ ಸಾಧಕರು ಖ್ಯಾತ ವನ್ಯಜೀವಿ ಛಾಯಾಗ್ರಾಹಕ ಅನುರಾಗ್ ಬಸವರಾಜ್, ಮುಖ್ಯ ಅತಿಥಿಗಳು : ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಪ್ರಾಸ್ತಾವಿಕ ನುಡಿ : ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ. ಚಂದ್ರಶೇಖರ್, ಅಧ್ಯಕ್ಷತೆ: ಮೈಸೂರು ಆರ್ಟ್ ಗ್ಯಾಲರಿ ಸ್ಥಾಪಕ ಅಧ್ಯಕ್ಷ ಎಲ್. ಶಿವಲಿಂಗಪ್ಪ, ವಿಶೇಷ ಆಹ್ವಾನಿತರು : ಪ್ರಗತಿ ಗೋಪಾಲಕೃಷ್ಣ, ದೊಡ್ಡನಹುಂಡಿ ರಾಜಣ್ಣ, ಮೂಗೂರು ನಂಜುಂಡಸ್ವಾಮಿ, ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ಬೆಳಗ್ಗೆ 11ಕ್ಕೆ.

■ **ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು:** ಪದವೀಧರರ ದಿನಾಚರಣೆ, ಮುಖ್ಯ ಅತಿಥಿಗಳು: ಸೈಂಟಿಫಿಕ್ ಇನ್ನೋವೇಷನ್ ಅಂಡ್ ರಿಸರ್ಚ್ ಸೆಂಟರ್‌ನ ಡಾ. ಯು. ಚಂದ್ರಶೇಖರ್, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು: ಪಿ.ವಿಶ್ವನಾಥ್, ಶ್ರೀಶೈಲ ರಾಮಣ್ಣವರ್, ಸ್ಥಳ: ಸಾಹುಕಾರ್ ಚನ್ನಯ್ಯ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಶ್ರೀಕಾಂತ ಬಾಲಿಕಾ ಪ್ರೌಢಶಾಲೆ:** ವಾರ್ಷಿಕೋತ್ಸವ ಸಮಾರಂಭ, ಅಧ್ಯಕ್ಷತೆ: ಕೆ.ಎನ್.ವರದರಾಜ ಅಯ್ಯಂಗಾರ್ ಮೆಮೋರಿಯಲ್ ಟ್ರಸ್ಟ್ ಅಧ್ಯಕ್ಷ ಆರ್.ಜಿ.ನರಸಿಂಹ ಅಯ್ಯಂಗಾರ್, ಮುಖ್ಯ ಅತಿಥಿಗಳು: ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಹೆಚ್.ಕೆ. ಪಾಂಡು, ಸ್ಥಳ: ಶ್ರೀಕಾಂತ ವಿದ್ಯಾಸಂಸ್ಥೆ ಸಭಾ ಭವನ, ಬೆಳಗ್ಗೆ 11ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಹಿಮಾಲಯ ಪ್ರತಿಷ್ಠಾನ:** ಯೋಗ ಶಿಕ್ಷಕ ಎನ್.ಅನಂತ ಸಂಪಾದಿತ 'ಮಲ್ಲಾಡಿಹಳ್ಳಿಯ ಮಹಾಯೋಗಿ' ಕೃತಿ ಲೋಕಾರ್ಪಣೆ ಸಮಾರಂಭ, ಸಾನ್ನಿಧ್ಯ, ಕೃತಿ ಬಿಡುಗಡೆ: ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಮಲ್ಲಾಡಿಹಳ್ಳಿ ಶ್ರೀಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ: ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿ, ಪ್ರಾಸ್ತಾವಿಕ ನುಡಿ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕೃತಿ ಕುರಿತು: ಡಾ.ಕೆ.ಲೀಲಾಪ್ರಕಾಶ್, ಮುಖ್ಯ ಅತಿಥಿಗಳು: ಓ. ಶ್ಯಾಮ್ ಭಟ್, ಡಿ.ಟಿ. ಪ್ರಕಾಶ್, ಡಾ.ಕೆ.ರಘುರಾಂ ವಾಜಪೇಯಿ, ಸ್ಥಳ: ಪ್ರಾರ್ಥನಾ ಮಂದಿರ, ಅವಧೂತ ದತ್ತ ಪೀಠ, ಬೆ. 11.30ಕ್ಕೆ.

■ **ಎಂಎಎಸ್ ವಿಎಸ್ ಗುರುಕುಲ ಪಿಯು ಕಾಲೇಜು :** ಕಾಲೇಜು ವಾರ್ಷಿಕೋತ್ಸವ, ಪ್ರತಿಭಾ ಪುರಸ್ಕಾರ, ಸಾಂಸ್ಕೃತಿಕ ಕಾರ್ಯಕ್ರಮ, ಅಧ್ಯಕ್ಷತೆ : ಮಲ್ಲಾಡಿಹಳ್ಳಿ ಅನಾಥ ಸೇವಾಶ್ರಮ ವಿಶ್ವಸ್ಥ ಸಮಿತಿ ಉಪಾಧ್ಯಕ್ಷ ರಾಘವೇಂದ್ರ ಬಿ. ಪಾಟೀಲ, ಉದ್ಘಾಟನೆ : ಸಮಿತಿ ಕಾರ್ಯದರ್ಶಿ ಎಸ್.ಕೆ. ಬಸವರಾಜನ್, ಮುಖ್ಯ ಅತಿಥಿಗಳು: ಸಮಿತಿ ಖಜಾಂಚಿ ಡಾ. ಜಿ.ಎನ್. ಮಲ್ಲಿಕಾರ್ಜುನಪ್ಪ, ಸ್ಥಳ: ಕಾಲೇಜು ಆವರಣ, ಮಧ್ಯಾಹ್ನ 2ಕ್ಕೆ.

■ **ರಾಮಕೃಷ್ಣ ವಿದ್ಯಾಕೇಂದ್ರ ಸಂಯುಕ್ತ ಪದವಿಪೂರ್ವ ಕಾಲೇಜು:** ಕಾಲೇಜು ವಾರ್ಷಿಕೋತ್ಸವ, ಅಧ್ಯಕ್ಷತೆ : ಶ್ರೀರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ. ಪಾಪೇಗೌಡ, ಮುಖ್ಯ ಅತಿಥಿಗಳು : ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಂ. ಮರಿಸ್ವಾಮಿ, ಉಪಸ್ಥಿತರು : ಎಂ. ದೊರೆರಾಜು, ಹೆಚ್.ಕೆ. ಅಶೋಕ್‌ಕುಮಾರ್, ಕೆ. ಕೆಂಪಲಿಂಗರಾಜು, ಹೆಚ್.ಜಿ. ರಮೇಶ್, ಪ್ರೊ. ಜಿ. ಚಂದ್ರಶೇಖರ್, ಸಿ. ಶಿವಪ್ಪ, ಸ್ಥಳ: ಶ್ರೀ ಶಾರದಾ ಸಭಾಂಗಣ, ಮ. 2ಕ್ಕೆ.

■ **ಕಲಾಸುರುಚಿ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 810, ಕಥೆ ಹೇಳುವವರು: ಶ್ರೀಯುತ ಮುಕುಂದ ಪಿ, ನಿವೃತ್ತ ಮುಖ್ಯ ಶಿಕ್ಷಕರು, ತೀರ್ಥಹಳ್ಳಿ ಸೇವಾ ಭಾರತಿ ಶಾಲೆ ನಿವೃತ್ತ ಮುಖ್ಯ ಶಿಕ್ಷಕ, ಪಿ. ಮುಕುಂದ, ಸ್ಥಳ: ಸುರುಚಿ ರಂಗಮನೆ, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ.

■ **ಜನ ಚೈತನ್ಯ ಫೌಂಡೇಷನ್, ಜನಪರ ಸಂಘಟನೆಗಳು :** ವಕೀಲ ಕಾಮ್ರೆಡ್ ಇ. ರಾಮಪ್ಪ ಸ್ಮರಣಾರ್ಥ ನುಡಿನಮನ, ಪ್ರಸ್ತುತ ಸಂದರ್ಭದಲ್ಲಿ ಜನಪರ ಸಂಘಟನೆಗಳ ಪಾತ್ರ ಕುರಿತು ವಿಚಾರ ಸಂಕಿರಣ, ಅಧ್ಯಕ್ಷತೆ : ಆಲ್ ಇಂಡಿಯಾ ಪೀಪಲ್ಸ್ ಫೋರಂ ರಾಜ್ಯ ಸಂಚಾಲಕ ಡಾ. ವಿ. ಲಕ್ಷ್ಮೀನಾರಾಯಣ, ಮುಖ್ಯ ಅತಿಥಿಗಳು : ಎನ್. ದಿವಾಕರ, ಹರಿಹರ ಆನಂದಸ್ವಾಮಿ, ಪಿ.ಆರ್.ಎಸ್. ಮಣಿ, ಡಾ. ಇ. ರತಿರಾವ್, ಚೌಡಳ್ಳಿ ಜವರಯ್ಯ, ನಿಂಗರಾಜ್ ಮಲ್ಲಾಡಿ, ಸ್ಥಳ : ನೂತನ ಸಮುದಾಯ ಭವನ, ವಿದ್ಯಾರಣ್ಯಪುರಂ, ಸಂಜೆ 4.30ಕ್ಕೆ

■ **ಮೈಸೂರು ವಿಶ್ವವಿದ್ಯಾಲಯ, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ :** 74ನೇ ಸಂವಿಧಾನ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸಗಳ ಮಾಲಿಕೆ, ಮೈಸೂರು ವಿವಿ ಸಂಜೆ ಕಾಲೇಜು ಅತಿಥಿ ಉಪನ್ಯಾಸಕರಾದ ಡಾ. ಬಿ. ಶಿವಶಂಕರ ಅವರಿಂದ ಭಾರತದ ಸಂವಿಧಾನ ಮತ್ತು ರಾಜ್ಯನೀತಿ ನಿರ್ದೇಶಕ ತತ್ವಗಳು ಕುರಿತು ಉಪನ್ಯಾಸ, ಅಧ್ಯಕ್ಷತೆ : ವಿಶ್ವೇಶ್ವರನಗರ ಸರ್ಕಾರಿ ಸ್ನಾತಕೋತ್ತರ ಪುರುಷರ ವಿದ್ಯಾರ್ಥಿ ನಿಲಯ ಮೇಲ್ವಿಚಾರಕ ಕೆ. ಮಹೇಶ್, ಸ್ಥಳ: ವಿಶ್ವೇಶ್ವರನಗರ ಸರ್ಕಾರಿ ಸ್ನಾತಕೋತ್ತರ ಪುರುಷರ ವಿದ್ಯಾರ್ಥಿ ನಿಲಯ, ಸಂಜೆ 6ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ವಿಪ್ರಾನಂದ ಅವರಿಂದ ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ವಿಜಯ್ ಫೌಂಡೇಷನ್ :** ಪುಸ್ತಕಗಳ ಬಿಡುಗಡೆ ಸಮಾರಂಭ, ಶ್ರೀಮತಿ ನರ್ಮದಾ ಎನ್. ಪ್ರಭು ಅವರ ಇಂಗ್ಲಿಷ್ ಅನುವಾದಿತ ಕೃತಿ ಸರಳ ಭಗವದ್ಗೀತೆ, ಡಾ. ವಿ. ರಂಗನಾಥ್ ಮತ್ತು ಎಸ್. ವೆಂಕಟೇಶನ್ ಅವರ ಡಾ. ಬಿ.ಆರ್. ಪೈ ಅವರ ಜೀವನ ಚರಿತ್ರೆ–ಕನ್ನಡ ಮತ್ತು ಇಂಗ್ಲಿಷ್ ಸ್ಟ್ರೆಡಿಂಗ್ ಲೈಟ್, ಪುಸ್ತಕ ಬಿಡುಗಡೆ : ಆರ್ಷ ವಿದ್ಯಾಪೀಠದ ಸ್ವಾಮಿ ಚಿದ್ರೂಪಾನಂದ ಸರಸ್ವತಿ, ಸ್ಥಳ: ರೋಟರಿ ಕೇಂದ್ರ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ರಂಗರತ್ನಾಕರ :** ವೃತ್ತಿ ರಂಗಗೀತೆಗಳ ಗಾಯನ ಕಾರ್ಯಕ್ರಮ, ಉದ್ಘಾಟನೆ : ಶ್ರೀ ಶನೈಶ್ವರ ದೇವಸ್ಥಾನ ಅಭಿವೃದ್ಧಿ ಸಮಿತಿ ಅಧ್ಯಕ್ಷೆ ಶ್ರೀಮತಿ ವಿಜಯ ನಂಜುಂಡಯ್ಯ, ಅಧ್ಯಕ್ಷತೆ : ಸಮಿತಿ ಕಾರ್ಯದರ್ಶಿ ಡಾ. ಬಿ.ಎಸ್. ನರಕೇಸರಿ, ವಿದ್ವಾನ್ ಕಿರಗಸೂರು ರಾಜಪ್ಪ, ಮಹೇಶ್, ಬಾಗಳಿ, ಕು. ಭೂಮಿಕ, ಸುರಭಿ, ಎಚ್.ಎಸ್. ಗೋವಿಂದೇಗೌಡ, ಸಿದ್ದಲಿಂಗೇಗೌಡ ಚಿನಕುರುಳಿ, ಎಸ್. ಮಂಜುನಾಥ್ ಅವರಿಂದ ರಂಗಗೀತೆಗಳ ಗಾಯನ, ವಿದ್ವಾನ್ ಕಿರಗಸೂರು ರಾಜಪ್ಪ–ಹಾರ್ಮೋನಿಯಂ, ವಿದ್ವಾನ್ ಎಂ.ಎಸ್. ಜಯರಾಂ–ತಬಲ, ಪುರುಷೋತ್ತಮ–ಕ್ಲಾರಿಯೋನೆಟ್, ಸ್ಥಳ: ಶ್ರೀ ಶನೈಶ್ವರ ದೇವಸ್ಥಾನ, ರಾಮಕೃಷ್ಣನಗರ, ಸಂಜೆ 6 ರಿಂದ.

■ **ಕಲಾ ಸಂದೇಶ ಪ್ರತಿಷ್ಠಾನ :** 20ನೇ ವರ್ಷದ ಸಂಭ್ರಮದ ಅಂಗವಾಗಿ ಭರತನಾಟ್ಯ : ಭಾಗವತ ಮಾರ್ಗ, ಭರತನಾಟ್ಯ ಕಲಾವಿದ ಕೆ. ಸಂದೇಶ್ ಭಾರ್ಗವ್ ಅವರಿಂದ ಭರತನಾಟ್ಯ, ಪರಿಕಲ್ಪನೆ : ವಿದುಷಿ ಡಾ. ಜ್ಯೋತಿ ಶಂಕರ್, ನಟುವಾಂಗ : ವಿದುಷಿ ಡಾ. ವಸುಂಧರಾ ದೊರೆಸ್ವಾಮಿ, ಸಂಗೀತ ಸಂಯೋಜನೆ ಮತ್ತು ಗಾಯನ : ವಿದುಷಿ ಶ್ರೀಮತಿ ಕಾಂಚನ ಎಸ್. ಶ್ರೀರಂಜನಿ, ವಿದ್ವಾನ್ ಎಚ್.ಎಲ್. ಶಿವಶಂಕರಸ್ವಾಮಿ–ಮೃದಂಗ, ವಿದ್ವಾನ್ ಗೋಪಾಲ್ ವೆಂಕಟರಮಣ–ವೀಣೆ, ವಿದ್ವಾನ್ ನಿತೀಶ್ ಅಮ್ಮಣ್ಣಾಯ–ಕೊಳಲು, ವಿದ್ವಾನ್ ಎಚ್.ಎಲ್. ಅನಂತಕೃಷ್ಣ ಸ್ವಾಮಿ–ರಿದಂಪ್ಯಾಡ್, ಸ್ಥಳ:ಗಾನಭಾರತೀಯ ಶ್ರೀಮತಿ ರಮಾಬಾಯಿ ಗೋವಿಂದರಾವ್ ರಂಗಮಂದಿರ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6 ರಿಂದ.

■ **ಹೆಬ್ಬಾರ್ ಶ್ರೀ ವೈಷ್ಣವ ಸಭಾ (ಬೆಂಗಳೂರು), ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ (ಮೈಸೂರು) :** ಹೆಸರಾಂತ ಉಪನ್ಯಾಸಕರಾದ ವಿದ್ವಾನ್ ಎಂ.ಕೆ. ಶೆಲ್ವನಾರಾಯಣ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಕೃಷ್ಣಮೂರ್ತಿಪುರಂ ಶ್ರೀ ರಾಮ ಮಂದಿರ, ಕಾಂತರಾಜ ಅರಸ್ ರಸ್ತೆ, ಸಂಜೆ 6.15ರಿಂದ.

■ **ರಂಗಾಯಣ, ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ :** ಮೈಸೂರು ಸಂಕ್ರಾಂತಿ ರಂಗಹಬ್ಬ, ಉದ್ಘಾಟನೆ : ಹಿರಿತೆರೆ ನಿರ್ದೇಶಕ ಬಿ. ಸುರೇಶ್, ಅಧ್ಯಕ್ಷತೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಾದ ಡಾ. ಧರಣಿದೇವಿ ಮಾಲಗತ್ತಿ, ವಿಶೇಷ ಆಹ್ವಾನಿತರು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಬಲವಂತರಾವ್ ಪಾಟೀಲ್, ಮೈಸೂರಿನ ಅಭಿಯಂತರರು ತಂಡದಿಂದ ಸೂಳೆ ಸನ್ಯಾಸಿ ನಾಟಕ ಪ್ರದರ್ಶನ, ರಚನೆ : ಕೆ.ವಿ. ಸುಬ್ಬಣ್ಣ, ನಿರ್ದೇಶನ : ಮಂಜುನಾಥ್ ಬಡಿಗೇರ, ಸ್ಥಳ: ಭೂಮಿಗೀತ ರಂಗಾಯಣ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಸಿ.ಎಫ್.ಟಿ.ಆರ್.ಐ ಶೋಧ ಅನುಶೋಧ–ಪ್ರಾಯೋಜಿತ ಕಾರ್ಯಕ್ರಮ, ಪ್ರಸ್ತುತಿ– ಕೇಶವ ಪ್ರಕಾಶ್ ಎಂ.ಎನ್., 6.40 ಪದ ಸಂಸ್ಕೃತಿ–ಡಾ. ಟಿ.ವಿ. ಸತ್ಯನಾರಾಯಣ, 6.50 ರೈತರಿಗೆ ಸಲಹೆ, 7.15 ನಂದಿಸದಿರಿ ನಂದಾದೀಪ–ಪ್ರಾಯೋಜಿತ ಕಾರ್ಯಕ್ರಮ, 8.30 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ, 10.00 ವಿ. ವಂಶಿಧರ್ – ವೇಣುವಾದನ

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ, 1.20 ಭಾವಗೀತೆ–ಅಕ್ಷತಾ ಅಡೋಣಿ, 3.30 ಮಕ್ಕಳ ಮಂಟಪ–ಮುಖಾಮುಖಿ–ಗ್ರಂಥಾಲಯ ಬಳಕೆ–ಕಲಿಕೆ ಕುರಿತು ಮಕ್ಕಳ ಪ್ರಶ್ನೆಗಳಿಗೆ ಉತ್ತರಿಸಿದ್ದಾರೆ ಗ್ರಂಥಪಾಲಕಿ ಜೆ. ರಜನಿ. ಭಾಗವಹಿಸುವ ಮಕ್ಕಳು ಮೈತ್ರಿ ಮತ್ತು ಶಾನ್ ಗೌಡ, 4.00 ನಾಟಕ, 6.50 ಕೃಷಿರಂಗ–ತೋರಣ ಹೂರಣ–ವಾರದ ಗ್ರಾಮೀಣ ಕಾರ್ಯಕ್ರಮ, ಪ್ರಸ್ತುತಿ– ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ. ಮೈಸೂರ್ ಉಮೇಶ್, ಪರಾಗ–ಬೇಸಾಯದ ಬದುಕು ಸರಾಗ–ಬಾನುಲಿ ಸರಣಿ, 8.15 ಯುವವಾಣಿ–ಮೈಸೂರಿನ ವಿಜಯನಗರದಲ್ಲಿರುವ ಸದ್ವಿದ್ಯಾ ಸೆಮಿ ರೆಸಿಡೆನ್ಷಿಯಲ್ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಂದ ಕಾರ್ಯಕ್ರಮ ವೈವಿಧ್ಯ, 9.30 ಕಸ ವಿಲೇವಾರಿಯ ಕಾರ್ಮಿಕರು–ಮಾತನಾಡುತ್ತಾರೆ ಡಾ. ಪದ್ಮಶ್ರೀ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಪಂಡಿತ್ ಕುಮಾರ್ ಗಂಧರ್ವ –ಗಾಯನ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಜನವರಿ 13 ಶನಿವಾರ 2024
ಸಂಪುಟ: 44 | ಸಂಚಿಕೆ: 267 | ಪುಟಗಳು: 12
₹4
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಐದನೇ ಗ್ಯಾರಂಟಿ ಯುವನಿಧಿಗೆ ಚಾಲನೆ

ನಿರುದ್ಯೋಗ ನಿವಾರಣೆಗೆ ರಾಜ್ಯದೆಲ್ಲೆಡೆ ಉದ್ಯೋಗ ಮೇಳ

● ದೇಶ–ವಿದೇಶದಲ್ಲಿ ಉದ್ಯೋಗ ಕಲ್ಪಿಸುವ ಪ್ರಯತ್ನ ● ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ



ಶಿವಮೊಗ್ಗದಲ್ಲಿ ಐದನೇ ಗ್ಯಾರಂಟಿ ಯುವನಿಧಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಚಾಲನೆ ನೀಡಿದರು.

ಶಿವಮೊಗ್ಗ, ಜ.12(ಕೆಎಂಶಿ)– ನಿರುದ್ಯೋಗ ಸಮಸ್ಯೆ ಬಗೆಹರಿಸಲು ರಾಜ್ಯದೆಲ್ಲೆಡೆ ಉದ್ಯೋಗ ಮೇಳಗಳನ್ನು ಏರ್ಪಡಿಸಿ ದೇಶ–ವಿದೇಶಗಳಲ್ಲಿ ನಮ್ಮ ಯುವ ಜನರಿಗೆ ಉದ್ಯೋಗ ಕಲ್ಪಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದ್ದಾರೆ.

ದಶಕದ ಹಿಂದೆ ನೂರಕ್ಕೆ ಐದು ಮಂದಿ ನಿರುದ್ಯೋಗಿಗಳಾಗಿದ್ದರೆ, ಇಂದು ಅದರ ಪ್ರಮಾಣ ಶೇ.10.5ಕ್ಕೆ ಹೆಚ್ಚಳವಾಗಿದೆ. ಇದರಿಂದ ಯುವ ಸಮುದಾಯ ಆತಂಕ ಸ್ಥಿತಿಯಲ್ಲಿದೆ. ಇದನ್ನು ಮನಗಂಡು ನಾವು ಪದವಿ ಹಾಗೂ ಡಿಪ್ಲೊಮಾ ಪಡೆದ ನಿರುದ್ಯೋಗಿಗಳಿಗೆ ಯುವನಿಧಿ ಯೋಜನೆ ಜಾರಿಗೆ ತಂದು ಕ್ರಮವಾಗಿ ಮಾಸಿಕ 3,000 ಹಾಗೂ 1,500 ರೂ. ಉದ್ಯೋಗ ಭತ್ಯೆ ನೀಡುತ್ತಿದ್ದೇವೆ. ಶಿವಮೊಗ್ಗದಲ್ಲಿ ಸರ್ಕಾರದ ಐದನೇ ಮತ್ತು ಕೊನೆಯ ಗ್ಯಾರಂಟಿ ಯುವ ನಿಧಿ ಯೋಜನೆಗೆ ● 6ನೇ ಪುಟಕ್ಕೆ

ಜ.22ಕ್ಕೆ ಅಯೋಧ್ಯೆ ರಾಮಮಂದಿರ ಉದ್ಘಾಟನೆ: ಪ್ರಧಾನಿ ಮೋದಿ '11 ದಿನಗಳ ವಿಶೇಷ ವ್ರತ'



ನವದೆಹಲಿ, ಜ.12– ಜ.22 ರಂದು ಅಯೋಧ್ಯೆಯಲ್ಲಿ ರಾಮಮಂದಿರ ಉದ್ಘಾಟನ್ ಕಾರ್ಯಕ್ರಮಕ್ಕೆ ಮುನ್ನ ಪ್ರಧಾನಿ ನರೇಂದ್ರ ಮೋದಿ ಇಂದು ಶುಕ್ರವಾರ ದೇಶದ ಜನತೆಗೆ ಆಡಿಯೋ ಸಂದೇಶವನ್ನು ಬಿಡುಗಡೆ ಮಾಡಿದ್ದಾರೆ. ಅಯೋಧ್ಯೆಯಲ್ಲಿ ರಾಮ ಲಲ್ಲಾನ ಪ್ರಾಣ ಪ್ರತಿಷ್ಠಾಪನೆಗೆ ಇನ್ನು ಕೇವಲ 11 ದಿನಗಳು ಉಳಿದಿವೆ. ನಾನು ಕೂಡ ಈ ಪವಿತ್ರ ಸಂದರ್ಭಕ್ಕೆ ಸಾಕ್ಷಿಯಾಗುವುದು ● 6ನೇ ಪುಟಕ್ಕೆ

ಮೈಸೂರಲ್ಲಿ 'ಯುವನಿಧಿ'ಯಡಿ ಫಲಾನುಭವಿಗಳಿಗೆ ನಗದು ವರ್ಗಾವಣೆ

ಡಿಸಿ ಡಾ.ರಾಜೇಂದ್ರ ಚಾಲನೆ, 2,700 ನಿರುದ್ಯೋಗಿಗಳಿಗೆ ಹಣ ಪಾವತಿ

● ನಿರುದ್ಯೋಗ ಭತ್ಯೆ ದುಂದು ವೆಚ್ಚ ಮಾಡಬೇಡಿ ● ಡಿಜಿಟಲ್ ದುಶ್ಚಟಗಳಿಗೆ ದಾಸರಾಗಿ ಸಮಯ ವ್ಯರ್ಥ ಮಾಡಬೇಡಿ


ಮೈಸೂರು, ಜ.12(ಬಿಎಲ್‌ವೈ)– ಯುವನಿಧಿ ಯೋಜನೆಯಡಿ ನಿರುದ್ಯೋಗ ಭತ್ಯೆ ಪಡೆಯಲು ಮೈಸೂರು ಜಿಲ್ಲೆಯಲ್ಲಿ 2,700 ಮಂದಿ ನೋಂದಣಿ ಮಾಡಿಕೊಂಡಿದ್ದು, ಇಂದು ಅವರಿಗೆ ಹಣ ವರ್ಗಾವಣೆ ಮಾಡುವ ಕಾರ್ಯಕ್ಕೆ ವಿದ್ಯುಕ್ತವಾಗಿ ಚಾಲನೆ ದೊರೆಯಿತು.

ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಫಲಾನುಭವಿಗಳಿಗೆ ಸಾಂಕೇತಿಕವಾಗಿ ಹಣ ವರ್ಗಾವಣೆ ಮಾಡುವ ಮೂಲಕ ಯುವನಿಧಿ ಯೋಜನೆಗೆ ಚಾಲನೆ ನೀಡಿದರು. ಈ ವೇಳೆ ಮಾತನಾಡಿದ ಡಾ.ರಾಜೇಂದ್ರ ನಿರುದ್ಯೋಗಿ ಯುವಜನರಿಗೆ ಈ ಯೋಜನೆ ಅನುಷ್ಠಾನಗೊಳಿಸಿದ್ದು, ಪದವೀಧರರಿಗೆ 3,000 ರೂಪಾಯಿ ಹಾಗೂ ಡಿಪ್ಲೋಮಾ ಮಾಡಿದವರಿಗೆ 1,500 ರೂಪಾಯಿ ನೀಡಲಾಗುತ್ತಿದೆ. ಈ ಹಣವನ್ನು ಅರ್ಥಪೂರ್ಣವಾಗಿ ಬಳಕೆ ಮಾಡಿಕೊಳ್ಳಿ. ಯಾವುದೇ ಕಾರಣಕ್ಕೂ ● 6ನೇ ಪುಟಕ್ಕೆ



ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಫಲಾನುಭವಿಗಳಿಗೆ ಸಾಂಕೇತಿಕವಾಗಿ ಹಣ ವರ್ಗಾವಣೆ ಮಾಡುವ ಮೂಲಕ ಯುವನಿಧಿ ಯೋಜನೆಗೆ ಚಾಲನೆ ನೀಡಿದರು.

ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಭೇಟಿ ಮಾಡಿದ ಡಾ.ಎಸ್.ಎಲ್.ಭೈರಪ್ಪ



ಮೈಸೂರು, ಜ.12–ಮೈಸೂರಿನ ಖ್ಯಾತ ಕಾದಂಬರಿಕಾರರು ಹಾಗೂ ಪದ್ಮಭೂಷಣ ಪ್ರಶಸ್ತಿ ಪುರಸ್ಕೃತರಾದ ಡಾ.ಎಸ್.ಎಲ್.ಭೈರಪ್ಪ ಅವರು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರನ್ನು ಲಕ್ನೋದಲ್ಲಿ ಗುರುವಾರ ಭೇಟಿ ಮಾಡಿದರು.

ಈ ವೇಳೆ ಕುವೆಂಪು ಭಾಷಾ ಭಾರತಿ ಮಾಜಿ ಅಧ್ಯಕ್ಷರಾದ ಪ್ರೊ. ಪ್ರಧಾನ್ ಗುರುದತ್ತ ಅವರೊಂದಿಗಿದ್ದರು. ಮೈಸೂರಿನಿಂದ ಡಾ.ಎಸ್.ಎಲ್.ಭೈರಪ್ಪ ಮತ್ತು ಡಾ.ಪ್ರಧಾನ್ ಗುರುದತ್ತ ಅವರು, ವಿಚಾರ ಸಂಕಿರಣವೊಂದರಲ್ಲಿ ಭಾಗವಹಿಸಲು ಲಕ್ನೋಗೆ ತೆರಳಿದ್ದರು. ಆ ಸಂದರ್ಭದಲ್ಲಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರನ್ನು ಭೇಟಿಯಾಗಲು ಸಮಯ ಕೋರಿದ್ದರು. ಇದೊಂದು ಸೌಜನ್ಯಯುತ ಭೇಟಿಯಾಗಿದ್ದು, ಸಂತಸ ಹಂಚಿ ಕೊಂಡು, ಕೆಲವು ವಿಷಯ ಸಂಬಂಧ ಚರ್ಚಿಸಿದ್ದಾರೆ. ತಮ್ಮ ನಿಗದಿತ ಕಾರ್ಯಕ್ರಮದಂತೆ ಡಾ.ಭೈರಪ್ಪ ಮತ್ತು ಪ್ರೊ ಪ್ರಧಾನ್ ಗುರುದತ್ತ ಅವರು ಅಯೋಧ್ಯೆಯ ರಾಮ ಮಂದಿರಕ್ಕೂ ಭೇಟಿ ನೀಡಲಿದ್ದಾರೆ.

ರಸ್ತೆಯಲ್ಲಿ ಬೆಳೆ ಒಕ್ಕಣೆಯಿಂದ ಅನಾಹುತ

ಹುರುಳಿ ಸೆತ್ತೆ ಸಿಲುಕಿ ನ್ಯಾನೋ ಕಾರು ಅಗ್ನಿಗಾಹುತಿ; ಕಾರಿನಲ್ಲಿದ್ದ ಐವರು ಅಚ್ಚರಿ ರೀತಿ ಪಾರು



ಪೂರ್ಣ ಸಚಿತ್ರ ವರದಿ ಪುಟ–10

ನಕ್ಕರೆ ಅದೇ ಸ್ವರ್ಗ

ಗೆಳೆಯ : "ಬಾ ಈಜುಕೊಳಕ್ಕೆ ಹೋಗೋಣ, ಈಜೋಣ"
ಇನ್ನೊಬ್ಬ ಗೆಳೆಯ : "ಇಲ್ಲ, ಈಜು ಕಲಿಯುವವರಿಗೆ ನೀರಿನ ಹತ್ತಿರವೇ ಹೋಗಬಾರದು ಅಂತ ನಾನು ನಿರ್ಧರಿಸಿದ್ದೇನೆ!"

ಮೈಸೂರು ಮಿತ್ರ

ಶನಿವಾರ, 13 ಜನವರಿ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಜೀವನದ ಬೆಂಗಾಡಿನಲ್ಲಿ ಬೀಸುವ ತಂಗಾಳಿಯೆಂದರೆ ಸ್ನೇಹ ಒಂದೇ
–ರವೀಂದ್ರನಾಥ ಟಾಗೂರ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಆಟಕ್ಕೆ ತಕ್ಕವೇಶ, ದೇಶಕ್ಕೆ ತಕ್ಕ ಭಾಷೆ

ನಿಮ್ಮ ಪತ್ರಗಳು

ಹಾಲಿ ಶಾಸಕರು, ಮಂತ್ರಿಗಳು ಲೋಕಸಭೆಗೆ ಸ್ಪರ್ಧಿಸಬೇಕೆ?

ಮಾನ್ಯರೆ,

ಲೋಕಸಭಾ ಚುನಾವಣೆ ಸಮೀಪಿಸುತ್ತಿದೆ. ರಾಜಕೀಯ ಪಕ್ಷಗಳು ಗೆಲುವಿಗಾಗಿ ತಂತ್ರ–ಕುತಂತ್ರಗಳ ಮೊರೆ ಹೋಗುತ್ತಿವೆ. ಆ ನಿಟ್ಟಿನಲ್ಲಿ ಶತಾಯ ಗತಾಯ ಗೆಲ್ಲುವ ಕುದುರೆಗಳಿಗಾಗಿ ಅಳೆದು ತೂಗಿ ಸ್ಪರ್ಧಿಗಳನ್ನು ಆಯ್ಕೆ ಮಾಡಲಾಗುತ್ತಿದೆ. ಚುನಾವಣಾ ರಣತಂತ್ರ ನಿಪುಣರ ಸಲಹೆಯಂತೆ ಇದರಲ್ಲಿ ಒಂದು ಮಾರ್ಗ: ಹಾಲಿ ಶಾಸಕರು ಹಾಗೂ ಮಂತ್ರಿಗಳನ್ನು ಸ್ಪರ್ಧೆಗೆ ಇಳಿಸುವುದು, ಆಯ್ಕೆ ಆಗಿ ವರ್ಷವನ್ನೂ ಪೂರೈಸದ ಇವರನ್ನು ಮತ್ತೇ ಚುನಾವಣೆಗೆ ನಿಲ್ಲಿಸುವುದು ಎಷ್ಟು ಸರಿ?

ರಣತಂತ್ರಗಳಿಂದ ಗೆಲ್ಲುವ ಬದಲು ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಗೆಲವು ಸಾಧಿಸುವಂತಾಗಲಿ, ಹಾಲಿ ಶಾಸಕರು ಹಾಗೂ ಮಂತ್ರಿಗಳನ್ನು ನಿಲ್ಲಿಸಿ ಗೆಲ್ಲಿಸುವುದರಿಂದ ತೆರವುಗೊಂಡ ಸ್ಥಾನಗಳಿಗೆ ಮತ್ತೆ ಉಪ ಚುನಾವಣೆ ನಡೆಸಬೇಕಾಗುತ್ತದೆ. ಉಪ ಚುನಾವಣೆಗಳಿಂದ ಸರ್ಕಾರದ ಬೊಕ್ಕಸಕ್ಕೆ ಅನಾವಶ್ಯಕ ಖರ್ಚು ಮತ್ತು ಮಾನವ ದಿನಗಳ ಶಕ್ತಿಯು ವ್ಯರ್ಥ. ನಿಲ್ಲಸಲೇಬೇಕೆನ್ನುವ ಇರಾದೆ ಇದ್ದರೆ ಉಪ ಚುನಾವಣೆಯ ಖರ್ಚನ್ನು ಅವಧಿಗೆ ಮುಂಚೆ ಗೆದ್ದ ಕ್ಷೇತ್ರವನ್ನು ತೆರವು ಮಾಡಿದ ವ್ಯಕ್ತಿಯಿಂದ ಭರಿಸುವ ಕಾನೂನು ಜಾರಿ ಆಗಲಿ. ಹಾಗೆಯೇ ಪಕ್ಷಾಂತರ ಕಾನೂನಿನಲ್ಲೂ ಕೆಲವು ಬದಲಾವಣೆಗಳು ಆಗಬೇಕಾಗಿರುವುದು ಅವಶ್ಯಕವಾಗಿದೆ. ಅಧಿಕಾರ ಹಾಗೂ ಹಣಕ್ಕಾಗಿ ಪಕ್ಷದಿಂದ ಪಕ್ಷಕ್ಕೆ ನೆಗೆಯುವ ಪ್ರಕ್ರಿಯೆಯಲ್ಲಿ ಸುಧಾರಣೆ ಆಗಬೇಕಾಗಿದೆ. ಇದರ ಜೊತೆಗೆ ಸ್ವಸಾಮರ್ಥ್ಯದಿಂದಲೋ ಅಥವಾ ಇನ್ಯಾವುದೋ ಕಾರಣದಿಂದ ಮತ್ತೆ ಮತ್ತೆ ಗೆದ್ದು ಯುವಕರಿಗೆ ಅವಕಾಶ ಕೊಡದ ವ್ಯವಸ್ಥೆಯಲ್ಲಿ ಲೋಕಸಭೆ, ವಿಧಾನಸಭೆಗಳ ಪ್ರವೇಶಕ್ಕೆ ಮಿತಿ ಇರಲಿ ಮತ್ತು ಅಭ್ಯರ್ಥಿಯ ವಯೋಮಿತಿಯನ್ನು ನಿಗದಿಪಡಿಸಲಿ. ವಯೋಸಹಜವಾದ ಮರೆವು ಮತ್ತು ಇನ್ನಿತರೆ ಕಾಯಿಲೆಗಳು ಇದ್ದವರು ಸರ್ಕಾರ ನಡೆಸಲು ಅರ್ಹತೆ ಪಡೆದಿರುವುದು ದುರದೃಷ್ಟಕರ. ಇಂದಿನ ರಾಜಕೀಯ ಪಕ್ಷಗಳ ನಡುವಳಿಕೆಗಳನ್ನು ಗಮನಿಸಿದರೆ ಪ್ರಜಾಪ್ರಭುತ್ವದ ನಿಯಮಗಳಲ್ಲಿ ಕೆಲವು ಬದಲಾವಣೆಗಳು ಅನಿವಾರ್ಯ. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಪೂರ್ಣಾವಧಿಯ ಸರ್ಕಾರಗಳನ್ನು ಪಡೆಯುವುದು ಅಸಾಧ್ಯ!.

ಬಂಪರ್: ಉಪ ಚುನಾವಣೆಗಳು ನಡೆಯುವುದರಿಂದ ಆ ಕ್ಷೇತ್ರಗಳಿಗೆ ಇತಿಮಿತಿ ಇಲ್ಲದ ಹಾಗೆ ಅನುದಾನ ಹರಿದು ಬರುತ್ತದೆ. ಬಾರ್ ರೆಸ್ಟೋರೆಂಟ್‌ಗಳಲ್ಲಿ ವ್ಯಾಪಾರ ಜೋರಾಗಿರುತ್ತದೆ. ಕಪ್ಪು ಹಣ ಚಲಾವಣೆಗೆ ಹಾಗೂ ಬಹಳಷ್ಟು ಮಂದಿಗೆ ಕೆಲವು ತಿಂಗಳುಗಳು ಬಿಡುವಿಲ್ಲದ ಕೆಲಸ, ಉಪಚುನಾವಣೆಗಳು ಬೇಕೆನಿಸುತ್ತದೆ ಅಲ್ಲವೇ?.

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.

ಪ್ರಸ್ತುತವೆನಿಸುತ್ತಿದೆ "ವಿವೇಕ ಪರಂಪರೆ"

ಮಾನ್ಯರೆ,

ಸ್ವಾಮಿ ವಿವೇಕಾನಂದರ ಜನ್ಮದಿನದ ಹಿನ್ನೆಲೆಯಲ್ಲಿ ಅವರ ವಿಚಾರಧಾರೆಗಳು ಹಾಗೂ ತಾತ್ವಿಕ ಚಿಂತನೆಗಳನ್ನು ಪ್ರಸ್ತುತಗೊಳಿಸಿಕೊಂಡು ಈ ಕಾಲಘಟ್ಟದ ಧಾರ್ಮಿಕ ಬಿಕ್ಕಟ್ಟುಗಳನ್ನು ಪರಿಶೀಲಿಸಿ ಪರಿಹಾರವನ್ನು ಕಂಡುಕೊಳ್ಳುವುದು ಅಗತ್ಯ ಎನಿಸುತ್ತದೆ.

ದಾಸ್ಯದಿಂದ ಕುಗ್ಗಿ ಹೋಗಿದ್ದ ಯುವಕರನ್ನು ಎಬ್ಬಿಸಿ ಕರೆದು ಅವರ ನರ ನಾಡಿ ಮಾಂಸ ಖಂಡಗಳನ್ನು ಹುರಿಗೊಳಿಸಿದ ವಿವೇಕಾನಂದರು ಯುವಕರ ದಾರಿದೀಪವಾದರು. ಭಾರತದ ಧರ್ಮ, ಸಂಸ್ಕೃತಿ, ಇತಿಹಾಸ ಮತ್ತು ಪರಂಪರೆ ಏನೆಂಬುದನ್ನು ಜಗತ್ತಿಗೆ ತೋರಿಸಿಕೊಟ್ಟಂತ ವೀರ ಸನ್ಯಾಸಿ ಸ್ವಾಮಿ ವಿವೇಕಾನಂದರು.

ಪರರ ಧಾರ್ಮಿಕ ನಂಬಿಕೆಗಳನ್ನು ಸಹಾನುಭೂತಿಯಿಂದ ನೋಡುವುದೇ ಅತ್ಯವಶ್ಯಕವಾಗಿ ಬೇಕಾಗಿರುವ ಸಹಿಷ್ಣತೆಯ ಪ್ರಥಮ ಹೆಜ್ಜೆ ಎಂದು ಪ್ರತಿಪಾದಿಸಿದ ಸರ್ವಧರ್ಮ ಮಾನ್ಯವಾದ ಮಾನವೀಯ ಮರು ವ್ಯಾಖ್ಯಾನಕಾರರಾದ ವಿವೇಕರ ಪರಂಪರೆಯಲ್ಲಿ ಪ್ರಸ್ತುತ ಬಿರುಕುಗಳನ್ನು ಬೆಸೆಯಲು ಬೇಕಾಗಿರುವ ಅಂಶಗಳಿವೆ. ಧಾರ್ಮಿಕ ಸತ್ವವನ್ನು ವಿಮರ್ಶೆಗೆ ಒಡ್ಡಿದ ವಿವೇಕಾನಂದರ ವ್ಯಕ್ತಿತ್ವವೇ ನಮಗೆ ವಿರಾಟ್ ಸ್ವರೂಪವೇ ಅವರನ್ನು ಮಾನವ ಮಿತ್ರರನ್ನಾಗಿಸಿದೆ. ಇಂದಿನ ಯುವ ಪೀಳಿಗೆಗೆ ಸಮಾಜದ ಆರೋಗ್ಯ ಕಾಪಾಡುವ ಸರ್ವ ಧರ್ಮ ಸಹಿಷ್ಣತೆ ಪರಿಕಲ್ಪನೆಯನ್ನು ವಿವೇಕ ಪರಂಪರೆ ಅರಿತು ಮೈಗೂಡಿಸಿಕೊಳ್ಳಬೇಕಿದೆ. ಅಂತಹ ಮಹಾನ್ ಚೇತನ ನಮಗಿಂದು ಆದರ್ಶ ಪುರುಷರು.

– ಕೆ.ಎಸ್.ಸಿದ್ದರಾಜು, ಮಹಾರಾಜ ಕಾಲೇಜು, ಮೈಸೂರು

ಇದೇನು ಸರ್ಕಾರಿ ಆಸ್ಪತ್ರೆಯೋ ರೋಗ ಹರಡುವ ಕೇಂದ್ರವೋ?

ಮಾನ್ಯರೆ,

ಮೈಸೂರಿನ ಕೆ.ಆರ್. ಆಸ್ಪತ್ರೆ ಆವರಣ ವಿಶ್ವೇಶ್ವರಯ್ಯ ವೃತ್ತದ ಎದುರುಗಡೆ ತಿಳುವಳಿಕೆ ಕೆಲ ಅನಾಗರಿಕ ವ್ಯಕ್ತಿಗಳು ಕಾಂಪೌಂಡ್ ಗೋಡೆಗೆ ಮೂತ್ರ ವಿಸರ್ಜನೆ ಮಾಡುತ್ತಿದ್ದಾರೆ. ಇದರಿಂದ ಸಾರ್ವಜನಿಕರು, ಪಾದಚಾರಿಗಳಿಗೆ ದುರ್ವಾಸನೆ ಬೀರುತ್ತಿದೆ. ಆಸ್ಪತ್ರೆಗೆ ಭೇಟಿ ನೀಡುವ ರೋಗಿಗಳಿಗೆ ಅವರ ಕಡೆಯವರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ಸಂಬಂಧಪಟ್ಟವರು ಉಗ್ರ ಕ್ರಮ ಕೈಗೊಂಡು ಇದಕ್ಕೆಲ್ಲಾ ಕಡಿವಾಣ ಹಾಕಲು ಮನವಿ.

–ನೊಂದ ನಾಗರಿಕರು, ಮೈಸೂರು.

ಯುವನಿಧಿ ಯೋಜನೆಗೆ ಚಾಲನೆ ಸ್ವಾಗತಾರ್ಹ

ಮಾನ್ಯರೆ,


ಪ್ರಸ್ತುತ ಕರ್ನಾಟಕ ಸರ್ಕಾರ ಗೃಹಜ್ಯೋತಿ, ಗೃಹಲಕ್ಷ್ಮಿ, ಅನ್ನಭಾಗ್ಯ ಮತ್ತು ಶಕ್ತಿ ಯೋಜನೆಯನ್ನು ಜಾರಿಗೊಳಿಸಿದೆ. ಈಗ ವಿದ್ಯಾವಂತ ಉದ್ಯೋಗವಿಲ್ಲದ ಯುವ ಜನರಿಗೆ ಯುವನಿಧಿ ಯೋಜನೆಯನ್ನು ಜಾರಿಗೊಳಿಸಿದ್ದು, ಉತ್ತಮ ಬೆಳವಣಿಗೆಯಾಗಿದೆ. ಈ ಹಣ ಬಡ ನಿರುದ್ಯೋಗಿಗಳಿಗೆ ಉದ್ಯೋಗ ಹುಡುಕಿಕೊಳ್ಳಲು ನೆರವಾಗುವುದರಲ್ಲಿ ಯಾವುದೇ ಸಂಶಯವಿಲ್ಲ.

ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ "ಯುವನಿಧಿ" ಯೋಜನೆ 2022–23 ಸಾಲಿನಲ್ಲಿ ಪದವೀಧರರಿಗೆ ಮಾಸಿಕ 3000 ರೂ ಮತ್ತು ಡಿಪ್ಲೊಮಾ ಪದವೀಧರರಿಗೆ ಮಾಸಿಕ 1500 ರೂಗಳನ್ನು ನೀಡುವ ಈ ಯೋಜನೆ ಎಲ್ಲಾ ಯುವ ಜನತೆಗೆ ತಲುಪಿದರೆ ಅನುಕೂಲವಾಗುತ್ತದೆ.

ಯುವನಿಧಿ ಯೋಜನೆಯನ್ನು ಸೀಮಿತ ಅವಧಿಗೆ ಅಂದರೆ ಒಂದು ವರ್ಷದ ಅವಧಿಗೆ ಎಲ್ಲಾ ಬಡ ವಿದ್ಯಾವಂತರಿಗೆ ವಿಸ್ತರಿಸಿದರೆ ಅವರಿಗೆ ಅನುಕೂಲವಾಗುತ್ತದೆ. ಈ ಯೋಜನೆಯನ್ನು ಕೇವಲ 2022–23ನೇ ಸಾಲಿನ ವಿದ್ಯಾರ್ಥಿಗಳಿಗೆ ಸೀಮಿತಗೊಳಿಸದೆ ಕಳೆದ ಐದು ವರ್ಷಗಳ ಎಲ್ಲಾ ಪದವೀಧರರನ್ನು ಈ ಯೋಜನೆಯ ವ್ಯಾಪ್ತಿಯಲ್ಲಿ ತರಬೇಕು ಮತ್ತು ಅವರ ಆದಾಯ ಪ್ರಮಾಣವನ್ನು ಪರಿಗಣಿಸಿ ಬಡತನ ರೇಖೆಗಿಂತ ಕೆಳಗಿರುವ ನಿರುದ್ಯೋಗಿಗಳನ್ನು ಈ ಯೋಜನೆಯ ವ್ಯಾಪ್ತಿಯಲ್ಲಿ ಸೇರಿಸಬೇಕು.

ಕರ್ನಾಟಕ ಸರ್ಕಾರದ ಯುವನಿಧಿ ಯೋಜನೆ ಉತ್ತಮ ಉದ್ದೇಶದ ಯೋಜನೆಯಾಗಿದ್ದು, 80 ದಶಕದಲ್ಲಿ ಅಂದಿನ ಸರ್ಕಾರ ನಿರುದ್ಯೋಗಿಗಳಿಗೆ ಸ್ಟೈಫಂಡ್ ರೂಪದಲ್ಲಿ 150 ರೂ.ಗಳನ್ನು ನೀಡಲಾಗುತ್ತಿದ್ದನ್ನು ಈ ಯೋಜನೆ ನೆನಪಿಗೆ ತರುತ್ತದೆ ಮತ್ತು ಈ ಯೋಜನೆಯನ್ನು ಜಾರಿಗೊಳಿಸಿದ ರಾಜ್ಯ ಸರ್ಕಾರಕ್ಕೆ ರಾಜ್ಯದ ವಿದ್ಯಾವಂತ ನಿರುದ್ಯೋಗಿ ಯುವಜನರ ಪರವಾಗಿ ಧನ್ಯವಾದಗಳು.

–ರಾಸುಮ ಭಟ್, ಸಂಶೋಧನಾ ವಿದ್ಯಾರ್ಥಿ, ಚಿಕ್ಕಮಗಳೂರು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ದಯವೇ ಧರ್ಮದ ಮೂಲವಯ್ಯಾ...!



"ಇತ್ತೀಚೆಗೆ ಸೈಬರ್ ಅಪರಾಧದ ಅವಾಂತರದಲ್ಲಿ ಜನರು ಲಕ್ಷಗಟ್ಟಲೆ ಹಣ ಕಳೆದುಕೊಳ್ಳುತ್ತಿದ್ದಾರೆ. ಹೀಗೆ ನಮ್ಮ ಹಣ ಯಾವಾಗ ನಮ್ಮಿಂದ ಮಾಯವಾಗುವುದೋ ಗೊತ್ತಿಲ್ಲ. ಇರುವಾಗ ಮಾನವೀಯತೆಯ ಆಧಾರದಲ್ಲಿ ಒಂದಷ್ಟು ಅಶಕ್ತರಿಗೆ ಬೆಂಗಾವಲಾಗುವುದು ಪುಣ್ಯದ ಕೆಲಸ. ನಾವು ಬಿತ್ತಿದ್ದನ್ನೇ ಬೆಳೆಯುತ್ತೇವೆ, ಎಚ್ಚರವಿರಲಿ...

ನಾವೆಲ್ಲಾ ನಮ್ಮದೇ ಆದ ಜಗತ್ತು ಕಟ್ಟಿಕೊಂಡಿರುತ್ತೇವೆ. ಅಲ್ಲಿ ನಮ್ಮದೇ ಯೋಜನೆ, ಅನುಷ್ಠಾನ ಮಾಡುವವರೂ ನಾವೇ. ಆದರೂ ಕೆಲವೊಮ್ಮೆ ನಮ್ಮ ನಿರ್ಧಾರಗಳು ತಪ್ಪಾಗಿಬಿಡುತ್ತವೆ. ಆದರೆ ನಮ್ಮ ಅಹಂ ಅದನ್ನು ತಕ್ಷಣಕ್ಕೆ ಒಪ್ಪುವುದಿಲ್ಲ. ನಾನು ಮಾಡಿದ್ದೇ ಸರಿ ಎನ್ನುವ ಮನೋಭಾವ ನಮ್ಮ ಕೆಲಸಗಳನ್ನು ಹಲವು ಸಲ ಸಂದಿಗ್ಧತೆಗೆ ಸಿಲುಕಿಸಿಬಿಡುತ್ತವೆ. ಅಂತಹ ಸಮಯದಲ್ಲಿ ನಮ್ಮ ನಿರ್ಧಾರ ಹಾಗೂ ಮನೋಭಾವವನ್ನು ಕೊಂಚ ಬದಲಿಸಿಕೊಳ್ಳಬೇಕಾಗುತ್ತದೆ.

ಮನುಷ್ಯರೆಂದ ಮೇಲೆ ಪ್ರತಿಯೊಬ್ಬರಲ್ಲೂ ಮಾನವೀಯತೆ ಸಹಜವಾಗಿ ಇರುತ್ತದೆ. ಆದರೆ ನಮ್ಮ ಗಡಸುತನ ಅದನ್ನು ಮುಚ್ಚಿ ಮರೆ ಮಾಡಿರುತ್ತದೆ. ನಾನು ಬೇರೆಯವರಿಂದ ಸಹಾಯ, ಸಹಾನುಭೂತಿ ಅಪೇಕ್ಷಿಸಿದಂತೆ ಇತರರೂ ನಮ್ಮಿಂದ ಅಂತಹುದನ್ನು ಅಪೇಕ್ಷೆ ಪಡಬಹುದು. ಸಾಧ್ಯವಾದರೆ ನಾವು ಅದನ್ನು ಈಡೇರಿಸಬಹುದು. ಇಲ್ಲವೇ ಸಹಾಯ ಮಾಡಲಾಗದ ನಮ್ಮ ಅಸಹಾಯಕತೆಯನ್ನಾದರೂ ತಿಳಿಸಿ ನಯವಾಗಿ ಅದರಿಂದ ಹೊರಬರಬೇಕು. ಕೇವಲ ಕಾಟಾಚಾರಕ್ಕೆ ಆಯಿತು, ನೋಡೋಣ ಎಂಬ ಮಾತುಗಳು ಮತ್ತೊಬ್ಬನಲ್ಲಿ ನಿರೀಕ್ಷೆ ಹೆಚ್ಚು ಮಾಡುತ್ತದೆ. ಕಡೆಗೂ ನಾವು ಸಹಾಯ ಮಾಡದಿದ್ದಾಗ ಆ ವ್ಯಕ್ತಿಗೆ ಆಘಾತವಾಗುತ್ತದೆ. ಆದ್ದರಿಂದ ನಾವು ಒಂದಷ್ಟು ಪ್ರೀತಿ, ಸೌಜನ್ಯ ಬೆಳೆಸಿಕೊಳ್ಳಬೇಕು. ಆಗ ಮಾತ್ರ ನಮಗೆ ಸಂತೃಪ್ತಿಯ ಮಾನವ ಜೀವನ ಲಭಿಸುತ್ತದೆ. ಅದನ್ನು ಅನುಭವಿಸಿಯೇ ನಾವು ತಿಳಿದುಕೊಳ್ಳಬೇಕು.

ಇತ್ತೀಚೆಗೆ ಓದಿದ ಘಟನೆಯೊಂದು ಇಂತಹ ಆಲೋಚನೆಯನ್ನು ಪ್ರೇರೇಪಿಸಿತು. ಅದು ಮಾನವೀಯತೆ ಹಾಗೂ ಸೌಜನ್ಯತೆಯ ಅನಿವಾರ್ಯತೆಯನ್ನು ಅರಿವಾಗಿಸಿತು. 80 ವರ್ಷದ ಹಿರಿಯರೊಬ್ಬರ ಪ್ರೀತಿಯ ಮಗ ವಿದೇಶದಲ್ಲಿ ಉದ್ಯೋಗಸ್ಥ. ಮನೆ ನಿರ್ಮಾಣಕ್ಕೆ ತಮ್ಮ ತಂದೆಯ ಹೆಸರಿನಲ್ಲಿ ಬ್ಯಾಂಕಿನಿಂದ ಸಾಲ ಪಡೆದಿದ್ದ. ಕಂತು ಪಾವತಿಸಲು ಪ್ರತಿ ತಿಂಗಳು ತಂದೆಯ ಬ್ಯಾಂಕ್ ಖಾತೆಗೆ ಹಣ ಕಳುಹಿಸುತ್ತಿರುತ್ತಾನೆ. ಅದರಲ್ಲಿ ಇವರು ಬ್ಯಾಂಕಿನ ತಮ್ಮ ಸಾಲದ ಬಾಬ್ತು ಜಮಾ ಮಾಡುತ್ತಿರುತ್ತಾರೆ. ಎಂದಿನಂತೆ ತಮ್ಮ ಮಗನಿಂದ ಹಣ ಬಂದಿದೆಯೇ ಎಂದು ಪರಿಶೀಲಿಸಲು ಆ ಹಿರಿಯ ವ್ಯಕ್ತಿ ಬ್ಯಾಂಕ್‌ಗೆ ತೆರಳುತ್ತಾರೆ. ಗುಮಾಸ್ತನ ಬಳಿ ಹಣ ಬಂದಿದೆಯೇ? ಎಂದು ಕೇಳುತ್ತಾರೆ. ಆ ಗುಮಾಸ್ತ ಸ್ವಲ್ಪ ಸಿಟ್ಟಿನ ಸ್ವಭಾವದವನು. ಅವನು ಖಾತೆ ಪರಿಶೀಲಿಸಿ ನಿಮ್ಮ ಅಕೌಂಟಿನಲ್ಲಿರುವುದು ಸ್ವಲ್ಪವೇ ಹಣ. ನೀವು ಕಳೆದ ಎರಡು ತಿಂಗಳಿನಿಂದ ಸಾಲದ ಬಾಬ್ತು ಕಂತಿನ ಹಣ ಪಾವತಿಸಿಲ್ಲ. ಬಂದು ಬಂದು ಹಣ ಎಷ್ಟಿದೆ ಎಂದು ಕೇಳುತ್ತೀರಿ ಎಂದು ರೇಗುತ್ತಾನೆ.

ಇದರಿಂದ ಹಿರಿಯ ಜೀವಕ್ಕೆ ಒಂದು ಕ್ಷಣ ಆಘಾತವಾದರೂ 'ಇಲ್ಲ ನನ್ನ ಮಗ ಹಣ ಕಳುಹಿಸಿರುತ್ತಾನೆ, ಒಮ್ಮೆ ಸರಿಯಾಗಿ ನೋಡಿ' ಎನ್ನುತ್ತಾರೆ. ಇದರಿಂದ ಗುಮಾಸ್ತನ ಸಿಟ್ಟು ನೆತ್ತಿಗೇರುತ್ತದೆ. ಎಷ್ಟು ಸಲ ಹೇಳುವುದು, ನಿಮ್ಮ ಖಾತೆಯಲ್ಲಿ ಹಣ ಇಲ್ಲ, ಯಾವ ಹಣವೂ ಬಂದಿಲ್ಲ, ನಿಮ್ಮ ತಲೆ ಸರಿಯಿಲ್ಲವಾ? ನೀವು ಇನ್ನು ಎರಡು ತಿಂಗಳು ಸಾಲದ ಕಂತಿನ ಹಣ ಪಾವತಿಸದಿದ್ದರೆ ನಿಮ್ಮ ಮನೆಯನ್ನು ಜಪ್ತಿ ಮಾಡಬೇಕಾಗುತ್ತದೆ ಎಂದು ಜೋರಾಗಿ ಅರುಚಿದ. ಇದರಿಂದ ಹಿರಿಯ ಜೀವಕ್ಕೆ ಅವಮಾನವಾಯಿತು, ಕ್ಷಣಾರ್ಧದಲ್ಲಿ ಕಣ್ಣಾಲಿಗಳಲ್ಲಿ ನೀರು ತುಂಬಿಕೊಂಡಿತು. ಗುಮಾಸ್ತನ ಆರ್ಭಟ ಕೇಳಿದ ಇತರ ಗ್ರಾಹಕರು ಆ ಹಿರಿಯ ವ್ಯಕ್ತಿಯತ್ತ ನೋಡಿದರು. ಅದು ಒಂದು ರೀತಿಯ ತಿರಸ್ಕಾರದ ನೋಟವಾಗಿದ್ದು, ಅವರಿಗೆ ಮತ್ತಷ್ಟು ನೋವು ತಂದಿತು.

ಆದರೂ ಮಗನ ಮೇಲಿನ ನಂಬಿಕೆ ಅವರಲ್ಲಿ ಅಚಲವಾಗಿತ್ತು. ಬ್ಯಾಂಕಿನ ಒಂದು ಮೂಲೆಯಲ್ಲಿ ನಿಂತು ಮಗನ ಮೊಬೈಲ್ ನಂಬರಿಗೆ ಪದೇ ಪದೆ ಕರೆ ಮಾಡಿದರು. ಆದರೆ ಆ ಕಡೆಯಿಂದ ಯಾವ ಉತ್ತರವೂ ಬರಲಿಲ್ಲ. ಹತಾಶರಾಗಿ ಅಲ್ಲೇ ಕುಸಿದು ಕುಳಿತರು. ಆ ಹಿರಿಯರ ತೊಳಲಾಟವನ್ನು ಗಮನಿಸಿದ ಅದೇ ಬ್ಯಾಂಕಿನ ಮತ್ತೊಬ್ಬ ಸಿಬ್ಬಂದಿ, ಹತ್ತಿರ ಬಂದು 'ಅಜ್ಜ, ನಿಮ್ಮ ಮಗನ ನಂಬರ್ ಕೊಡಿ, ನಾನು ಕರೆ ಮಾಡಿ ಮಾತನಾಡಿ ಕೇಳುತ್ತೇನೆ' ಎಂದರು.

ಅವರು ನೀಡಿದ ನಂಬರಿಗೆ ಅವರು ಕರೆ ಮಾಡಿದಾಗ, ರಿಂಗಾಯಿತು. ಆ ಕಡೆಯಿಂದ ಒಬ್ಬ ಹೆಂಗಸು ಹಲೋ ಎಂದರು. ಬ್ಯಾಂಕ್ ಸಿಬ್ಬಂದಿ ಎಲ್ಲಾ ವಿಷಯ ತಿಳಿಸಿದರು. ಆಗ ಆ ಮಹಿಳೆ 'ನಾನು ಆ ವೃದ್ಧರ ಸೊಸೆ. ನನ್ನ ಗಂಡ, ತಂದೆಯ ಬಗ್ಗೆ ವಿಶೇಷ ಕಾಳಜಿ ಇದ್ದವರು. ಹಾಗಾಗಿ ಅವರ ಹೆಸರಿನಲ್ಲಿ ಮನೆ ಕಟ್ಟಿಸಿ ಪ್ರತಿ ತಿಂಗಳು ಹಣ ಪಾವತಿಸುತ್ತಿದ್ದರು. ಆದರೆ ಕಳೆದ ತಿಂಗಳು ಅವರು ಬೈಕ್ ಅಪಘಾತದಲ್ಲಿ ತೀರಿಕೊಂಡರು' ಎಂದು ಜೋರಾಗಿ ಅತ್ತಳು. ನನ್ನ ಮಾವನಿಗೆ ಇವರೊಬ್ಬರೇ ಮಗ. ಅವರಿಗೆ ಈಗ ಯಾರೂ ದಿಕ್ಕಿಲ್ಲ. ಮಗ ಸತ್ತಿದ್ದು, ಅವನಿಲ್ಲ ಎಂಬುದು ಯಾವುದೂ ಅವರಿಗೆ ನೆನಪಿಲ್ಲ. ಪದೇ ಪದೆ ಮಗನ ಈ ನಂಬರಿಗೆ ಕರೆ ಮಾಡುತ್ತಾರೆ. ನಾನು ಏನೆಂದು ಉತ್ತರಿಸಲಿ? ಹಾಗಾಗಿ ಅವರ ನಂಬರನ್ನು ಬ್ಲಾಕ್ ಮಾಡಿದ್ದೇನೆ. ಮನೆ ಸಾಲ ತೆಗೆದುಕೊಂಡು 14 ವರ್ಷಗಳಾಯಿತು. ಈ ವರ್ಷ ಅದು ಮುಗಿಯಬೇಕಿತ್ತು. ಆದರೆ ಈಗ ಅವರಿಲ್ಲ, ನಾನೇನು ಮಾಡಲಿ ಎಂದು ಮತ್ತಷ್ಟು ಜೋರಾಗಿ ಅಳಲಾರಂಭಿಸಿದರು. ಇದನ್ನು ಕೇಳಿದ ಬ್ಯಾಂಕ್ ಸಿಬ್ಬಂದಿ ಮನಸ್ಸು ಬಾರವಾಗಿ, ಅವರ ಕಣ್ಣಲ್ಲಿ ನೀರು ಜಿನುಗಿತು. ನಂತರ ಆ ವೃದ್ಧರ ಹತ್ತಿರ ಬಂದು ಬನ್ನಿ ಒಳಗೆ ಹೋಗೋಣ ಎಂದು ಕೌಂಟರಿನ ಹತ್ತಿರ ಕರೆದುಕೊಂಡು ಹೋದರು.

ಅವರು ಬಂದಿದ್ದನ್ನು ಗಮನಿಸಿದ ನಗದು ಗುಮಾಸ್ತ ಮತ್ತೆ ಸಿಟ್ಟಾದ. ಆದರೆ ಸಹೋದ್ಯೋಗಿ ಇವರ ಸಾಲದ ಸ್ಟೇಟ್‌ಮೆಂಟ್ ಕೊಡಿ ಎಂದು ಕೇಳಿ ಪಡೆದುಕೊಂಡು ಪರಿಶೀಲಿಸಿದರು. ಅದು 15 ವರ್ಷಕ್ಕೆ ಪಡೆದ ಸಾಲವಾಗಿತ್ತು. ಸಾಲ ತೀರಲು ಇನ್ನು ಆರು ಕಂತು ಮಾತ್ರ ಬಾಕಿ ಉಳಿದಿತ್ತು. ಅದರಲ್ಲಿ ಎರಡು ತಿಂಗಳ ಕಂತು ಕಟ್ಟಿರಲಿಲ್ಲ. ಆ ಉದ್ಯೋಗಿ ಎಲ್ಲವನ್ನೂ ಲೆಕ್ಕ ಹಾಕಿದರು. ಎಲ್ಲ ಸೇರಿದರೆ 98 ಸಾವಿರ ರೂಪಾಯಿ ಅಷ್ಟೇ ಬಾಕಿ ಇತ್ತು. ಅವರು ವೃದ್ಧರಿಗೆ ನಿಮ್ಮ ಮಗ ಈಗ ಹಣ ಕಳುಹಿಸಿದ್ದಾರೆ. ನಿಮಗೆ ಇನ್ನೊಂದು ಶುಭ ಸುದ್ದಿ ಎಂದರೆ ನಿಮ್ಮ ಬಾಕಿ ಕಂತಿನ ಎಲ್ಲ ಹಣ ಕಳುಹಿಸಿದ್ದಾರೆ ಎಂದರು. ಈಗ ನಿಮ್ಮ ಸಾಲ ಮುಕ್ತಾಯವಾಗುತ್ತದೆ. ಇನ್ನು ನೀವು ನಿಶ್ಚಿಂತೆಯಿಂದ ಇರಬಹುದು ಎನ್ನುತ್ತಾರೆ. ಆಗ ಗುಮಾಸ್ತ ವೃದ್ಧರ ಲೆಕ್ಕ ನೋಡುತ್ತಾನೆ, ಯಾವ ಹಣವೂ ಬಂದಿರುವುದಿಲ್ಲ. ನಿಮಗೇನು ಹುಚ್ಚು ಹಿಡಿದಿದೆಯೇ? ಹಣ ಬಂದಿಲ್ಲದಿದ್ದರೂ ಬಂದಿದೆ ಎಂದು ಅವರಿಗೆ ಹೇಳಿದಿರಲ್ಲ ಎಂದ.

ಈ ಘಟನೆಯನ್ನು ಇಡೀ ಬ್ಯಾಂಕಿನ ಸಿಬ್ಬಂದಿ ಗಮನಿಸುತ್ತಿದ್ದರು. ಅದಕ್ಕೆ ಈ ವ್ಯಕ್ತಿ ಹೇಳಿದ. ನನಗೆ ಹುಚ್ಚು ಹಿಡಿದಿದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ತೀರಿ ಹೋಗಿರುವ ಮಗ ಇದ್ದಾನೆಂದು ಅವರು ಭಾವಿಸಿದ್ದಾರೆ. ಆ ತಂದೆ ಅವರ ಮಗನ ಮೇಲೆ ಇಟ್ಟಿರುವ ವಿಶ್ವಾಸವನ್ನು ಉಳಿಸಬೇಕೆಂದು ನನ್ನ ಮನಸ್ಸು ಹೇಳುತ್ತಿದೆ. ಏಕೆಂದರೆ ಅವರು ಒಬ್ಬ ತಂದೆಯಾಗಿ ಮಾತ್ರ ನನಗೆ ಕಾಣುತ್ತಿದ್ದಾರೆ. ಅವರು ಯಾರ ತಂದೆಯಾದರೇನು? ಅವರು ಅವರ ಮಗನ ಮೇಲಿಟ್ಟಿರುವ ವಿಶ್ವಾಸ ಹಾಗೂ ಹಣ ಬಂದಿದೆ ಎಂದು ನಾನು ಹೇಳಿದಾಗ ಅವರ ಮುಖದಲ್ಲಿ ಕಂಡ ಸಂತೋಷದ ಮುಂದೆ ಈ ಲಕ್ಷ ರೂಪಾಯಿ ನನಗೆ ದೊಡ್ಡದಾಗಿ ಕಾಣುತ್ತಿಲ್ಲ. ಅವರ ಪಾಲಿನ ಹಣ ನಾನು ಪಾವತಿಸುತ್ತೇನೆ ಎಂದು ಚೆಕ್ ತರಲು ತನ್ನ ಮನೆಯ ಕಡೆ ನಡೆದರು. ಅವರು ವಾಪಸ್ಸು ಬಂದಾಗ ಅಲ್ಲಿದ್ದ ಸುಮಾರು 20–22 ಸಿಬ್ಬಂದಿ ಎದ್ದುನಿಂತು ಚಪ್ಪಾಳೆ ತಟ್ಟುತ್ತಿದ್ದರು. ಅವರು ತಾವು ಸಂಗ್ರಹಿಸಿದ್ದ ಸುಮಾರು 73 ಸಾವಿರ ರೂಪಾಯಿಯನ್ನು ಇವರ ಟೇಬಲ್ಲಿನ ಮೇಲಿಟ್ಟರು. ಆ ವೃದ್ಧರಿಗೆ ಬೈದಿದ್ದ ಗುಮಾಸ್ತನೂ ಕಣ್ಣೀರು ಹಾಕುತ್ತಾ, ನನ್ನ ಪಾಲು ಎಂದು ಏಳು ಸಾವಿರ ನೀಡಿದ. ಇದರಿಂದ ಎಂಬತ್ತು ಸಾವಿರ ಸಂಗ್ರಹವಾದಂತಾಯಿತು. ಆ ಉದ್ಯೋಗಿ ಉಳಿದ ಹಣಕ್ಕೆ ಚೆಕ್ ಬರೆಯಲು ಮುಂದಾದಾಗ ಒಂದು ಕೈ ಅವರ ಹೆಗಲ ತಟ್ಟಿತು. ತಿರುಗಿ ನೋಡಿದರೆ ಅವರು ಆ ಬ್ಯಾಂಕ್ ಶಾಖೆಯ ಮ್ಯಾನೇಜರ್. ನನ್ನನ್ನು ಬಿಟ್ಟು ನೀವೇ ಪುಣ್ಯ ಹಂಚಿಕೊಂಡರೆ ಹೇಗೆ? ನನ್ನ ಪಾಲೂ ಇರಲಿ ಎಂದು ಹತ್ತು ಸಾವಿರದ ಚೆಕ್ ನೀಡಿದರು. ಒಟ್ಟಿನಲ್ಲಿ ಎಲ್ಲರೂ ಸೇರಿ ಆ ವೃದ್ಧರ ಸಾಲದ ಬಾಕಿ ಹಣ ಚುಕ್ತಾ ಮಾಡಿದರು. ಆ ವೃದ್ಧರು ಮಗನ ಮೇಲಿಟ್ಟಿದ್ದ ವಿಶ್ವಾಸ ಉಳಿಸಿದ ಹೆಮ್ಮೆ ಅವರೆಲ್ಲರ ಮುಖದ ಮೇಲೆ ಕಾಣುತ್ತಿತ್ತು.

ಇದು ಒಂದು ಅಪರೂಪದ ಭಾವನಾತ್ಮಕ ಪ್ರಸಂಗ. ಇಂತಹ ಪ್ರಸಂಗಗಳು ಅಲ್ಲಲ್ಲಿ ನಡೆಯುತ್ತಿರುತ್ತವೆ. ಅನೇಕರು ತಾವು ಮಾಡಿದ ಸಹಾಯ ದೊಡ್ಡದೇನಲ್ಲ, ಅದೊಂದು ಸಾಮಾಜಿಕ ಕರ್ತವ್ಯ ಎಂದು ಭಾವಿಸಿ ಯಾವುದೇ ಪ್ರಚಾರ ಪಡೆಯುವುದಿಲ್ಲ. ಒಬ್ಬರಿಗೆ ಅವಶ್ಯಕತೆ ಇದೆ ಎಂದಾದಾಗ ಹಾಗೂ ಅದನ್ನು ಪೂರೈಸಲು ನನಗೂ ಶಕ್ತಿ ಇದೆ ಎಂದಾದಾಗ ಹಾಗೆ ಹಣ ನೀಡಿ ಕೃತಾರ್ಥತೆ ಮೆರೆಯುತ್ತಾರೆ. ಇದು ಜೀವನ. ನಮ್ಮಲ್ಲಿ ಕಂಡು ಬರುವ ವೃದ್ಧರು, ತೊಂದರೆಯಲ್ಲಿ ಸಿಲುಕಿದವರು, ಹರಕು ಬಟ್ಟೆ ಹಾಕಿಕೊಂಡವರಿಗೆ ನಾವು ಕನಿಕರಿಸಿ ಕೈಲಾದ ಸಹಾಯ ಮಾಡಬೇಕು ಎಂಬ ಮನೋಭಾವ ಈ ಕಾಲದಲ್ಲಿಯೂ ಜೀವಂತವಾಗಿದೆ. ನಾವು ಸಹಾಯ ಮಾಡಿದರೆ ಮುಂದೆ ಅಕಸ್ಮಾತ್ ನಮಗೂ ಅಂತಹ ಪ್ರಸಂಗ ಒದಗಿ ಬಂದರೆ, ಮತ್ತಾರೋ ನಮಗೂ ಸಹಾಯ ಮಾಡುತ್ತಾರೆ. 'ನೀ ನನಗಿದ್ದರೆ, ನಾ ನಿನಗೆ' ಎಂಬಂತೆ ಒಬ್ಬರಿಗೊಬ್ಬರು ಸಹಾಯಕರಾಗಿರಬೇಕು. ಹಣ ದೊಡ್ಡದಲ್ಲ. ಅದು ಇಂದು ನಮ್ಮಲ್ಲಿರಬಹುದು, ಆದರೆ ನಾಳೆ ಬಿಡಿಗಾಸೂ ಇಲ್ಲವಾಗಬಹುದು. ಅಂತಹ ಪರಿಸ್ಥಿತಿ ಸೃಷ್ಟಿಯಾಗಲು ಕಾರಣವೂ ಬೇಕಾಗುವುದಿಲ್ಲ.

ಇತ್ತೀಚೆಗೆ ಸೈಬರ್ ಅಪರಾಧದ ಅವಾಂತರದಲ್ಲಿ ಜನರು ಲಕ್ಷಗಟ್ಟಲೆ ಹಣ ಕಳೆದುಕೊಳ್ಳುತ್ತಿದ್ದಾರೆ. ಹೀಗೆ ನಮ್ಮ ಹಣ ಯಾವಾಗ ನಮ್ಮಿಂದ ಮಾಯವಾಗುವುದೋ ಗೊತ್ತಿಲ್ಲ. ಇರುವಾಗ ಮಾನವೀಯತೆಯ ಆಧಾರದಲ್ಲಿ ಒಂದಷ್ಟು ಅಶಕ್ತರಿಗೆ ಬೆಂಗಾವಲಾಗುವುದು ಪುಣ್ಯದ ಕೆಲಸ. ನಾವು ಬಿತ್ತಿದ್ದನ್ನೇ ಬೆಳೆಯುತ್ತೇವೆ, ಎಚ್ಚರವಿರಲಿ...

ಮೈಸೂರಲ್ಲಿ ವಿಕಸಿತ ಭಾರತ ಸಂಕಲ್ಪ ಯಾತ್ರೆ ಯಶಸ್ವಿ ಮುಕ್ತಾಯ

ನ.15, 2023ರಿಂದ ಜಿಲ್ಲೆಯ ವಿವಿಧ ಭಾಗಗಳಲ್ಲಿ ನಿರಂತರ ಅಭಿಯಾನ, ಜನರಿಗೆ ಮಾಹಿತಿ



ದೇಶಾದ್ಯಂತ ನಡೆಯುತ್ತಿದ್ದ ವಿಕಸಿತ ಭಾರತ ಸಂಕಲ್ಪ ಯಾತ್ರೆ ಅಭಿಯಾನವು ಮೈಸೂರಿನಲ್ಲಿಂದು ಯಶಸ್ವಿಯಾಗಿ ಮುಕ್ತಾಯಗೊಂಡಿದೆ.

ಮೈಸೂರು: ದೇಶಾದ್ಯಂತ ನಡೆಯುತ್ತಿರುವ ವಿಕಸಿತ ಭಾರತ ಸಂಕಲ್ಪ ಯಾತ್ರೆ ಅಭಿಯಾನವು ಮೈಸೂರಿನಲ್ಲೂ ಬುಡಕಟ್ಟು, ಗ್ರಾಮೀಣ, ನಗರ ಪ್ರದೇಶಗಳಲ್ಲಿ ಆಯೋಜನೆಗೊಂಡು ಇಂದು ಯಶಸ್ವಿಯಾಗಿ ಮುಕ್ತಾಯಗೊಂಡಿದೆ.

ಕೇಂದ್ರ ಸರ್ಕಾರದ ಹಲವು ಜನಪರ ಯೋಜನೆಗಳಿಂದ ಯಾವೊಬ್ಬ ನಾಗರಿಕನೂ ವಂಚಿತರಾಗಬಾರದೆಂಬ ಉದ್ದೇಶದಿಂದ ನಡೆಯುತ್ತಿರುವ ವಿಕಸಿತ ಭಾರತ ಸಂಕಲ್ಪ ಯಾತ್ರೆಯು ಜನರ ಮನೆ ಬಾಗಿಲಿಗೆ ಯೋಜನೆಗಳನ್ನು ತಲುಪಿಸುವ ಕುರಿತು ಕಾರ್ಯಕ್ರಮ ಹಮ್ಮಿಕೊಂಡು ಮಾಹಿತಿ ನೀಡಲಾಯಿತು.

ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳ ವತಿಯಿಂದ ಪ್ರತಿಯೊಂದು ಯೋಜನೆಗಳ ಕುರಿತು ಜನರಿಗೆ ಮಾಹಿತಿಯನ್ನು ತಲುಪಿಸುವುದು ಹಾಗೂ ಈ ಯೋಜನೆಗಳ ಫಲಾನುಭವಿಗಳಾಗಲು ಜನಜಾಗೃತಿ ಮೂಡಿಸುವ ಉದ್ದೇಶದಿಂದ ಮೈಸೂರಿನಲ್ಲಿ ನವೆಂಬರ್ 15, 2023ರಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ವಿಕಸಿತ ಭಾರತ ಸಂಕಲ್ಪ ಯಾತ್ರೆಯನ್ನು ಉದ್ಘಾಟಿಸಿದರು. ಅಲ್ಲಿಂದ ಹೊರಟ ಈ ರಥಯಾತ್ರೆಯು ಜಿಲ್ಲೆಯ ಗಮನಾರ್ಹ ಬುಡಕಟ್ಟು ಜನಸಂಖ್ಯೆಯನ್ನು ತಲುಪುವ ನಿಟ್ಟಿನಲ್ಲಿ ಮೊದಲ ಹಂತದಲ್ಲಿ ಬುಡಕಟ್ಟು ಪ್ರದೇಶಗಳಲ್ಲಿ ಹೆಚ್ಚಿನ ಕಾರ್ಯಕ್ರಮವನ್ನು ನಡೆಸಲಾಯಿತು.

ಕೃಷಿ, ಆರೋಗ್ಯ, ಕ್ರೀಡೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬ್ಯಾಂಕ್‌ಗಳು, ಬುಡಕಟ್ಟು ಸಚಿವಾಲಯ ಹೀಗೆ ಕೇಂದ್ರ ಸರ್ಕಾರದ ಹಲವು ಇಲಾಖೆಗಳಿಂದ ಯಾವೆಲ್ಲ ಯೋಜನೆಗಳು ಜನರನ್ನು ತಲುಪುತ್ತಿವೆ ಎಂಬ ಕುರಿತು ಮಾಹಿತಿಯನ್ನು ನೀಡಲಾಯಿತು.

ಬುಡಕಟ್ಟು ಜನರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುವ ಸಿಕಲ್ ಸೆಲ್ ಅನಿಮೀಯದಂತಹ ಆರೋಗ್ಯ ಸಮಸ್ಯೆಗೆ ಉಚಿತ ಆರೋಗ್ಯ ಶಿಬಿರಗಳನ್ನು ಆ ಪ್ರದೇಶಗಳಲ್ಲಿ ನಡೆಸಲಾಯಿತು. ಗ್ರಾಮೀಣ ಪ್ರದೇಶದ ಜನರನ್ನು ಗಮನದಲ್ಲಿಟ್ಟುಕೊಂಡು ಪರಿಚಯಿಸಿರುವ ಕಿಸಾನ್ ಕ್ರೆಡಿಟ್ ಕಾರ್ಡ್, ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್, ಪ್ರಧಾನಮಂತ್ರಿ ವಿಶ್ವ ಕರ್ಮ, ಪ್ರತಿ ಮನೆಗೂ ನಲ್ಲಿ, (ಹರ್ ಘರ್ ಜಲ್– ಜಲಜೀವನ್ ಮಿಷನ್), ನ್ಯಾನೋ ರಸಗೊಬ್ಬರ, ಪ್ರಧಾನಮಂತ್ರಿ ಆವಾಸ್ ಯೋಜನೆ (ಗ್ರಾಮೀಣ) ಸೇರಿದಂತೆ ಒಟ್ಟು 17 ಕೇಂದ್ರ ಸರ್ಕಾರದ ಯೋಜನೆಗಳನ್ನು ಈ ವಿಕಸಿತ ಭಾರತ ಸಂಕಲ್ಪ ಯಾತ್ರೆಯಲ್ಲಿ ಜಾಗೃತಿ ಮೂಡಿಸಲಾಯಿತು. ಮೈಸೂರು ಜಿಲ್ಲೆಯಾದ್ಯಂತ ಪ್ರತಿ ದಿನ ಎರಡು ಗ್ರಾಮ ಪಂಚಾಯಿತಿಯನ್ನು ಒಳಗೊಂಡಂತೆ ಒಟ್ಟು 256 ಗ್ರಾಮ ಪಂಚಾಯಿತಿಗಳಲ್ಲಿ ಈ ಕಾರ್ಯಕ್ರಮ ನಡೆಸಲಾಯಿತು. ಕೇಂದ್ರದ ರಾಜ್ಯ ಸಚಿವೆ ಶ್ರೀಮತಿ ಮೀನಾಕ್ಷಿ ಲೇಖಿ, ಸಂಸದ ಪ್ರತಾಪ್ ಸಿಂಹ, ಶಾಸಕ ಶ್ರೀವತ್ಸ ಸೇರಿದಂತೆ ಹಲವು ಜನಪ್ರತಿನಿಧಿಗಳು, ಉನ್ನತ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಮೈಸೂರು ನಗರದಲ್ಲೂ ವ್ಯಾಪಕ ಅರಿವು: ಮೈಸೂರು ನಗರ ಪ್ರದೇಶದಲ್ಲಿ ಡಿಸೆಂಬರ್ 16ರಂದು ಆರಂಭವಾದ ವಿಕಸಿತ ಭಾರತ ಸಂಕಲ್ಪ ಯಾತ್ರೆಯು ಒಟ್ಟು 54 ನಗರ ಪ್ರದೇಶ ಹಾಗೂ ಬಡಾವಣೆಗಳಲ್ಲಿ ಯಶಸ್ವಿಯಾಗಿ ಕಾರ್ಯಕ್ರಮ ನಡೆಯಿತು.

ನಗರವಾಸಿಗಳಿಗೆ ಪರಿಚಯಿಸಿರುವ ಕೇಂದ್ರ ಸರ್ಕಾರದ ಯೋಜನೆಗಳಾದ ಪಿಎಂ ಸ್ವನಿಧಿ, ಪಿಎಂ ಮುದ್ರಾ, ಸ್ಟಾರ್ಟ್ ಅಪ್ ಇಂಡಿಯಾ, ಸ್ವಚ್ಛ ಭಾರತ ಅಭಿಯಾನ, ಡಿಜಿಟಲ್ ಪಾವತಿ ಮೂಲ ಸೌಕರ್ಯ, ಖೇಲೋ ಇಂಡಿಯಾ, ಉಡಾನ್, ವಂದೇ ಭಾರತ್ ರೈಲು ವ್ಯವಸ್ಥೆ ಮುಂತಾದ ಒಟ್ಟು 17 ಕೇಂದ್ರ ಸರ್ಕಾರದ ಯೋಜನೆಗಳ ಈ ವಿಕಸಿತ ಭಾರತ ಸಂಕಲ್ಪ ಯಾತ್ರೆಯಲ್ಲಿ ಮಾಹಿತಿ ನೀಡಲಾಯಿತು. ಬ್ಯಾಂಕ್ ಮೂಲಕ ಜನರಿಗೆ ಲಭ್ಯವಾಗುತ್ತಿರುವ ಜೀವನ ಜ್ಯೋತಿ ಹಾಗೂ ಸುರಕ್ಷಾ ವಿಮೆ ಯೋಜನೆಗಳು, ಅಟಲ್ ಪಿಂಚಣಿ ಯೋಜನೆ, ಜನ್ಧನ್ ಯೋಜನೆ ಸಾಕಷ್ಟು ಜನರ ಬದುಕನ್ನು ಕಟ್ಟಿಕೊಟ್ಟಿದೆ ಎಂದು ಮೈಸೂರಿನ ಲೀಡ್ ಬ್ಯಾಂಕ್ ವ್ಯವಸ್ಥಾಪಕ ನಾಗೇಶ್ ವಿ.ಎನ್. ತಿಳಿಸಿದರು.

ವಿಕಸಿತ ಭಾರತ ಸಂಕಲ್ಪ ಯಾತ್ರೆಯಲ್ಲಿ ಮೈಸೂರಿನ ಪ್ರತಿಯೊಂದು ಕಡೆ ಸಂಚರಿಸುತ್ತಿದ್ದ ಎಲ್‌ಇಡಿ ಸ್ಕ್ರೀನ್ ಹೊಂದಿರುವ ಮಾಹಿತಿ ವಾಹನವು ಪ್ರಧಾನಮಂತ್ರಿ ನರೇಂದ್ರ ಮೋದಿ ಸಂದೇಶ ಹಾಗೂ ಕೇಂದ್ರ ಸರ್ಕಾರದ ಯೋಜನೆಗಳು ಯಾವೆಲ್ಲ ವರ್ಗದವರಿಗೆ ಲಭ್ಯವಿವೆ ಎಂಬ ಮಾಹಿತಿ ಇರುವ ವೀಡಿಯೋಗಳನ್ನು ಪ್ರತಿ ಕಾರ್ಯಕ್ರಮದಲ್ಲೂ ಪ್ರಸಾರ ಮಾಡಲಾಯಿತು. ಸೌದೆ ಒಲೆಯಿಂದ ಮಹಿಳೆಯರಿಗೆ ಮುಕ್ತಿ ಕೊಡುವ ಉಚಿತ ಗ್ಯಾಸ್ ಸಿಲಿಂಡರ್ ಒದಗಿಸುವ "ಉಜ್ವಲ" ಯೋಜನೆ ಮಳಿಗೆ ತೆರೆದು, ನೋಂದಣಿ ಮಾಡಿಸಿ ವಿತರಿಸಲಾಯಿತು. ಹಲವು ಕಡೆಗಳಲ್ಲಿ ಆರೋಗ್ಯ ಇಲಾಖೆ ವತಿಯಿಂದ ಆಯುಷ್ಮಾನ್ ಭಾರತ್ ಯೋಜನೆಯ ಕಾರ್ಡ್ ಮಾಡಿಸಲಾಯಿತು. ಕೆಲವು ಕಡೆಗಳಲ್ಲಿ ಆರೋಗ್ಯ ಇಲಾಖೆಯ ಸಿಬ್ಬಂದಿ ಉಚಿತ ಆರೋಗ್ಯ ತಪಾಸಣೆ ಶಿಬಿರ ನಡೆಸಿದರು. ಹಲವು ಪ್ರದೇಶಗಳಲ್ಲಿ ಆಧಾರ್ ನೋಂದಣಿ ಪ್ರಕ್ರಿಯೆ ಕೂಡ ವಿಕಸಿತ ಭಾರತ ಸಂಕಲ್ಪ ಯಾತ್ರೆಯಲ್ಲಿ ನೆರವೇರಿತು.

ಇಂದು ಪೂರ್ವಭಾವಿ ಸಭೆ

ಮೈಸೂರು, ಜ.12–ಚಿತ್ರದುರ್ಗದಲ್ಲಿ ಜ.28ರಂದು ನಡೆಯಲಿರುವ ಶೋಷಿತರ ಜಾಗೃತಿ ಸಮಾವೇಶದ ಪೂರ್ವಭಾವಿ ಸಭೆಯನ್ನು ಜ.13ರಂದು ಬೆಳಗ್ಗೆ 11 ಗಂಟೆಗೆ ಮೈಸೂರಿನ ಸಿದ್ಧಾರ್ಥ ನಗರದಲ್ಲಿರುವ ಕನಕ ಸಮುದಾಯ ಭವನದಲ್ಲಿ ಏರ್ಪಡಿಸಲಾಗಿದೆ ಎಂದು ಶೋಷಿತ ಸಮುದಾಯದ ಮುಖಂಡರೂ ಆದ ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ತಿಳಿಸಿದ್ದಾರೆ.

ಈ ಸಭೆಗೆ ಶೋಷಿತ ಸಮುದಾಯದ ರಾಜ್ಯ ಮಟ್ಟದ ಪದಾಧಿಕಾರಿಗಳು ಆಗಮಿಸುತ್ತಿರುವುದರಿಂದ ಮೈಸೂರು ಜಿಲ್ಲೆಯ ಶೋಷಿತ ಸಮುದಾಯಗಳ ಹಾಲಿ ಮತ್ತು ಮಾಜಿ ಜನಪ್ರತಿನಿಧಿಗಳು, ಮುಂಚೂಣಿ ಘಟಕದ ಅಧ್ಯಕ್ಷರುಗಳು, ಮುಖಂಡರುಗಳು ಸಭೆಗೆ ಆಗಮಿಸಿ ಸಲಹೆ–ಸೂಚನೆಗಳನ್ನು ನೀಡಬೇಕೆಂದು ಅವರು ಮನವಿ ಮಾಡಿದ್ದಾರೆ.

ಸಮ್ಮೇಳನದ ಬಗ್ಗೆ ಪೂರ್ವಭಾವಿ ಸಭೆ

ಮೈಸೂರು, ಜ.12(ಬಿಎಲ್‌ಯು)– ಮೈಸೂರಿನ ಚಾಮರಾಜ ಕ್ಷೇತ್ರದಲ್ಲಿ ಈ ಬಾರಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಲು ತೀರ್ಮಾನಿಸಿದ್ದು, ಈ ಸಂಬಂಧ ಚರ್ಚಿಸಲು ಜನವರಿ 13 ರಂದು ಪೂರ್ವಭಾವಿ ಸಭೆ ಕರೆಯಲಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್ ತಿಳಿಸಿದ್ದಾರೆ.

ಮೈಸೂರಿನ ವಿಜಯನಗರದ ಕನ್ನಡ ಸಾಹಿತ್ಯ ಭವನದಲ್ಲಿ ನಾಳೆ ಸಂಜೆ 4.30 ಗಂಟೆಗೆ ಸಭೆ ನಡೆಯಲಿದ್ದು, ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಸಮ್ಮೇಳನಕ್ಕೆ ಸೂಕ್ತ ಸಲಹೆ, ಮಾರ್ಗದರ್ಶನ ನೀಡುವಂತೆ ಮಡ್ಡಿಕೆರೆ ಗೋಪಾಲ್ ಕೋರಿದ್ದಾರೆ

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮಾಜಿ ಸಿಎಂ ಕುಮಾರಸ್ವಾಮಿ ಆಶೀರ್ವಾದ ಪಡೆದ ಸಂಸದ ಪ್ರತಾಪ್ ಸಿಂಹ

ಸರ್ಕಾರ ತಮ್ಮ ಕುಟುಂಬ ಟಾರ್ಗೆಟ್ ಮಾಡಿದಂತಹ ಸಂದರ್ಭದಲ್ಲಿ ತಮ್ಮ ಪರ ನಿಂತಿದ್ದಕ್ಕೆ ಕೃತಜ್ಞತೆ ಸಲ್ಲಿಕೆ





ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಶುಕ್ರವಾರ ಮಾಜಿ ಮುಖ್ಯಮಂತ್ರಿ ಹಾಗೂ ಜೆಡಿಎಸ್ ರಾಜ್ಯಾಧ್ಯಕ್ಷ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಬಿಡದಿ ಬಳಿ ಅವರ ತೋಟದ ಮನೆಯಲ್ಲಿ ಭೇಟಿಯಾಗಿ ಆಶೀರ್ವಾದ ಪಡೆದು, ಅವರನ್ನು ಅಭಿನಂದಿಸಿ, ಅವರೊಂದಿಗೆ ಕೆಲಕಾಲ ಚರ್ಚೆ ನಡೆಸಿದರು.

ಬೆಂಗಳೂರು, ಜ.12(ಕೆಎಂಶಿ)–ಮೈಸೂರು ಲೋಕಸಭಾ ಕ್ಷೇತ್ರದ ಹಾಲಿ ಸಂಸದ ಪ್ರತಾಪ್ ಸಿಂಹ ಜೆಡಿಎಸ್ ರಾಜ್ಯಾಧ್ಯಕ್ಷ ಹಾಗೂ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರನ್ನು ಶುಕ್ರವಾರ ಭೇಟಿ ಮಾಡಿ ಚರ್ಚೆ ನಡೆಸಿದರು. ಕಳೆದ ಎರಡು ಅವಧಿಗೆ ಈ ಕ್ಷೇತ್ರದಿಂದ ಸಂಸದರಾಗಿರುವ ಸಿಂಹ ಮತ್ತೆ ಇದೇ ಕ್ಷೇತ್ರದಿಂದ ಕಣಕ್ಕಿಳಿಯಲು ಸಜ್ಜಾಗಿದ್ದಾರೆ.

ಇತ್ತ ಮಾಜಿ ಸಚಿವ ವಿ.ಸೋಮಣ್ಣ ಕಳೆದ ವಾರ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಹಾಗೂ ಕುಮಾರ ಸ್ವಾಮಿ ಅವರನ್ನು ಭೇಟಿ ಮಾಡಿದ ಸಂದರ್ಭದಲ್ಲೂ ಪ್ರತಾಪ್ ಸಿಂಹ ವಿಷಯವೂ ಸೇರಿದಂತೆ ಹಲವು ವಿಚಾರ ಚರ್ಚೆ ಮಾಡಿದ್ದರು. ಸೋಮಣ್ಣ ಭೇಟಿ ನಂತರ ದೇವೇಗೌಡ ಮತ್ತು ಕುಮಾರಸ್ವಾಮಿ, ಅಕ್ರಮ ಮರ ಕಡಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಾಪ್ ಸಿಂಹ ಹಾಗೂ ಅವರ ಸಹೋದರನ ಪರ ಬ್ಯಾಟಿಂಗ್ ಮಾಡಿದ್ದರು.

ಎನ್‌ಡಿಎ ಕೂಟದಲ್ಲಿ ಭಾಗಿಯಾಗಿರುವ ಜೆಡಿಎಸ್ ಮೈಸೂರು ಕ್ಷೇತ್ರದಲ್ಲಿ ಕಣಕ್ಕಿಳಿಯುವ ಆಸಕ್ತಿ ತೋರಿಲ್ಲ. ಇದು ಸಿಂಹಗೆ ಬಲ ಬಂದಂತಾಗಿದೆ. ಕುಮಾರಸ್ವಾಮಿ ಇತ್ತೀಚೆಗೆ ತಮ್ಮ ಪರ ನಿಂತಿರುವುದನ್ನು ಮನಗಂಡ ಸಿಂಹ ಇಂದು ಬಿಡದಿ ತೋಟಕ್ಕೆ ತೆರಳಿ ಅವರ ಆಶೀರ್ವಾದ ಪಡೆದರು. ಮಾಡದ ತಪ್ಪಿಗೆ ಸರ್ಕಾರ ತಮ್ಮ ಕುಟುಂಬದ ಮೇಲೆ ಸೇಡಿನ ಮನೋಭಾವ ತೋರಿದ ಸಂದರ್ಭದಲ್ಲಿ ನೀವು ಮಧ್ಯ ಪ್ರವೇಶಿಸಿ ನಮ್ಮ ಬೆಂಬಲಕ್ಕೆ ಬಂದಿದ್ದು, ಆನೆಬಲ ಬಂದಂತಾಗಿದೆ ಎಂದು ಕೃತಜ್ಞತೆ ಸಲ್ಲಿಸಿದ್ದಾರೆ.

IN THE HIGH COURT OF KARNATAKA AT BENGALURU

Notice to the Respondent No.5 , Vide order dated:18.12.2023

R.F.A.No.1979/2019

Smt. Bhagya & Others, ...**Appellants**

(By Sri. S.M. Babu adv. for appellant) **V/s** Mariyamma Since dead by LRs. Sri. Chikkanna @ Narayanaswamy & Others

Respondents: (By Sriyuths: Y.K. Narayana Sharma and Y.V. Prakash advs. for C/R14 & 15)

To: Respondent: 05. SRI. RAMACHANDRA, S/O. SRI. CHIKKANNA, RESIDENTS OF BOGADI VILLAGE, KASABA HOBLI, MYSORE TALUK-570 026.

Appeal from the Judgment & Decree dated : 20.04.2019 passed in OS.No.886/2012 on the file of the IV Addl. Senior Civil Judge & J.M.F.C., Mysuru.

Notice is hereby given to you to appear in this court either in person or through Counsel duly instructed or through some one authorized by law, to act for you in the above appeal on 26.02.2024 in case you intend to contest the appeal. If you fail to appear, the same will be dealt with, heard and decided in your absence.

Issued under my hand and the seal of this court, this the 18TH DAY OF DECEMBER 2023.

BY ORDER OF THE COURT, Sd/- ASSISTANT REGISTRAR.

Sd/- S.M.Babu B.Sc., LL.B, Advocate.(KAR.425/1977). Office: # 480, 1st floor, Burugal Mutt Road, V.V.Puram, (Near NMH Hotel, Minarva Circle), Bangalore: 560004 Email: smbabu52@yahoo.com

ಹಸಿರು ನಮ್ಮ ಉಸಿರು

ಕೆ.ಎನ್.ಆನಂದ ನಿಧನ



ಮೈಸೂರು, ಜ.12– ಇಲವಾಲ ಬಳಿಯ ಆರ್‌ಎಂಪಿ ಕ್ವಾಟರ್ಸ್ ನಿವಾಸಿ ಹಾಗೂ ಆರ್‌ಎಂಪಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಎನ್. ಆನಂದ(40) ಶುಕ್ರವಾರ ನಿಧನರಾದರು.

ಮೃತರು ತಾಯಿ–ತಂದೆ, ಪತ್ನಿ, ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ(ಜ.13) ಮಧ್ಯಾಹ್ನ 2 ಗಂಟೆಗೆ ಪಾಂಡವಪುರ ಸಮೀಪದ ಕ್ಯಾತನಹಳ್ಳಿಯಲ್ಲಿ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಇವರು ದಿನಾಂಕ: 03.01.2024 ಬುಧವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ಮೃತರ ಸ್ವಗೃಹ ಮೈಸೂರು ತಾ., ಜಯಪುರ ಹೋಬಳಿ ಕೆಳಗಿನ ಗ್ರಾಮದಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು: ಮೃತರ ಪತ್ನಿ ಲಕ್ಷ್ಮಿ, ಮಕ್ಕಳು ... ಕುಟುಂಬವರ್ಗದವರು

ಶ್ರೀ ಬಸವಲಿಂಗ

ಭಾವಪೂರ್ಣ ಶ್ರದ್ಧಾಂಜಲಿ



ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಕೆ. ಬಸವನಹುಂಡಿ ನಿವಾಸಿ ಪಟೇಲ್ ಮಾದೇಗೌಡ್ರು ಅವರ ಅಂತ್ಯಕ್ರಿಯೆ 13–01–2024ರ ಶನಿವಾರ ಬೆಳಗ್ಗೆ 11.30ಕ್ಕೆ ಸ್ವಗ್ರಾಮದಲ್ಲಿ ನೆರವೇರಿಸಲಾಗುವುದು.

ಪಟೇಲ್ ಮಾದೇಗೌಡ್ರು

ಜನನ 01–06–1921 / ಮರಣ 12–01–2024

ದುಃಖತಪ್ತರು ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬ ವರ್ಗದವರು

ಕೈಲಾಸ ಶಿವಗಣಾರಾಧನೆ ಆಹ್ವಾನ



ನನ್ನ ಪೂಜ್ಯ ಪತಿ ಶ್ರೀಯುತ ಬಿ. ಶ್ರೀಕಂಠಸ್ವಾಮಿಯವರು 03.01.2024 ರಂದು ಲಿಂಗೈಕ್ಯರಾದರು. ತತ್ಸಂಬಂಧವಾಗಿ 14–01–2024ರ ಭಾನುವಾರ ಬೆಳಿಗ್ಗೆ 10 ಗಂಟೆಗೆ ಪರಮಪೂಜ್ಯ ... ಕೈಲಾಸ ಶಿವಗಣಾರಾಧನೆಯನ್ನು ಬಲಚವಾಡಿ ಗ್ರಾಮದ ನಮ್ಮ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ಎಲ್ಲರೂ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು: ಲಿಂಗೈಕ್ಯರ ಪತ್ನಿ ಶ್ರೀಮತಿ ಸುಗುಣ, ಮಕ್ಕಳು, ಸೊಸೆ, ಅಳಿಯ ಮತ್ತು ಮೊಮ್ಮಕ್ಕಳು ಹಾಗೂ ಬಲಚವಾಡಿ ದಿವಂಗತ ಪಟೇಲ್ ಬಸಪ್ಪನವರ ಕುಟುಂಬ ವರ್ಗ & ತೆರಕಣಾಂಬಿ ಹೋಟೆಲ್ ಸುಬ್ಬಪ್ಪನವರ ಕುಟುಂಬ ವರ್ಗ.

ಶ್ರೀ ಬಿ. ಶ್ರೀಕಂಠಸ್ವಾಮಿ

ಬಲಚವಾಡಿ ಗ್ರಾಮ ಗುಂಡ್ಲುಪೇಟೆ ತಾಲ್ಲೂಕು.

ಜನನ: 08–01–1950

ನಿಧನ: 03–01–2024

(ಆಹ್ವಾನ ತಲುಪದೇ ಇದ್ದವರು ಇದನ್ನೇ ಆಹ್ವಾನವೆಂದು ಮನ್ನಿಸಿ ಆಗಮಿಸಬೇಕೆಂದು ಪ್ರಾರ್ಥನೆ)

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಶ್ರೀ. ಎಸ್.ಪಿ. ತಿಮ್ಮಯ್ಯರವರ ಮಗ ಶ್ರೀ. ಎಸ್.ಟಿ. ಬುದ್ಧಿಸಾಗರ್ ಮತ್ತು ಇವರ ಕುಟುಂಬದ ಸದಸ್ಯರು, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತಿನ ಮಾಲೀಕರಾಗಿದ್ದು, ಸದರಿ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಒಪ್ಪಿರುತ್ತಾರೆ. ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳನ್ನು ಒಳಗೊಂಡಂತೆ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ-ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 7 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಗತ್ಯ ದಾಖಲೆಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸುತ್ತಾರೆ. ಮೇಲ್ಕಂಡ ಅವಧಿಯ ನಂತರ ಬರುವ ಆಕ್ಷೇಪಣೆ, ತಂಟೆ-ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಮಂಡನಹಳ್ಳಿ ಗ್ರಾಮದ ಸರ್ವೆ ನಂ. 121 ರಲ್ಲಿರುವ ಖುಷ್ಕಿ ಜಮೀನಿನ ವಿಸ್ತೀರ್ಣ 03 ಎಕರೆ, ಖಾತೆ ಸಂಖ್ಯೆ 16, ಆಕಾರ ರೂ. 6.61 ಪೈಕಿ ಉಳ್ಳ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಮೈಸೂರು-ಹೆಚ್.ಡಿ. ಕೋಟೆ ರಸ್ತೆ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಸಾರ್ವಜನಿಕ ಕೆರೆ ಮತ್ತು ದಕ್ಷಿಣಕ್ಕೆ: ಸರ್ಕಾರಿ ಜಮೀನು.

ಸಹಿ/- ಶ್ರೀಲತಾ ದೀಕ್ಷಿತ್, ವಕೀಲರು, ಎಸ್‌ಎಲ್‌ಡಿ ಲಾ ಫರ್ಮ್ ನಂ.1458/ಎ, ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಸಮೀಪ, ಮೈಸೂರು. ಮೊ:9844640641

email: sldlawfirm2021@gmail.com

ಸಾರ್ವಜನಿಕ ಪ್ರಕಟಣೆ

ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಜಟ್ಟಿಹುಂಡಿ ಗ್ರಾಮದಲ್ಲಿ ವಾಸವಾಗಿರುವ ಲೇಟ್. ಸಿದ್ದೇಗೌಡ ಉರುಫ್ ತಾತೇಗೌಡ ರವರ ಮಗ ಶ್ರೀ. ಪುಟ್ಟಸ್ವಾಮಿಗೌಡ ಎಂಬ ಹೆಸರಿನ ನನ್ನ ಕಕ್ಷಿದಾರರು ಅನುಸೂಚಿ ಸ್ವತ್ತನ್ನು ಖರೀದಿಸಲು ಇಚ್ಛಿಸಿ ಸ್ವತ್ತಿನ ಮಾಲೀಕರಾದ, ಮೈಸೂರು ತಾಲ್ಲೂಕು ಜಯಪುರ ಹೋಬಳಿ ಮುಳ್ಳೂರು ಗ್ರಾಮದಲ್ಲಿ ವಾಸವಾಗಿರುವ ಲೇಟ್. ಚಿಕ್ಕನಂಜಪ್ಪ ನವರ ಮಕ್ಕಳಾದ ಶ್ರೀ. ನಟರಾಜು, ಶ್ರೀಮತಿ. ದೇವೀರಮ್ಮ, ಶ್ರೀಮತಿ.ನಂಜಮಣಿ ಮತ್ತು ಶ್ರೀಮತಿ. ರತ್ನಮ್ಮ ರವರು ಗಳೊಂದಿಗೆ ದಿನಾಂಕ: 14-6-2023 ರಂದು ನೋಂದಾಯಿತ ಕ್ರಯದ ಕರಾರು ಮಾಡಿ ಕೊಂಡಿರುತ್ತಾರೆ. ಅನುಸೂಚಿ ಸ್ವತ್ತಿನ ಸಂಬಂಧ ಯಾವುದೇ ವ್ಯಕ್ತಿ / ವ್ಯಕ್ತಿಗಳಿಗೆ ಯಾವುದೇ ರೀತಿಯ ಮಾಲೀಕತ್ವ, ಹಕ್ಕು, ಆಸಕ್ತಿ, ವಗೈರೆ ಇದ್ದಲ್ಲಿ ಅಥವಾ ಸದರಿ ಸ್ವತ್ತಿನ ಮಾರಾಟದ / ಕ್ರಯದ ಬಗ್ಗೆ ತಕರಾರು ಇದ್ದಲ್ಲಿ, ಅಂತಹ ತಕರಾರನ್ನು ಲಿಖಿತವಾಗಿ ದಾಖಲೆ ಸಹಿತ ಖುದ್ದಾಗಿ ನಮ್ಮ ಕಛೇರಿಗೆ ಈ ಪ್ರಕಟಣೆಯ ದಿನದಿಂದ ಹದಿನೈದು (15) ದಿನಗಳ ಒಳಗೆ ಸಲ್ಲಿಸತಕ್ಕದ್ದು. ಸದರಿ ಅವಧಿಯಲ್ಲಿ ಯಾವುದೇ ರೀತಿಯ ತಕರಾರು ಸಲ್ಲಿಸದಿದ್ದಲ್ಲಿ ಅನುಸೂಚಿ ಸ್ವತ್ತುಗಳ ಸಂಬಂಧ ಯಾವುದೇ ವ್ಯಕ್ತಿ/ವ್ಯಕ್ತಿಗಳಿಗೆ ಯಾವುದೇ ರೀತಿಯ ಹಿತಾಸಕ್ತಿ, ಹಕ್ಕು, ಅಥವಾ ಅಧಿಕಾರ ಇಲ್ಲವೆಂದು ಮತ್ತು ಸದರಿ ಭೂಮಾಲೀಕರೊಂದಿಗೆ ಮಾಡಿಕೊಂಡಿರುವ ಕರಾರಿಗೆ ಯಾವುದೇ ಆಕ್ಷೇಪಣೆ ಇಲ್ಲವೆಂದು ಪರಿಗಣಿಸಲಾಗುವುದು.

ಅನುಸೂಚಿ: ಮೈಸೂರು ತಾಲ್ಲೂಕು ಜಯಪುರ ಹೋಬಳಿ ಮುಳ್ಳೂರು ಗ್ರಾಮದ ಖುಷ್ಕಿ ಜಮೀನು, ಸರ್ವೆ ಸಂಖ್ಯೆ : 117/1 ರ ವಿಸ್ತೀರ್ಣ 1.00 ಎಕರೆ ಮತ್ತು ಸರ್ವೆ ಸಂಖ್ಯೆ : 117/3 ರ ವಿಸ್ತೀರ್ಣ 1.24 ಎಕರೆ, ಒಟ್ಟು 2.24 ಎಕರೆ ಜಮೀನು, ಈ ಮೇಲೆ ತಿಳಿಸಿದ ಕ್ರಯದ ವ್ಯವಹಾರಕ್ಕೆ ಒಳಪಟ್ಟಿರುತ್ತದೆ.

Sd/- H.P.M.Swamy, Advocate Chambers:- #. 729, Shiva Krupa', Opposite bus stop, Hinkal, Mysuru-570 030, Mobile: 9886363973.

ದಿನಾಂಕ: 11–01–2024

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳ ವಿಶ್ವಾಸಾರ್ಹತೆ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಂದಿಗೆ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಪಟ್ಟಣ ಪಂಚಾಯಿತಿ ಕಾರ್ಯಾಲಯ, ಬೋಗಾದಿ

ಮೈಸೂರು ತಾಲ್ಲೂಕು ಮತ್ತು ಜಿಲ್ಲೆ –570026

ದೂರವಾಣಿ ಸಂ: 0821–2331099

Web : www.bogaditown.mrc.gov.in

E. mail : itstaff_ulb_bogadi@yahoo.com

ಸಂ: ಪ.ಪಂ.ಬೋಗಾದಿ/ತಾ.ಶಾ./ಟೆಂಡರ್.ಸಿ.ಆರ್.13/2023–24

ದಿನಾಂಕ: 10.01.2023

ಇ-ಟೆಂಡರ್ ಪ್ರಕಟಣೆ

ಬೋಗಾದಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆಗೆ ಅವಶ್ಯಕವಿರುವ ಆಟೋ ಟಿಪ್ಪರ್‌ಗಳನ್ನು ಸರಬರಾಜು ಮಾಡಿಕೊಳ್ಳಲು ನೋಂದಾಯಿತ ಅರ್ಹ ಸಂಸ್ಥೆ/ ಅಧಿಕೃತ ಸರಬರಾಜುದಾರರಿಂದ ಹಾಗೂ ಘನತ್ಯಾಜ್ಯ ನಿರ್ವಹಣೆಗೆ ಅವಶ್ಯಕವಿರುವ ಡ್ರೈವರ್ ಮತ್ತು ಲೋಡರ್‌ರವರನ್ನು ಹೊರಗುತ್ತಿಗೆ ಆಧಾರದ ಮೇಲೆ ಸರಬರಾಜು ಮಾಡಿಕೊಳ್ಳಲು ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿತ ಮತ್ತು ಸಿವಿಲ್ ಕಾಮಗಾರಿಯನ್ನು ಕೈಗೊಳ್ಳಲು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999 ಮತ್ತು ನಿಯಮಗಳು 2000ರಂತೆ ಇ-ಪ್ರೊಕ್ಯೂರ್‌ಮೆಂಟ್ ಸೆಲ್, ಬೆಂಗಳೂರುರವರಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರುಗಳಿಂದ ಇ-ಪೋರ್ಟಲ್ https://kppp.karnataka.gov.in ಮೂಲಕ ಟೆಂಡರನ್ನು ಆಹ್ವಾನಿಸಲಾಗಿದ್ದು, ಆಸಕ್ತ ಅರ್ಹ ಗುತ್ತಿಗೆದಾರರು ತಮ್ಮ ಐಟಂವಾರು ಟೆಂಡರ್‌ಗಳನ್ನು KG-2, KC-2&KW-1 ರಂತೆ ಪ್ರಮಾಣಿತ ಟೆಂಡರ್ ದಸ್ತಾವೇಜಿನ ನಿಯಮಗಳಂತೆ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿರುತ್ತದೆ. ಇಂಡೆಂಟ್ ಸಂಖ್ಯೆ DMA/2023-24/IND0710/CALL-2ರ ಟೆಂಡರ್‌ಗೆ ದಿ: 17.01.2024ರ ಸಂಜೆ 5.00 ಗಂಟೆಯೊಳಗೆ ಟೆಂಡರನ್ನು ಸಲ್ಲಿಸತಕ್ಕದ್ದು, ದಿ: 18.01.2024ರಂದು ಸಂಜೆ 5.00 ಗಂಟೆಗೆ ಟೆಂಡರ್ ತೆರೆಯಲಾಗುವುದು. ಇಂಡೆಂಟ್ ಸಂಖ್ಯೆ DMA/2023-24/SE0439/CALL-2 ಮತ್ತು DMA/2023-24/WS/WORK_INDENT11189ರ ಟೆಂಡರ್‌ಗಳನ್ನು ದಿ: 24.01.2024ರ ಸಂಜೆ 5.00 ಗಂಟೆಯೊಳಗೆ ಇ-ಪೋರ್ಟಲ್‌ನಲ್ಲಿ ಸಲ್ಲಿಸತಕ್ಕದ್ದು, ದಿ: 18.01.2024ರಂದು ಸಂಜೆ 5.00 ಗಂಟೆಗೆ ಪೋರ್ಟಲ್‌ನಲ್ಲಿ ಭರ್ತಿಮಾಡಿದ ಟೆಂಡರ್‌ಗಳನ್ನು ತೆರೆಯಲಾಗುವುದು. (ಸಾಧ್ಯವಾದಿದ್ದಲ್ಲಿ ಮುಂದಿನ ದಿನಾಂಕದಂದು ಟೆಂಡರ್ ತೆರೆಯಲಾಗುವುದು ಹಾಗೂ ತಿದ್ದುಪಡಿ/ಬದಲಾವಣೆಗಳಿದ್ದಲ್ಲಿ ಪತ್ರಿಕೆ ಪ್ರಕಟಣೆ ಹೊರಡಿಸಲಾಗುವುದಿಲ್ಲ) ಟೆಂಡರ್ ಅಂಗೀಕರಿಸುವ ತಿರಸ್ಕರಿಸುವ ಹಕ್ಕನ್ನು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಕಾಯ್ದಿರಿಸಿಕೊಂಡಿದೆ.

ಸಹಿ/– ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಬೋಗಾದಿ.

DIPR/DDMYS/KSMCA/901/2023-24

ಮೈಸೂರು ಜಿಲ್ಲಾ ಮಹಿಳಾ ಸಹಕಾರ ಬ್ಯಾಂಕ್ ನಿ.

ಚಾಮರಾಜ ಜೋಡಿ ರಸ್ತೆ ಮೈಸೂರು

ಆಡಳಿತ ಮಂಡಳಿ ಚುನಾವಣೆ 2024–2029


ಮಾನ್ಯ ಮತದಾರ ಬಂಧುಗಳೇ, ದಿನಾಂಕ 14.01.2024ರ ಭಾನುವಾರದಂದು ನಡೆಯಲಿರುವ ಬ್ಯಾಂಕಿನ ಆಡಳಿತ ಮಂಡಳಿ ಚುನಾವಣೆಯಲ್ಲಿ "ಗುಂಡ್ಲುಪೇಟೆ ತಾಲ್ಲೂಕು ಕ್ಷೇತ್ರದಿಂದ ಸಾಮಾನ್ಯ ಅಭ್ಯರ್ಥಿಯಾಗಿ ನಾನು ಸ್ಪರ್ಧಿಸುತ್ತಿದ್ದೇನೆ

39 **ಬಿ.ಎಲ್. ಸುಬ್ಬಮ್ಮಣ್ಣಿ**

ಮಾಜಿ ಉಪಾಧ್ಯಕ್ಷರು ಮೈಸೂರು ಜಿಲ್ಲಾ ಮಹಿಳಾ ಸಹಕಾರ ಬ್ಯಾಂಕ್ (ನಿ)

W/O ಹೆಚ್ ಬಿ ಮಹದೇವಪ್ಪ





ಮಾನ್ಯ ಮತದಾರರಾದ ತಾವು ತಮ್ಮ ಅಮೂಲ್ಯ ಮತವನ್ನು 'ದೂರದರ್ಶನ' (TV) ಗುರುತಿಗೆ ನೀಡಿ ಆಶೀರ್ವದಿಸಲು ಕೋರುತ್ತೇವೆ

ಚುನಾವಣೆ ನಡೆಯುವ ಸ್ಥಳ: ಹಾರ್ಡ್‌ವಿಕ್ ಹೈಸ್ಕೂಲ್, ಆರ್. ಟಿ. ಓ. ಕಚೇರಿ ಹತ್ತಿರ, ಜೆ ಎಲ್ ಬಿ ರಸ್ತೆ, ಮೈಸೂರು

ಸಮಯ : ಬೆಳಗ್ಗೆ 9–00 ರಿಂದ ಸಂಜೆ 4–00 ರ ವರೆಗೆ

ತಮ್ಮ ಸೇವಾಕಾಂಕ್ಷಿ **ಶ್ರೀಮತಿ ಬಿ.ಎಲ್. ಸುಬ್ಬಮ್ಮಣ್ಣಿ**

Mob: 9480127353, 9632204679

ಸೂಚನೆ: ಮತದಾರರು ಮತ ಚಲಾಯಿಸಲು ಬ್ಯಾಂಕಿನಿಂದ ನೀಡಿರುವ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರಲು ಕೋರಿದೆ

ಮೈಸೂರು ಜಿಲ್ಲಾ ಮಹಿಳಾ ಸಹಕಾರ ಬ್ಯಾಂಕ್

ಚಾಮರಾಜ ಜೋಡಿ ರಸ್ತೆ, ಮೈಸೂರು.

ಆಡಳಿತ ಮಂಡಳಿ ಚುನಾವಣೆ 2024–2029

ಮಾನ್ಯ ಮತದಾರ ಬಂಧುಗಳೇ,

ದಿನಾಂಕ : 14.01.2024ರ ಭಾನುವಾರದಂದು ನಡೆಯಲಿರುವ ಬ್ಯಾಂಕಿನ ಆಡಳಿತ ಮಂಡಳಿ ಚುನಾವಣೆಯಲ್ಲಿ ಮೈಸೂರು ನಗರ ಕ್ಷೇತ್ರದಿಂದ ಸಾಮಾನ್ಯ ಸ್ಥಾನದ ಅಭ್ಯರ್ಥಿಯಾಗಿ ನಾನು ಸ್ಪರ್ಧಿಸಿರುತ್ತೇನೆ.

32 **ಹೆಚ್. ವಸಂತ ಮುನೀಶ್**

W/o ಎಂ. ಎಲ್. ಮುನೀಶ್, ನಿವೃತ್ತ ಉಪ ವ್ಯವಸ್ಥಾಪಕರು ಮಂಡ್ಯ ಹಾಲು ಒಕ್ಕೂಟ ಹಾಗೂ ವಕೀಲರು, ಮೈಸೂರು.



ಮಾನ್ಯ ಮತದಾರರಾದ ತಾವು ತಮ್ಮ ಅಮೂಲ್ಯ ಮತವನ್ನು ಏಣಿಯ ಗುರುತಿಗೆ ನೀಡಿ ಆಶೀರ್ವದಿಸಲು ಕೋರುತ್ತೇನೆ.

ಚುನಾವಣೆ ನಡೆಯುವ ಸ್ಥಳ : ಹಾರ್ಡ್‌ವಿಕ್ ಹೈಸ್ಕೂಲ್, ಆರ್.ಟಿ.ಓ ಕಛೇರಿ ಹತ್ತಿರ, ಜೆ.ಎಲ್.ಬಿ. ರಸ್ತೆ, ಮೈಸೂರು.

ವೇಳೆ : ಬೆಳಗ್ಗೆ 9–00 ರಿಂದ ಸಂಜೆ 4–00 ರವರೆಗೆ

ಸೂಚನೆ : ಮತದಾರರು ಮತ ಚಲಾಯಿಸಲು ಬ್ಯಾಂಕಿನಿಂದ ನೀಡಿರುವ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರಲು ಕೋರಿದೆ.

ತಮ್ಮ ಸೇವಾಕಾಂಕ್ಷಿ, **ಹೆಚ್. ವಸಂತ ಮುನೀಶ್**

ಮಾಜಿ ನಿರ್ದೇಶಕರು, ಮೈಸೂರು ಜಿಲ್ಲಾ ಮಹಿಳಾ ಸಹಕಾರ ಬ್ಯಾಂಕ್ ಮತ್ತು ಮೈಸೂರು ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘ. ಮೊ : 9980029481

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – 570006.

ಸಂಖ್ಯೆ: ಕರಾಮುವಿ/ಡೀನ್(ಶೈ)/ಪಿಎಚ್.ಡಿ–07/ಪಿಹೆಚ್.ಡಿ./2023–24 ದಿನಾಂಕ: 12.01.2024

ಅಧಿಸೂಚನೆ

ಜನವರಿ ಆವೃತ್ತಿಯ ಪಿಹೆಚ್.ಡಿ. ಕಾರ್ಯಕ್ರಮದ ಪ್ರವೇಶಾತಿ 2023–24 (ರೆಗ್ಯುಲರ್ ಮೋಡ್)

ಉಲ್ಲೇಖ: (1) ಯುಜಿಸಿ ಸಾರ್ವಜನಿಕ ಪತ್ರ ಸಂಖ್ಯೆ F: No. 2-1/2017(DEB-III) ದಿನಾಂಕ 14.09.2018. (2) ಕರಾಮುವಿ ಪಿಹೆಚ್.ಡಿ. ಅಧ್ಯಾದೇಶ 2012 (4ನೇ ತಿದ್ದುಪಡಿ 2023). (3) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 12.01.2024.

ಈ ಕೆಳಕಂಡ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳಲ್ಲಿ ಪಿಹೆಚ್.ಡಿ. ಪದವಿ ಕಾರ್ಯಕ್ರಮಕ್ಕೆ ಅರ್ಹ ಅಭ್ಯರ್ಥಿಗಳಿಂದ ಪ್ರವೇಶಾತಿಗಾಗಿ ನಿಗದಿತ ನಮೂನೆಯಲ್ಲಿ ಅರ್ಜಿ ಆಹ್ವಾನಿಸಲಾಗಿದೆ.

• ಕನ್ನಡ • ಇಂಗ್ಲಿಷ್ • ತೆಲುಗು • ಮಾಹಿತಿ ತಂತ್ರಜ್ಞಾನ • ಇತಿಹಾಸ • ಅರ್ಥಶಾಸ್ತ್ರ • ರಾಜ್ಯಶಾಸ್ತ್ರ • ಸಮಾಜಶಾಸ್ತ್ರ • ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ • ವಾಣಿಜ್ಯಶಾಸ್ತ್ರ • ಪರಿಸರ ವಿಜ್ಞಾನ • ಮನೋವಿಜ್ಞಾನ • ಗಣಕಯಂತ್ರ ವಿಜ್ಞಾನ • ಭೂಗೋಳಶಾಸ್ತ್ರ • ಆಹಾರ ವಿಜ್ಞಾನ ಮತ್ತು ಪೌಷ್ಟಿಕತೆ.

ಸಾಮಾನ್ಯ ಪ್ರವೇಶ ಪರೀಕ್ಷೆ (CET) • ಅರ್ಹ ಅಭ್ಯರ್ಥಿಗಳು ಸಾಮಾನ್ಯ ಪ್ರವೇಶ ಪರೀಕ್ಷೆ ತೆಗೆದುಕೊಳ್ಳಬೇಕು. • UGC / UGC-CSIR, JRF Test / NET / GATE / GRE / M.Phil ತೇರ್ಗಡೆಯಾದ ಅಭ್ಯರ್ಥಿಗಳಿಗೆ ಸಾಮಾನ್ಯ ಪ್ರವೇಶ ಪರೀಕ್ಷಾ ವಿನಾಯಿತಿ ಇರುತ್ತದೆ. ಆದಾಗ್ಯೂ ಅಭ್ಯರ್ಥಿಗಳು ಸಂದರ್ಶನಕ್ಕೆ ಹಾಜರಾಗಬೇಕು.

ಸಾಮಾನ್ಯ ಪ್ರವೇಶ ಪರೀಕ್ಷೆ (CET) ಯ ಕೇಂದ್ರ: ಕರಾಮುವಿ ನಿಲಯ, ಮೈಸೂರಿನಲ್ಲಿ ಮಾತ್ರ ನಡೆಸಲಾಗುವುದು.

ಶುಲ್ಕ ಪಾವತಿ ಅರ್ಜಿ ಸಂಸ್ಕರಣೆ ಶುಲ್ಕ: ರೂ. 2000/–. (ರೂ. 1000/– ಪ.ಜಾ/ಪ.ಪಂ/ಪ್ರವರ್ಗ–1) ಹೆಚ್ಚಿನ ಮಾಹಿತಿಗೆ ಕರಾಮುವಿ ಜಾಲತಾಣ ಪರಿಶೀಲಿಸುವುದು. ಕರಾಮುವಿ ಪೋರ್ಟಲ್ ಮುಖಾಂತರ ಶುಲ್ಕ ಪಾವತಿಸಲು ತಿಳಿಸಲಾಗಿದೆ. ಸಂಬಂಧಿಸಿದ ದಾಖಲಾತಿಗಳ ದೃಢೀಕೃತ ನಕಲು ಪ್ರತಿಗಳ ಜೊತೆ ಜಾಲತಾಣದಿಂದ ಡೌನ್‌ಲೋಡ್ ಮಾಡಿದ ಅರ್ಜಿಯನ್ನು ಭರ್ತಿ ಮಾಡಿ ಅಂಚೆ ಮೂಲಕ ಅಥವಾ ಖುದ್ದಾಗಿ ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸುವುದು.

ಭಾಷೆಗಳು, ಸಮಾಜ ವಿಜ್ಞಾನ ವಿಷಯಗಳು ಮತ್ತು ವಿಜ್ಞಾನ ವಿಷಯಗಳಿಗೆ ಸಂಬಂಧಪಟ್ಟ ಅಭ್ಯರ್ಥಿಗಳ ಅರ್ಜಿಯನ್ನು ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸುವುದು. ಅಧ್ಯಕ್ಷರು,............ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು–570 006.

ವಾಣಿಜ್ಯಶಾಸ್ತ್ರ ವಿಷಯದ ಅಭ್ಯರ್ಥಿಗಳು ಸಂಬಂಧಪಟ್ಟ ಅರ್ಜಿಯನ್ನು ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸುವುದು. ಅಧ್ಯಕ್ಷರು, ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರಾಮುವಿ ವಾಣಿಜ್ಯಶಾಸ್ತ್ರ ಮತ್ತು ನಿರ್ವಹಣಾಶಾಸ್ತ್ರ ಭವನ, 18ನೇ ಮುಖ್ಯ ರಸ್ತೆ, ವಿಜಯನಗರ 3ನೇ ಹಂತ, 'ಡಿ' ಬ್ಲಾಕ್, ಮೈಸೂರು–570 030.

ಪ್ರಮುಖ ದಿನಾಂಕಗಳು:

ವಿವರಗಳು	ದಿನಾಂಕ
ಜಾಲತಾಣದಲ್ಲಿ ಅರ್ಜಿ ಲಭ್ಯವಾಗಲಿರುವ ದಿನಾಂಕ	12.01.2024
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ (ದಂಡ ಶುಲ್ಕವಿಲ್ಲದೆ)	07.02.2024
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ (ದಂಡ ಶುಲ್ಕ ರೂ 500/–ರೊಂದಿಗೆ)	14.02.2024
ಸಾಮಾನ್ಯ ಪ್ರವೇಶಾತಿ ಪರೀಕ್ಷೆ ದಿನಾಂಕ	03.03.2024
ಪ್ರವೇಶಾತಿ ಪರೀಕ್ಷೆಯ ಫಲಿತಾಂಶವನ್ನು ಪ್ರಕಟಿಸುವ ದಿನಾಂಕ	11.03.2024
ಆಯ್ಕೆ ಪಟ್ಟಿ ಪ್ರಕಟಣೆ	30.03.2024
ಮಾರ್ಗದರ್ಶಕರ ಹಂಚಿಕೆಯ ಕೌನ್ಸಿಲಿಂಗ್	10.04.2024

ವಿವರವಾದ ಮಾಹಿತಿಗಾಗಿ ಅರ್ಜಿಯ ಜೊತೆ ವಿಷಯವಾರು ಖಾಲಿ ಇರುವ ಸೀಟುಗಳು (Seat Matrix) ಪ್ರವೇಶಾತಿ, ಸಾಮಾನ್ಯ ಪ್ರವೇಶ ಪರೀಕ್ಷೆ ವಿವರ, ಪರೀಕ್ಷಾ ಪಠ್ಯಕ್ರಮ, ಪ್ರಶ್ನೆ ಪತ್ರಿಕೆ ಮಾದರಿ ಹಾಗೂ ಇತರೆ ನಿಯಮಗಳಿಗೆ ಕರಾಮುವಿ ವೆಬ್‌ಸೈಟ್ www.ksoumysuru.ac.in ಗೆ ಭೇಟಿ ನೀಡುವುದು.

ಸಹಿ/– ಕುಲಸಚಿವ

ಪುರಸಭೆ ಕಾರ್ಯಾಲಯ, ಕುಶಾಲನಗರ

ಇ-ಟೆಂಡರ್ ಪ್ರಕಟಣೆ (ಮರುಟೆಂಡರ್) (Standard Bidding Document KW-2)

ನಂ: ಪುರಸಭೆ.ಕು./ಜೆ.ಇ/ಟಿ.ಪ್ರ/14/2023–24 ದಿನಾಂಕ: 10–01–2024

ಮುಖ್ಯಾಧಿಕಾರಿ, ಪುರಸಭೆ ಕಾರ್ಯಾಲಯ, ಕುಶಾಲನಗರ ರವರು ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಪುರಸಭೆ ಅನುದಾನದಲ್ಲಿ ಈ ಕೆಳಕಂಡ ಕಾಮಗಾರಿಯನ್ನು ಕೈಗೊಳ್ಳಲು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿಕೊಂಡಿರುವ ಅಧಿಕೃತ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಐಟಂವಾರು ದರಗಳನ್ನು (ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಇಲಾಖೆಯ ಪೋರ್ಟಲ್‌ನಲ್ಲಿ) ಆಹ್ವಾನಿಸಲಾಗಿದೆ. ಇ-ವೆಬ್ ಸೈಟ್ www.kppp.karnataka.gov.in ಮೂಲಕ ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ.

1. ಭರ್ತಿ ಮಾಡಿದ ಟೆಂಡರ್‌ಗಳನ್ನು ಅಂತರ್ಜಾಲದ ಮುಖಾಂತರ ನಮೂದಿಸುವ ಕಡೆಯ ದಿನಾಂಕ: 29.01.2024 ರಂದು ಸಂಜೆ 5.00 ಗಂಟೆಯವರೆಗೆ
2. ಸ್ವೀಕೃತವಾದ ಟೆಂಡರ್‌ಗಳನ್ನು ತೆರೆಯುವ ದಿನಾಂಕ 30.01.2024 ರಂದು ಸಂಜೆ 5.00 ಗಂಟೆಗೆ

ಕ್ರ ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಗುತ್ತಿಗೆದಾರರು ನೀಡಬೇಕಾದ ಇ.ಎಂ.ಡಿ.	ಇ – ಟೆಂಡರ್ ನಿರ್ವಹಣಾ ಶುಲ್ಕ	ಕಾಮಗಾರಿ ಪೂರ್ಣಗೊಳಿಸಲು ನಿಗದಿಪಡಿಸಿದ ಅವಧಿ	ಗುತ್ತಿಗೆದಾರರ ದರ್ಜೆ
1	2	3	4	5	6	7
1	ಕುಶಾಲನಗರ ಪುರಸಭೆ ವ್ಯಾಪ್ತಿಯಲ್ಲಿ ವಾರ್ಷಿಕ ಬೀದಿ ದೀಪ ನಿರ್ವಹಣೆ ಮಾಡುವುದು. (2ನೇ ಕರೆ)	28.00	56,000/–	ವೆಬ್ ಸೈಟ್‌ನಲ್ಲಿ ನಿಗದಿ ಪಡಿಸಿದಂತೆ	ವಾರ್ಷಿಕ ನಿರ್ವಹಣೆ	3ನೇ ದರ್ಜೆ ಮತ್ತು ಮೇಲ್ಪಟ್ಟ (ಎಲೆಕ್ಟ್ರಿಕಲ್) ಗುತ್ತಿಗೆದಾರರು

INDENT NO: DMA/2023-24/EL/WORK_INDENT1333/CALL-2

ಸೂಚನೆ: ಹೆಚ್ಚಿನ ವಿವರಗಳಿಗೆ ಕಛೇರಿಯ ವೆಬ್ ಸೈಟ್ www.kppp.karnataka.gov.in ನಲ್ಲಿ ಹಾಗೂ ಕಛೇರಿಯ ಸೂಚನಾ ಫಲಕವನ್ನು ನೋಡಬಹುದಾಗಿದೆ.

ಸಹಿ/– ಆಡಳಿತಾಧಿಕಾರಿಗಳು, ಪುರಸಭೆ, ಕುಶಾಲನಗರ

ಸಹಿ/– ಮುಖ್ಯಾಧಿಕಾರಿ, ಪುರಸಭೆ, ಕುಶಾಲನಗರ

ಮೈಸೂರು ಮಿತ್ರ

ಮಹಿಳಾ ಸಹಕಾರ ಬ್ಯಾಂಕ್ ಚುನಾವಣೆ

ಡಿ.ಗೌರಮ್ಮ ತಂಡ ಬೆಂಬಲಿಸಲು ಮನವಿ


ಎನ್.ನಿಖಿತಾ

ಮೈಸೂರು, ಜ.12(ಎಂಕೆ)– ಮಹಿಳೆಯರ ಆರ್ಥಿಕ ಸ್ವಾವಲಂಬನೆ ಹಾಗೂ ಪ್ರಗತಿಯ ಉದ್ದೇಶದಿಂದ ಸ್ಥಾಪನೆಯಾಗಿರುವ ಮೈಸೂರು ಹಾಗೂ ಚಾಮರಾಜನಗರ ಜಿಲ್ಲಾ ಮಹಿಳಾ ಸಹಕಾರ ಸಂಘದ ಅಭಿವೃದ್ಧಿಗಾಗಿ ಮುಂಬರುವ ಸಂಘದ ಚುನಾವಣೆಯಲ್ಲಿ ಡಿ.ಗೌರಮ್ಮ ತಂಡವನ್ನು ಬೆಂಬಲಿಸುವಂತೆ ಮೈಸೂರು ಹಾಗೂ ಚಾಮರಾಜನಗರ ಜಿಲ್ಲಾ ಮಹಿಳಾ ಸಹಕಾರ ಬ್ಯಾಂಕ್‌ನ ಮೈಸೂರು ನಗರ ಕ್ಷೇತ್ರದ ಅಭ್ಯರ್ಥಿ ಎನ್.ನಿಖಿತಾ ಪತ್ರಿಕಾ ಪ್ರಕಟಣೆ ಮೂಲಕ ಮನವಿ ಮಾಡಿದ್ದಾರೆ.

ನಮ್ಮ ತಂಡ ಚುನಾವಣೆ ಪ್ರಚಾರಕ್ಕೆ ತೆರಳಿದಾಗ ಸಕಾರಾತ್ಮಕವಾಗಿ ಮತದಾರರು ಸ್ಪಂದಿಸುತ್ತಿದ್ದು ಬದಲಾವಣೆಯನ್ನು ನಿರೀಕ್ಷೆ ಮಾಡುತ್ತಿದ್ದಾರೆ. ಹೊಸಬರಿಗೂ ಹೆಚ್ಚು ಬೆಂಬಲ ನೀಡುವ ವಿಶ್ವಾಸ ವ್ಯಕ್ತಪಡಿಸುತ್ತಿದ್ದಾರೆ. ನನ್ನ ತಾತ ದಿ.ರಾಜೂಗೌಡರವರು ಸಚಿವರಾಗಿ ಸೇವೆ ಸಲ್ಲಿಸಿ ಜನಮನ್ನಣೆ ಗಳಿಸಿದ್ದರು. ತಂದೆ ಆರ್.ನರೇಂದ್ರ ರಾಜೂಗೌಡರು ಸಹ ಮೂರು ಬಾರಿ ಶಾಸಕರಾಗಿ ಹಾಗೂ ಎಂಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿ ಸಹಕಾರ ಕ್ಷೇತ್ರದ ಅದ್ವಿತೀಯ ಸಾಧನೆಗಾಗಿ ಸಹಕಾರ ರತ್ನ ಪ್ರಶಸ್ತಿ ಕೂಡ ಪಡೆದಿದ್ದಾರೆ.

ಇವರ ಪ್ರೇರಣೆಯಿಂದ ಈ ಬಾರಿ ಮೊದಲ ಬಾರಿಗೆ ಸಹಕಾರ ಕ್ಷೇತ್ರದ ಮೊದಲ ಹೆಜ್ಜೆ ಇಟ್ಟಿದ್ದೇನೆ. ಮಹಿಳಾ ಸಹಕಾರ ಬ್ಯಾಂಕ್ ಅನ್ನು ಜನಸ್ನೇಹಿ ಬ್ಯಾಂಕ್ ಆಗಿ ಪರಿವರ್ತಿಸುವ, ಹೆಚ್ಚು ಷೇರುದಾರರನ್ನು ನೋಂದಾಯಿಸಲು ಹಾಗೂ ಬ್ಯಾಂಕ್ ಮತ್ತು ಸರ್ಕಾರಗಳ ನಡುವಿನ ಕೊಂಡಿಯಾಗಿ ಕೆಲಸ ಮಾಡಿ ಮಾದರಿ ಬ್ಯಾಂಕ್ ಆಗಿ ಅಭಿವೃದ್ಧಿ ಮಾಡುವ ದೃಢ ಸಂಕಲ್ಪ ಹೊಂದಿದ್ದೇವೆ. ಆದ್ದರಿಂದ ನಿಟ್ಟಿನಲ್ಲಿ ನನಗೂ ಹಾಗೂ ನಮ್ಮ ಡಿ.ಗೌರಮ್ಮ ತಂಡದ 19 ಜನರನ್ನು ಬೆಂಬಲಿಸುವ ಮೂಲಕ ಸೇವೆ ಮಾಡಲು ಅವಕಾಶ ನೀಡಬೇಕೆಂದು ಮನವಿ ಮಾಡಿದ್ದಾರೆ.

ಸಂಸದ ಪ್ರತಾಪ್ ಸಿಂಹ ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿ



ಮೈಸೂರು, ಜ.12(ಎಂಕೆ)– ಸಂಸದ ಪ್ರತಾಪ್ ಸಿಂಹ ನಾಳೆ(ಜ.13) ಬೆಳಗ್ಗೆ 11 ಗಂಟೆಗೆ ಕೆ.ಆರ್.ಕ್ಷೇತ್ರದ ಶಾಸಕ ಶ್ರೀವತ್ಸ ಅವರೊಂದಿಗೆ ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದಡಿ ಮೈಸೂರು ನಗರದ ಇಟ್ಟಿಗೆಗೂಡಿನಲ್ಲಿ ವೆಲ್ಲಾಳ ಸಮುದಾಯ ಭವನ ಕಟ್ಟಡ ಕಾಮಗಾರಿಗೆ ಗುದ್ದಲಿ ಪೂಜೆ ಸೇರಿದಂತೆ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ.

11.30ಕ್ಕೆ ಮೃಗಾಲಯದ ಎದುರು, 12.20ಕ್ಕೆ ಕುವೆಂಪುನಗರ ಬಸ್ ಡಿಪೋ ಆವರಣ, ಗೌರಿಶಂಕರನಗರದಲ್ಲಿ ಶುದ್ಧ ಕುಡಿಯುವ ನೀರಿನ ಘಟಕದ ಕೊಳವೆ ಭಾವಿ ನಿರ್ಮಾಣ ಹಾಗೂ ಉದ್ಯಾನವನದ ಅಭಿವೃದ್ಧಿ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಲಿದ್ದಾರೆ. ಹಾಗೆಯೇ ಮಧ್ಯಾಹ್ನ 1.30ಕ್ಕೆ ಮೈಸೂರು– ಟಿ.ನರಸೀಪುರ ಹೆದ್ದಾರಿ ವಿಭಾಗದ NH–766 ರಸ್ತೆ ಅಗಲೀಕರಣ ಕಾಮಗಾರಿಗೆ ಪ್ರತಾಪ್ ಸಿಂಹ ಅವರು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಟಿ.ನರಸೀಪುರ ಜಂಕ್ಷನ್‌ನಲ್ಲಿ ಸ್ಥಳ ಪರಿಶೀಲನೆ ನಡೆಸಲಿದ್ದಾರೆ.

ಮೂರನೇ ಪುಟದಿಂದ

ಯುವನಿಧಿಗೆ ಚಾಲನೆ

ಚಾಲನೆ ನೀಡಿ ಮಾತನಾಡಿದ ಅವರು, ಉದ್ಯೋಗ ಭತ್ಯೆ ಪಡೆಯುವ ಸಂದರ್ಭದಲ್ಲೇ ಕೌಶಲ್ಯ ತರಬೇತಿ ನೀಡಿ, ದೇಶ–ವಿದೇಶಗಳಲ್ಲಿ ಉದ್ಯೋಗ ಕಲ್ಪಿಸಲಾಗುವುದು ಎಂದರು.

ನಿರುದ್ಯೋಗ ಸಮಸ್ಯೆಯಿಂದ ಯುವಕ–ಯುವತಿಯರು ಭ್ರಮನಿರಸನರಾಗಿದ್ದಾರೆ, ಅವರ ಭವಿಷ್ಯಕ್ಕೆ ಶಕ್ತಿ ತುಂಬಲು ಈ ಯೋಜನೆಯನ್ನು ಕಾಂಗ್ರೆಸ್ ಸರ್ಕಾರ ಜಾರಿಗೊಳಿಸಿದೆ. ಚುನಾವಣಾ ಪೂರ್ವ ಪ್ರಣಾಳಿಕೆಯಲ್ಲಿ ಘೋಷಿಸಿದಂತೆ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದ್ದೇವೆ. ನಿರುದ್ಯೋಗ ಸಮಸ್ಯೆ, ರೈತರ ಸಮಸ್ಯೆ ಹೆಚ್ಚಾಗಿದ್ದು, ಆಹಾರ ಪದಾರ್ಥಗಳ ಬೆಲೆ ಗಗನಕ್ಕೆ ಏರಿರುವ ಸಂದರ್ಭದಲ್ಲಿ ಸಮಾಜದ ಎಲ್ಲ ವರ್ಗಗಳ ಸಮಸ್ಯೆಗೆ ಪರಿಹಾರವಾಗಿ ನಾವು ಗ್ಯಾರಂಟಿ ಯೋಜನೆಗಳನ್ನು ರೂಪಿಸಿ, ಪ್ರಣಾಳಿಕೆಯಲ್ಲಿ ಘೋಷಿಸಿದ್ದೆವು. ಚುನಾವಣಾ ಪೂರ್ವ ಜನತೆಗೆ ನೀಡಿದ್ದ ಐದು ಗ್ಯಾರಂಟಿಗಳನ್ನು ಜಾರಿ ಮಾಡಿರುವುದು ಇಡೀ ರಾಷ್ಟ್ರದಲ್ಲಿ ಮಾದರಿಯಾಗಿದೆ. ಯಾವ ಧರ್ಮ ಹಸಿದವರಿಗೆ ಅನ್ನ ಕೊಡುವುದಿಲ್ಲವೋ ಅಂಥ ಧರ್ಮದಲ್ಲಿ ನನಗೆ ನಂಬಿಕೆ ಇಲ್ಲ ಎಂದು ವಿವೇಕಾನಂದರು ಘೋಷಿಸಿದ್ದರು, ಅದನ್ನು ಮೂಲವಾಗಿಟ್ಟುಕೊಂಡು ಎಲ್ಲಾ ಬಡ–ಬಗ್ಗರು ಸಮನಾಗಿ ಜೀವನ ನಡೆಸಬೇಕು. ಅವರಲ್ಲಿ ಕೊಳ್ಳುವ ಶಕ್ತಿ ಹೆಚ್ಚಿಸುವಲ್ಲಿ ನಮ್ಮ ಯೋಜನೆಗಳು ಸಹಕಾರಿಯಾಗಿವೆ.

ನಮ್ಮ ಯೋಜನೆಗಳಿಂದ ರಾಜ್ಯದಲ್ಲಿ ಸುಮಾರು 1.50 ಕೋಟಿ ಮಂದಿಗೆ ಮಾಸಿಕ 5,000 ದಿಂದ 5,500 ರೂ. ವರೆಗೆ ಆರ್ಥಿಕ ಶಕ್ತಿ ತುಂಬಿದ್ದೇವೆ.

ಸಾಮಾಜಿಕ ನ್ಯಾಯದ ಬಗ್ಗೆ ಕೇವಲ ಭಾಷಣ ಮಾಡಿದರೆ ಸಾಲದು, ಅದಕ್ಕೆ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೆ ತರಬೇಕು. ನಮ್ಮ ಕಾಂಗ್ರೆಸ್ ಸರ್ಕಾರ ಮಾಡುತ್ತಿರುವುದು ಇದನ್ನೇ ಎಂದರು. ಮೊದಲ ಗ್ಯಾರಂಟಿ ಯೋಜನೆಯಿಂದಾಗಿ ಇದುವರೆಗೆ 130 ಕೋಟಿ 28 ಲಕ್ಷ ಮಹಿಳೆಯರು, ಯುವತಿಯರು ಉಚಿತವಾಗಿ ಪ್ರಯಾಣ ಮಾಡಿದ್ದಾರೆ. 1 ಕೋಟಿ 65 ಲಕ್ಷ ಕುಟುಂಬಗಳಿಗೆ ಉಚಿತವಾಗಿ 200 ಯೂನಿಟ್‌ವರೆಗೂ ಉಚಿತ ವಿದ್ಯುತ್ ನೀಡುತ್ತಿದ್ದೇವೆ. ಈ ಕೋಟಿ ಕುಟುಂಬಗಳು ನಯಾಪೈಸೆ ವಿದ್ಯುತ್ ಬಿಲ್ ಕಟ್ಟುವ ಹಾಗಿಲ್ಲ. ಇದೇ ರೀತಿ 5 ಕೆ.ಜಿ. ಅಕ್ಕಿ, 5 ಕೆ.ಜಿ. ಅಕ್ಕಿಯ ಹಣವನ್ನು ಪ್ರತೀ ಕುಟುಂಬಗಳಿಗೆ ಕೊಡುತ್ತಿದ್ದೇವೆ. 1 ಕೋಟಿ 17 ಲಕ್ಷ ಮಹಿಳೆಯರಿಗೆ, ಯುವತಿಯರಿಗೆ ಪ್ರತೀ ತಿಂಗಳು 2000 ರೂ. ತಲುಪಿಸುತ್ತಿದ್ದೇವೆ. ಇಂಥ ಸಾಧನೆ ಹಿಂದೆ ಯಾವ ಕಾಲದಲ್ಲೂ ಆಗಿಲ್ಲ. ಇದನ್ನೆಲ್ಲಾ ಮಾಡಿದ್ದು ನಾವು. ನುಡಿದಂತೆ ಮಾಡಿ ತೋರಿಸಿದ್ದೇನೆ ಎಂದು ಸಮರ್ಥಿಸಿಕೊಂಡರು.

ವಿವೇಕಾನಂದರ ಜನ್ಮ ದಿನದಂದೇ ಯುವನಿಧಿ ಯೋಜನೆಯನ್ನು ನಾವು ಜಾರಿ ಮಾಡಿದ್ದೇವೆ. ಈಗಾಗಲೇ 70 ಸಾವಿರ ಯುವಕ–ಯುವತಿಯರು ಯೋಜನೆಗೆ ನೋಂದಣಿ ಮಾಡಿಕೊಂಡಿದ್ದಾರೆ ಎಂದು ವಿವರಿಸಿದರು. ರಾಜೀವ್ ಗಾಂಧಿ ಅವರು ದೇಶದ ಯುವಕರ ಭವಿಷ್ಯಕ್ಕಾಗಿ ಸದಾ ತುಡಿಯುತ್ತಿದ್ದರು. ಅವರ ಆಶಯಕ್ಕೆ ಪೂರಕವಾಗಿ ಯುವನಿಧಿ ಯೋಜನೆಯಂತಹ ಕಾರ್ಯಕ್ರಮದ ಮೂಲಕ ನಮ್ಮ ಸರ್ಕಾರ ಕೆಲಸ ಮಾಡಲಿದೆ ಎಂದರು. ಆದ್ದರಿಂದ ಪ್ರತಿ ಯುವಕ–ಯುವತಿಯರು ಯೋಜನೆಗೆ ನೋಂದಾಯಿಸಿಕೊಂಡು ಅನುಕೂಲ ಪಡೆದುಕೊಳ್ಳಿ ಎಂದು ಕರೆ ನೀಡಿದರು.

ಫಲಾನುಭವಿಗಳಿಗೆ ನಗದು ವರ್ಗಾವಣೆ

ದುಂದು ವೆಚ್ಚ ಮಾಡಬೇಡಿ ಎಂದು ಸಲಹೆ ನೀಡಿದರು. ಮುಂದಿನ ವಿದ್ಯಾಭ್ಯಾಸ ಅಥವಾ ಸ್ವಯಂ ಉದ್ಯೋಗಕ್ಕಾಗಿ ಈ ಹಣವನ್ನು ಸದ್ಬಳಕೆ ಮಾಡಿಕೊಳ್ಳಿ. ಸಮಯ ಎಂಬುದು ಕ್ಷಣಾರ್ಧದಲ್ಲಿ ಕಳೆದು ಹೋಗುತ್ತದೆ. ಈ ಹಿನ್ನೆಲೆಯಲ್ಲಿ ಸಮಯದ ಮಹತ್ವ ಅರಿತು ನಿಮ್ಮ ಗುರಿ ತಲುಪಿ. ಪರೀಕ್ಷಾ ಸಮಯದಲ್ಲಿ ಮಾತ್ರ ಓದುವ ಲೆಕ್ಕಾಚಾರ ಬಿಟ್ಟು, ಬಿಡುವಿನ ಎಲ್ಲಾ ಸಮಯವನ್ನು ಓದಲು ಮೀಸಲಿಡಿ ಎಂದು ಡಾ.ರಾಜೇಂದ್ರ ಹೇಳಿದರು. ಪದವಿ ಮುಗಿಸಿದ ಹೆಣ್ಣು ಮಕ್ಕಳು ಹಾಗೂ ಗಂಡು ಮಕ್ಕಳಿಗೆ ಹಲವು ಸಾಮಾಜಿಕ ಒತ್ತಡಗಳು ಎದುರಾಗುತ್ತವೆ. ಇಂತಹ ಸಮಯದಲ್ಲಿ ಸರ್ಕಾರ ನೀಡುವ ಹಣವನ್ನು ಬಳಸಿಕೊಂಡು ಸ್ವಾಭಿಮಾನದಿಂದ ಬದುಕಿ ಎಂದರು.

ರಾಷ್ಟ್ರೀಯ ಯುವ ದಿನವಾದ ಇಂದು ಸರ್ಕಾರದ ಮಹತ್ವದ ಯೋಜನೆ ಜಾರಿಯಾಗಿದೆ. ನಿರುದ್ಯೋಗಿ ಪದವೀಧರರ ಕನಸು ಸಾಕಾರಗೊಳಿಸಿ, ಅವರ ಜೀವನಕ್ಕೆ ಧೈರ್ಯ ತುಂಬಲು ಸರ್ಕಾರ ಈ ಯೋಜನೆ ರೂಪಿಸಿದೆ ಎಂದು ಡಾ.ರಾಜೇಂದ್ರ ವಿವರಿಸಿದರು.

ಇಂದು ಸ್ವಾಮಿ ವಿವೇಕಾನಂದರ ಜಯಂತಿ ದಿನವಾಗಿದ್ದು, ಅವರ ಮಾರ್ಗದರ್ಶನದಲ್ಲಿ ನಡೆಯಿರಿ. ಪ್ರಸ್ತುತ ಡ್ರಗ್ಸ್ ಎಂಬುವುದು ಎಲ್ಲಾ ಕಾಲೇಜುಗಳನ್ನೂ ಆವರಿಸುತ್ತಿದೆ. ಹೆಣ್ಣು, ಗಂಡು ಎಂಬ ಭೇದವಿಲ್ಲದೆ ಎಲ್ಲರೂ ಡ್ರಗ್ಸ್ ಚಟಕ್ಕೆ ದಾಸರಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಡ್ರಗ್ಸ್‌ನಿಂದ ದೂರವಿರಿ. ಈ ಮೂಲಕ ನಿಮ್ಮ ಕಾಲೇಜನ್ನು ಡ್ರಗ್ಸ್ ಮುಕ್ತ ಕ್ಯಾಂಪಸ್ ಮಾಡಿ ಎಂದು ಕಿವಿಮಾತು ಹೇಳಿದರು.

ಈಗ ಡಿಜಿಟಲ್ ದುಶ್ಚಟಕ್ಕೆ ಬಹಳಷ್ಟು ಜನರು ದಾಸರಾಗುತ್ತಿದ್ದಾರೆ. ಮೊಬೈಲ್ ಸೇರಿದಂತೆ ಸಾಮಾಜಿಕ ಮಾಧ್ಯಮಗಳಲ್ಲಿ ತಲ್ಲೀನರಾಗಿ ಹೆಚ್ಚು ಸಮಯ ಕಳೆಯುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಓದಿನ ಬಗ್ಗೆ ಗಮನ ಹರಿಸಿ ಎಂದರು. 18 ವರ್ಷ ತುಂಬಿದ ಪ್ರತಿಯೊಬ್ಬರು ಮತ ಪಟ್ಟಿಯಲ್ಲಿ ನಿಮ್ಮ ಹೆಸರು ನೋಂದಾಯಿಸಿಕೊಳ್ಳಿ. ಈ ಮೂಲಕ ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಿ ಎಂದು ಡಾ.ರಾಜೇಂದ್ರ ಸಲಹೆ ನೀಡಿದರು. ಇಂದು ಜಿಲ್ಲಾಧಿಕಾರಿ ಡಾ.ರಾಜೇಂದ್ರ ಅವರ ಜನ್ಮ ದಿನವೆಂದು ಆಯೋಜಕರು ಘೋಷಣೆ ಮಾಡಿದಾಗ ವಿದ್ಯಾರ್ಥಿಗಳೆಲ್ಲರೂ ಶುಭಾಶಯ ಕೋರಿದರು. ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಕೆ.ನಾರಾಯಣ ಮೂರ್ತಿ, ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಕಚೇರಿ ಸಹಾಯಕ ನಿರ್ದೇಶಕ ಹೆಚ್.ಎಂ.ಮಂಜುನಾಥ್, ಮಹಾರಾಣಿ ವಿಜ್ಞಾನ ಕಾಲೇಜಿನ ಪ್ರಾಂಶುಪಾಲ ಡಾ.ಎಂ.ಅಬ್ದುಲ್ ರೆಹಮಾನ್, ಸೇವಾ ಸಿಂಧು ಅಧಿಕಾರಿ ಡಾ.ಎನ್.ರವಿಕುಮಾರ್, ನೋಡಲ್ ಅಧಿಕಾರಿ ಚೇತನ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

'11 ದಿನಗಳ ವಿಶೇಷ ವ್ರತ'

ನನ್ನ ಪಾಲಿಗೆ ಅದೃಷ್ಟ. ಈ ಸಮಯದಲ್ಲಿ ಭಾರತದ ನಾಗರಿಕರನ್ನು ಪ್ರತಿನಿಧಿಸಲು ದೇವರು ನನ್ನನ್ನು ಸೃಷ್ಟಿಸಿದನು. ಇದನ್ನು ಗಮನದಲ್ಲಿಟ್ಟುಕೊಂಡು ಇಂದಿನಿಂದ 11 ದಿನಗಳು ವಿಶೇಷ ಸಂಪ್ರದಾಯವನ್ನು ನಾನು ಆಚರಿಸುತ್ತಿದ್ದೇನೆ ಎಂದು ಟ್ವೀಟ್ ಮಾಡಿದ್ದಾರೆ. ತಮ್ಮ ಅಧಿಕೃತ ಯೂಟ್ಯೂಬ್ ಚಾನೆಲ್‌ನಲ್ಲಿ ಆಡಿಯೊ ಸಂದೇಶ ಪೋಸ್ಟ್ ಮಾಡಿದ್ದು, ಪ್ರಾಣ ಪ್ರತಿಷ್ಠಾಪನೆ ಐತಿಹಾಸಿಕ ಮತ್ತು ಶುಭಕರ ಸಂದರ್ಭವಾಗಿದ್ದು, ಅದಕ್ಕೆ ಸಾಕ್ಷಿಯಾಗುತ್ತಿರುವ ನಾನು ಅದೃಷ್ಟಶಾಲಿ ಎಂದಿದ್ದಾರೆ. ನಾನು ಭಾವುಕನಾಗಿದ್ದೇನೆ. ನನ್ನ ಜೀವನದಲ್ಲಿ ಮೊದಲ ಬಾರಿಗೆ ನಾನು ಇಂತಹ ಭಾವನೆಗಳನ್ನು ಅನುಭವಿಸುತ್ತಿದ್ದೇನೆ ಎಂದಿದ್ದಾರೆ.

ಮೈಸೂರು ದಸರಾ ವಸ್ತುಪ್ರದರ್ಶನಕ್ಕೆ ತೆರೆ

ವಿವಿಧ ಇಲಾಖೆಗಳ ಅತ್ಯುತ್ತಮ ಮಳಿಗೆಗಳಿಗೆ ಬಹುಮಾನ


ದಸರಾ ವಸ್ತು ಪ್ರದರ್ಶನದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರ, ನಿಗಮ ಮಂಡಳಿಗಳು ಹಾಗೂ ಜಿಲ್ಲಾ ಪಂಚಾಯತ್‌ಗಳ ಅತ್ಯುತ್ತಮ ಮಳಿಗೆಗಳಿಗೆ ಬಹುಮಾನ ವಿತರಣೆ ಮಾಡಲಾಯಿತು. ಶಾಸಕ ಟಿ.ಎಸ್.ಶ್ರೀವತ್ಸ ವಸ್ತುಪ್ರದರ್ಶನ ಪ್ರಾಧಿಕಾರದ ಸಿಇಓ ರಾಜೇಶ್ ಜಿಗೌಡ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು, ಜ.12(ಎಂಕೆ)– ನಾಡಹಬ್ಬ ಮೈಸೂರು ದಸರಾ ಮಹೋತ್ಸವ ಆಕರ್ಷಣೆಗಳಲ್ಲೊಂದಾದ ವಸ್ತುಪ್ರದರ್ಶನಕ್ಕೆ ಶುಕ್ರವಾರ ತೆರೆಬಿದ್ದಿತು.

ಶುಕ್ರವಾರ ವಸ್ತುಪ್ರದರ್ಶನ ಆವರಣದ ಪಿ.ಕಾಳಿಂಗರಾವ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಸಮಾರೋಪ ಸಮಾರಂಭದಲ್ಲಿ 2023ರ ದಸರಾ ವಸ್ತು ಪ್ರದರ್ಶನದಲ್ಲಿ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ನಿಗಮ ಮಂಡಳಿಗಳು ಹಾಗೂ ಜಿಲ್ಲಾ ಪಂಚಾಯತ್‌ಗಳ ಅತ್ಯುತ್ತಮ ಮಳಿಗೆಗಳಿಗೆ ಬಹುಮಾನ ವಿತರಣೆ ಮಾಡಲಾಯಿತು.

ರಾಜ್ಯ ಸರ್ಕಾರದ ಇಲಾಖೆಗಳ ವಿಭಾಗದಲ್ಲಿ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ ಪ್ರಥಮ, ಕನ್ನಡ ಮತ್ತು ಸಂಸ್ಕೃತ ಇಲಾಖೆ ಮತ್ತು ಪ್ರವಾಸೋದ್ಯಮ ಇಲಾಖೆ ದ್ವಿತೀಯ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತೃತೀಯ ಬಹುಮಾನ ಪಡೆದರೆ, ಕೇಂದ್ರ ಸರ್ಕಾರದ ಇಲಾಖೆಗಳ ವಿಭಾಗದಲ್ಲಿ ಮೈಸೂರು ಅಂಚೆ ಇಲಾಖೆ ಪ್ರಥಮ, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ(ಆಯಿಷ್) ದ್ವಿತೀಯ ಹಾಗೂ ನಬಾರ್ಡ್(ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಮೈಸೂರು) ತೃತೀಯ ಬಹುಮಾನ ಪಡೆಯಿತು.

ನಿಗಮ, ಮಂಡಳಿ ಹಾಗೂ ಪ್ರಾಧಿಕಾರ ವಿಭಾಗದಲ್ಲಿ ಕಾವೇರಿ ನೀರಾವರಿ ನಿಗಮ ಪ್ರಥಮ, ಮೈಸೂರು ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ದ್ವಿತೀಯ ಹಾಗೂ ಡಾ.ಬಾಬು ಜಗಜೀವನ ರಾಂ ಚರ್ಮ ಕೈಗಾರಿಕೆ ಸಂಶೋಧನಾ ಸಂಸ್ಥೆ ಮತ್ತು ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮ ತೃತೀಯ ಬಹುಮಾನ ಪಡೆದರೆ, ಜಿಲ್ಲಾ ಪಂಚಾಯತ್ ವಿಭಾಗದಲ್ಲಿ ಮಂಡ್ಯ ಜಿಲ್ಲಾ ಪಂಚಾಯತ್ ಪ್ರಥಮ, ಮೈಸೂರು ಜಿಲ್ಲಾ ಪಂಚಾಯತ್ ದ್ವಿತೀಯ ಹಾಗೂ ರಾಮನಗರ ಜಿಲ್ಲಾ ಪಂಚಾಯತ್ ತೃತೀಯ ಬಹುಮಾನ ಪಡೆಯಿತು.


15 ಲಕ್ಷ ಪ್ರವಾಸಿಗರು: ಬಹುಮಾನ ವಿತರಿಸಿ ಮಾತನಾಡಿದ ಶಾಸಕ ಟಿ.ಎಸ್.ಶ್ರೀವತ್ಸ, 90 ದಿನಗಳ ದಸರಾ ವಸ್ತು ಪ್ರದರ್ಶನಕ್ಕೆ ಸುಮಾರು 15 ಲಕ್ಷ ಜನ ಭೇಟಿ ನೀಡಿದ್ದು, ದಸರಾ ವಸ್ತು ಪ್ರದರ್ಶನ ಯಶಸ್ವಿಯಾಗಿದೆ. ದಸರಾ ವಸ್ತು ಪ್ರದರ್ಶನಕ್ಕೆ ಹೆಸರು ವಾಸಿ. ವ್ಯಾಪಾರ ವಹಿವಾಟು ಉತ್ತಮವಾಗಿ ನಡೆದಿದೆ. ದೇಶದ ಮೂಲೆ ಮೂಲೆಯಿಂದ ಜನರು ವಸ್ತು ಪ್ರದರ್ಶನಕ್ಕೆ ಭೇಟಿ ನೀಡಿದ್ದಾರೆ. ಇಲ್ಲಿ 90 ದಿನಗಳಿಂದ ಮಳಿಗೆ ತೆರೆದಿರುವ ಮಳಿಗೆದಾರರು ಆದಾಯವನ್ನು ಮಾಡಿಕೊಂಡಿದ್ದಾರೆ ಎಂದು ತಿಳಿಸಿದರು.

ಇದೇ ವೇಳೆ ಉತ್ತಮವಾಗಿ ಚಿತ್ರ ಬಿಡಿಸಿದ ಮಕ್ಕಳಿಗೆ, ವಿಶೇಷ ಕಲಾಕೃತಿ ನಿರ್ಮಾಣ, ಪೆನ್ಸಿಲ್ ಶೇಡಿಂಗ್, ಸಾಂಪ್ರದಾಯಿಕ ಕಲೆ, ಪ್ರಕೃತಿ ಚಿತ್ರಣ ವಿಭಾಗದಲ್ಲಿ ಉತ್ತಮ ಕಲೆ ಪ್ರದರ್ಶಿಸಿದವರಿಗೆ ಬಹುಮಾನ ವಿತರಣೆ ಮಾಡಲಾಯಿತು. ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ರಾಜೇಶ್ ಜಿ.ಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಬಲವಂತ ರಾವ್ ಪಾಟೀಲ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ವಿಸ್ತರಿಸುವಂತೆ ಮನವಿ...

ವಾರಾಂತ್ಯ ದಿನಗಳಲ್ಲಿ ದಸರಾ ವಸ್ತುಪ್ರದರ್ಶನ ವಿಸ್ತರಿಸಿ, ವ್ಯಾಪಾರಸ್ಥರಿಗೆ ಅನುಕೂಲ ಮಾಡಿಕೊಡಬೇಕೆಂದು ಮಳಿಗೆ ಗುತ್ತಿಗೆದಾರರು ಶಾಸಕ ಟಿ.ಎಸ್.ಶ್ರೀವತ್ಸ ಅವರಿಗೆ ಮನವಿ ಸಲ್ಲಿಸಿದರು. ಮನವಿಗೆ ಪ್ರತಿಕ್ರಿಯಿಸಿದ ಅವರು, ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಮಾತನಾಡಿ, ವಿಸ್ತರಣೆ ಮಾಡಿಸಿಕೊಡುವ ಪ್ರಯತ್ನ ಮಾಡಲಾಗುವುದು ಎಂದು ತಿಳಿಸಿದರು.

ಮೈಸೂರಿಗೆ ಮಹತ್ವದ ಕೊಡುಗೆ ನೀಡಿದ ಎಸ್.ಎಂ.ಕೃಷ್ಣರ ಹೆಸರಲ್ಲಿ ಮಹತ್ವದ ಯೋಜನೆಗೆ ಆಗ್ರಹ



ಮೈಸೂರು, ಜ.12–ಮೈಸೂರು ಭಾಗದಲ್ಲಿ ಅಪಾರ ಅಭಿವೃದ್ಧಿ ಕೆಲಸಗಳನ್ನು ಮಾಡಿರುವ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ಹೆಸರು ಶಾಶ್ವತವಾಗಿರುವಂತೆ ಮೈಸೂರು ನಗರದಲ್ಲಿ ಯಾವುದಾದರೂ ಮಹತ್ವದ ಯೋಜನೆಯನ್ನು ಜಾರಿ ಮಾಡಬೇಕೆಂದು ಎಸ್.ಎಂ.ಕೃಷ್ಣ ಅಭಿಮಾನಿಗಳ ಸಂಘದ ಅಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ ಮನವಿ ಮಾಡಿದ್ದಾರೆ.

ಎಸ್.ಎಂ.ಕೃಷ್ಣ ಅವರು ಕೇಂದ್ರ ಕೈಗಾರಿಕಾ ಸಚಿವರಾಗಿದ್ದಾಗ ಮೈಸೂರಿನಲ್ಲಿ ವಿಕ್ರಾಂತ್ ಟಯರ್ ಕಾರ್ಖಾನೆ ಸ್ಥಾಪನೆಗೆ ಭೂಮಿ ಮಂಜೂರು ಮಾಡುವ ಮೂಲಕ ಉದ್ಯೋಗಾವಕಾಶ ಕಲ್ಪಿಸಿದ್ದರು. ಮೈಸೂರು–ಬೆಂಗಳೂರು ಜೋಡಿ ರಸ್ತೆ ನಿರ್ಮಾಣ ಅವರ ಅವಧಿಯಲ್ಲೇ ಆಗಿತ್ತು. ಪ್ರತಿಷ್ಠಿತ ಸಾಫ್ಟ್‌ವೇರ್ ಕಂಪನಿ ಇನ್ಫೋಸಿಸ್‌ಗೆ ಮೈಸೂರಿನಲ್ಲಿ ಜಮೀನು ಮಂಜೂರು ಮಾಡಿದ್ದು ಎಸ್.ಎಂ.ಕೃಷ್ಣ ಅವರೇ. ಮೈಸೂರು ನಗರದಲ್ಲಿ ರಿಂಗ್ ರಸ್ತೆ ನಿರ್ಮಾಣ, ಕಾಂಗ್ರೆಸ್ ನಾಯಕರು, ಕಾರ್ಯಕರ್ತರಿಗೆ ನಿವೇಶನ ಹಾಗೂ ಮೈಸೂರಿನ ಪತ್ರಕರ್ತರಿಗೆ ನಿವೇಶನಕ್ಕಾಗಿ ಜಮೀನು ಮಂಜೂರು ಮಾಡಿದ ಎಸ್.ಎಂ.ಕೃಷ್ಣ ಅವರ ಹೆಸರು ಶಾಶ್ವತವಾಗಿರುವಂತೆ ಯಾವುದಾದರೂ ಯೋಜನೆ ಮಾಡಬೇಕೆಂದು ಒತ್ತಾಯಿಸಿದ್ದಾರೆ.

ಸಮಾಜಕ್ಕೆ ಬಾಧಕವಾದ ವಿಚಾರಗಳ ಬಗ್ಗೆ ಜಾಗೃತಿ ಮೂಡಿಸುವ ಬೀದಿ ನಾಟಕ ಪ್ರದರ್ಶನದ ಮೂಲಕ ಯುವ ದಿನಾಚರಣೆ

ಪ್ರತಿ ನಾಟಕವೂ ಯುವ ಸಮೂಹಕ್ಕೆ ಎಚ್ಚರಿಕೆ ಸಂದೇಶ ರವಾನೆ



ರಾಷ್ಟ್ರೀಯ ಯುವ ದಿನಾಚರಣೆ ಪ್ರಯುಕ್ತ ಛಾಯಾದೇವಿ ಬಿ.ಇಡಿ ಕಾಲೇಜು ಪ್ರಶಿಕ್ಷಣಾರ್ಥಿಗಳು ಚಿಕ್ಕ ಗಡಿಯಾರದ ಬಳಿ ಬೀದಿ ನಾಟಕ ಪ್ರದರ್ಶಿಸಿದರು.

ಮೈಸೂರು, ಜ.12(ಎಸ್‌ಬಿಡಿ)– ಜಾಗೃತಿ ಬೀದಿ ನಾಟಕಗಳ ಮೂಲಕ ಮೈಸೂರಿನ ಛಾಯಾದೇವಿ ಬಿ.ಇಡಿ ಕಾಲೇಜು ವತಿಯಿಂದ ಶುಕ್ರವಾರ ರಾಷ್ಟ್ರೀಯ ಯುವ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ನಗರದ ಚಿಕ್ಕ ಗಡಿಯಾರದ ಬಳಿ ಕಾಲೇಜಿನ ಪ್ರಶಿಕ್ಷಣಾರ್ಥಿಗಳು ಮೂರು ತಂಡಗಳಲ್ಲಿ ಬೀದಿ ನಾಟಕಗಳನ್ನು ಅಭಿನಯಿಸಿ, ಹಲವು ಪ್ರಭಾವಗಳಿಂದ ಹಾದಿ ತಪ್ಪುತ್ತಿರುವ ಯುವ ಸಮುದಾಯವನ್ನು ಎಚ್ಚರಿಸುವ ಪ್ರಯತ್ನ ಮಾಡಿದರು.

ಸ್ವಾಮಿ ವಿವೇಕಾನಂದ ತಂಡದ ಪ್ರಶಿಕ್ಷಣಾರ್ಥಿಗಳು 'ದ್ರವ್ಯ ಮಾದಕ ಜೀವಕ್ಕೆ ಬಾಧಕ' ನಾಟಕ ಅಭಿನಯಿಸುವ ಮೂಲಕ ಮಾದಕ ವಸ್ತುಗಳಿಗೆ ದಾಸರಾಗುತ್ತಿರುವ ಯುವ ಜನತೆಯ ದುಸ್ಥಿತಿಯನ್ನು ಕಣ್ಣಿಗೆ ಕಟ್ಟಿದರು. ಭವಿಷ್ಯದ ಪ್ರಜೆಗಳು ದಾರಿತಪ್ಪಿದರೆ ಕುಟುಂಬ ಹಾಗೂ ಸಮಾಜದ ಮೇಲಾಗುವ ದುಷ್ಪರಿಣಾಮವನ್ನು ಮನಮುಟ್ಟಿಸಿದರು. ಜೊತೆಗೆ ಮಾದಕ ವಸ್ತುಗಳಿಗೆ ಬಲಿಯಾಗಿ ಅತ್ಯ ಮೂಲ್ಯ ಜೀವ ಹಾಗೂ ಜೀವನವನ್ನು ಹಾಳು ಮಾಡಿಕೊಳ್ಳದಂತೆ ಅರಿವು ಮೂಡಿಸಿದರು.

ಹೆಗಲೆತ್ತರಕ್ಕೆ ಬೆಳೆಯುವವರೆಗೂ ಮಕ್ಕಳನ್ನು ಮುದ್ದಾಗಿ ಸಾಕುವ ಅಪ್ಪ–ಅಮ್ಮ, ತಮ್ಮ ಇಳಿ ವಯಸ್ಸಿನಲ್ಲಿ ಅನಾಥರಂತಾಗುತ್ತಾರೆ. ಎಲ್ಲರೂ ಇದ್ದೂ ಏನೂ ಇಲ್ಲದವರಂತೆ ಬದುಕು ದೂಡುತ್ತಾರೆ. ಜನ್ಮ ನೀಡಿ, ಆರೈಕೆ ಮಾಡಿ, ಶಿಕ್ಷಣ ಕೊಡಿಸಿ, ಉದ್ಯೋಗ ಪಡೆಯುವವರೆಗೂ ಜೋಪಾನ ಮಾಡಿದ ತಂದೆ–ತಾಯಿಗೆ ವಯಸ್ಸಾಗುತ್ತಿದ್ದಂತೆ ಅವರನ್ನು ತಿರಸ್ಕರಿಸುವವರ ಸಂಖ್ಯೆ ಹೆಚ್ಚುತ್ತಲೇ ಇದೆ. ಮಡಿಲು–ಹೆಗಲಲ್ಲಿ ಎತ್ತಿ ಆಡಿಸಿ, ಬೆಳೆಸಿದ ಮಗು, ತಾವು ಮಗುವಂತಾದಾಗ ದೂರತಳ್ಳುವ ನೋವಿನ ಕ್ಷಣವನ್ನು ಹಿರಿಯ ಜೀವಗಳು ಸಹಿಸುವುದಾದರೂ ಹೇಗೆ?. ಇಂತಹ ಮನಃಕಲಕುವ ಸನ್ನಿವೇಶವನ್ನು ಎಪಿಜೆ ಅಬ್ದುಲ್ ಕಲಾಂ ತಂಡ 'ಪೋಷಕರನ್ನು ತಿರಸ್ಕರಿಸುವುದು ಮಹಾಪಾಪ' ನಾಟಕದ ಮೂಲಕ ನೆರೆದಿದ್ದವರ ಮನ ಮುಟ್ಟಿಸಿತು.

ಡಾ.ಬಿ.ಆರ್.ಅಂಬೇಡ್ಕರ್ ತಂಡದ 'ಮೊಬೈಲ್‌ನಿಂದ ಹಾಳಾಗುತ್ತಿರುವ ಯುವ ಜನತೆ' ನಾಟಕವೂ ಗಮನ ಸೆಳೆಯಿತು. ಆಧುನಿಕ ತಂತ್ರಜ್ಞಾನ ಅಭಿವೃದ್ಧಿಗೆ ಪೂರಕವಾಗಿರಬೇಕೇ ಹೊರತು ಅದುವೇ ಮಾರಕವಾಗುವಂತೆ ಬಳಸಿಕೊಳ್ಳಬಾರದು. ಆದರೆ ಉಪಯೋಗಕಾರಿ ಮೊಬೈಲ್, ಎಲ್ಲರನ್ನೂ ತನ್ನ ತೆಕ್ಕೆಯಲ್ಲಿ ಸೆಳೆದಿಟ್ಟುಕೊಂಡಿದೆ. ಅದರಲ್ಲೂ ಯುವ ಜನತೆಗೆ ಮೊಬೈಲ್ ಜೀವನಾಡಿಯಂತಾಗಿದೆ. ಒಂದು ರೀತಿಯಲ್ಲಿ ಮೊಬೈಲ್ ಮಾದಕ ವಸ್ತುವಿನಂತಾಗಿದೆ. ಯುವ ಜನತೆ ಅತ್ಯಂತ ಎಚ್ಚರಿಕೆಯಿಂದ ಸದ್ಬಳಕೆ ಮಾಡಿಕೊಳ್ಳದಿದ್ದರೆ ಮೊಬೈಲ್ ಅತ್ಯಂತ ಮಾರಕವಾಗಲಿದೆ ಎಂಬ ಎಚ್ಚರಿಕೆ ಸಂದೇಶ ಸಾರಿತು.

ಇದಕ್ಕೂ ಮುನ್ನ ದೇವರಾಜ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಬಿ.ಶಿವಕುಮಾರ್ ಬೀದಿ ನಾಟಕ ಪ್ರದರ್ಶನಕ್ಕೆ ಚಾಲನೆ ನೀಡಿ, ಸಮಾಜದಲ್ಲಿ ಯುವ ಜನತೆಯ ಮಹತ್ವದ ಪಾತ್ರದ ಬಗ್ಗೆ ಕಿವಿಮಾತು ಹೇಳಿದರು. ಕಾಲೇಜಿನ ಪ್ರಾಂಶುಪಾಲರಾದ ಡಾ.ಸಿ.ಆಂತೋಣಿ ಪಾಲ್ ರಾಜ್, ಪ್ರಾಧ್ಯಾಪಕರಾದ ಸುಮಾ, ರೇಖಾ, ಪಲ್ಲವಿ, ಪೂಜಾ, ಪಂಪತೀರ್ಥ, ಎನ್.ತೇಜಸ್ವಿ, ಬಲರಾಮ್, ಕಾರ್ಯಕ್ರಮ ಸಂಯೋಜಕರಾದ ಸಹಾಯಕ ಪ್ರಾಧ್ಯಾಪಕ ಜಿ.ಆರ್.ಉಮೇಶ್ ಉಪಸ್ಥಿತರಿದ್ದರು.

ಮೈಸೂರು ರುಡ್‌ಸೆಟ್‌ನ ವಿವಿಧ ತರಬೇತಿ ಶಿಬಿರ ಅಂತ್ಯ


ಮೈಸೂರಿನ ರುಡ್‌ಸೆಟ್ ಸಂಸ್ಥೆಯಲ್ಲಿ ಫೋಟೋಗ್ರಫಿ ಮತ್ತು ವಿಡಿಯೋಗ್ರಫಿ ತರಬೇತಿ ಸಮಾರೋಪದ ವೇಳೆ ಗಣ್ಯರು ಛಾಯಾಚಿತ್ರಗಳನ್ನು ವೀಕ್ಷಿಸಿದರು.

ಮೈಸೂರು, ಜ.12(ಎಸ್‌ಬಿಡಿ)– ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್(ಎನ್‌ಆರ್‌ಎಲ್‌ಎಂ) ಸಹಯೋಗದಲ್ಲಿ ಮೈಸೂರಿನ ರುಡ್‌ಸೆಟ್ ಸಂಸ್ಥೆಯಲ್ಲಿ ಉದ್ಯಮಶೀಲತಾಭಿವೃದ್ಧಿ, ಫೋಟೋಗ್ರಫಿ ಮತ್ತು ವಿಡಿಯೋಗ್ರಫಿ ತರಬೇತಿ ಸಮಾರೋಪಗೊಂಡಿತು. ಕೆನರಾ ಬ್ಯಾಂಕ್ ಮೈಸೂರು ಗ್ರಾಮೀಣ ಕ್ಷೇತ್ರೀಯ ಪ್ರಬಂಧಕ ಪಿ.ಎಸ್.ಉಮೇಶ್, ಸಮಾರೋಪ ಸಮಾರಂಭದಲ್ಲಿ ಗುರುವಾರ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಿದರಲ್ಲದೆ, ತರಬೇತಿ ಅವಧಿಯಲ್ಲಿ ಅವರು ಸೆರೆ ಹಿಡಿದ ಛಾಯಾಚಿತ್ರಗಳ ಪ್ರದರ್ಶನಕ್ಕೂ ಚಾಲನೆ ನೀಡಿ, ಮೆಚ್ಚುಗೆ ವ್ಯಕ್ತಪಡಿಸಿದರು.

ಈ ವೇಳೆ ಅವರು ಮಾತನಾಡಿ, ಕತ್ತಲೆಯಿಂದ ಬೆಳಕಿನೆಡೆಗೆ ಕ್ರಾಂತಿಕಾರಿ ಹೆಜ್ಜೆಗಳನ್ನಿಟ್ಟು ಬೆಳೆದುಬಂದ ಉದ್ಯಮ ಫೋಟೋಗ್ರಫಿ. ಹೊಸ ಹೊಸ ವಿನ್ಯಾಸ, ತಂತ್ರಜ್ಞಾನದೊಂದಿಗೆ ಬೆರೆತು ವಿನೂತನ ರೀತಿಯಲ್ಲಿ ಬೆಳೆದು ಬಂದಿದೆ. ಪ್ರಸ್ತುತ ಫೋಟೋಗ್ರಫಿ ಹಾಗೂ ವಿಡಿಯೋಗ್ರಫಿ ಕ್ಷೇತ್ರದಲ್ಲಿ ವಿಫುಲ ಅವಕಾಶಗಳು ಸೃಷ್ಟಿಯಾಗಿವೆ. ಸೃಜನಾತ್ಮಕ ಮನೋಭಾವ ಮತ್ತು ಕೌಶಲ್ಯವುಳ್ಳವರಿಗೆ ಈ ಕ್ಷೇತ್ರದಲ್ಲಿ ಭಾರೀ ಬೇಡಿಕೆ ಇದೆ. ಆದರೆ ಒಮ್ಮೆಲೆ ಪ್ರಸಿದ್ಧರಾಗಲು ಸಾಧ್ಯವಿಲ್ಲ. ನಿರಂತರ ಪ್ರಯತ್ನಶೀಲತೆಯೊಂದಿಗೆ ಸೂರ್ಯಕಾಂತಿಯಂತೆ ಅರಳಬೇಕು ಎಂದು ಕಿವಿಮಾತು ಹೇಳಿದರು.

ವನ್ಯಜೀವಿ ಛಾಯಾಗ್ರಾಹಕ ತಿಪ್ಪೇಸ್ವಾಮಿ ಮಾತನಾಡಿ, ಯಾವುದೇ ಕ್ಷೇತ್ರದಲ್ಲಿ ಬೆಳವಣಿಗೆ ಕಾಣಲು ಆತ್ಮಸ್ಥೈರ್ಯ ಬಹಳ ಮುಖ್ಯ. ಎಂತಹ ಸಂಕಷ್ಟದ ಸನಿವೇಶದಲ್ಲೂ ಧನಾತ್ಮಕ ಚಿಂತನೆಗಳಿಂದ ನಾವು ವಿಮುಖವಾಗಬಾರದು. ಸಮಸ್ಯೆಗಳನ್ನು ಸವಾಲಾಗಿ ಸ್ವೀಕರಿಸಿ ವಿಶ್ವಾಸದಿಂದ ಮುನ್ನಡೆಯಬೇಕು. ನಮ್ಮೊಳಗಿನ ಶಕ್ತಿಯನ್ನು ಜಾಗೃತಗೊಳಿಸಬೇಕು. ನಮ್ಮನ್ನು ನಾವು ಓರೆಹಚ್ಚಿ ಚುರುಕುತನದಿಂದ ಕೆಲಸ ಮಾಡುವ ಕೌಶಲ್ಯ ರೂಢಿಸಿಕೊಳ್ಳಬೇಕು. ತಾಂತ್ರಿಕ ಅನುಭವದೊಂದಿಗೆ ಬದ್ಧತೆಯಿಂದ ಕೆಲಸ ಮಾಡಿದರೆ ಯಶಸ್ಸು ಸಾಧ್ಯ ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ನಿವೃತ್ತ ಎಲ್‌ಡಿಸಿಎಂ ಬಾಲಚಂದ್ರ, ಛಾಯಾಗ್ರಹಣ ತರಬೇತುದಾರರಾದ ಗಿರಿಮಂಜು, ಸೂರ್ಯಪ್ರಕಾಶ್, ರುಡ್‌ಸೆಟ್ ಸಂಸ್ಥೆ ನಿರ್ದೇಶಕಿ ಕೆ.ಎಸ್.ಸರಿತಾ, ಉಪನ್ಯಾಸಕರಾದ ಆರ್.ಪಾಲ್‌ರಾಜ್, ಲತಾಮಣಿ ಹಾಗೂ ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

ಡಾ.ರಾ.ವಿಶ್ವೇಶ್ವರನ್‌ರಿಗೆ 'ವೀಣಾ ವಾಗ್ಗೇಯ ವಿಭೂಷಣ' ಪ್ರಶಸ್ತಿ ಪ್ರದಾನ



ಮೈಸೂರು ಕುವೆಂಪುನಗರ ರಮಾಗೋವಿಂದ ಕಲಾಮಂದಿರದಲ್ಲಿ ಕಲಾಸಂದೇಶ ಪ್ರತಿಷ್ಠಾನದ ವತಿಯಿಂದ ನಡೆದ ಕಲಾಭಿವರ್ಧನ –2024ರ ಕಾರ್ಯಕ್ರಮದಲ್ಲಿ ಹಿರಿಯ ಕಲಾವಿದ ವಿದ್ವಾನ್ ಡಾ.ರಾ.ವಿಶ್ವೇಶ್ವರನ್ ಅವರಿಗೆ 'ವೀಣಾ ವಾಗ್ಗೇಯ ವಿಭೂಷಣ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು, ಜ.12(ಎಸ್‌ಪಿಎನ್)– ಮೈಸೂರು ಕುವೆಂಪುನಗರ ರಮಾ ಗೋವಿಂದ ಕಲಾಮಂದಿರದಲ್ಲಿ ಕಲಾ ಸಂದೇಶ ಪ್ರತಿಷ್ಠಾನದ 20ನೇ ವಾರ್ಷಿಕೋತ್ಸವದ ಅಂಗವಾಗಿ ಮೂರು ದಿನಗಳ ಕಲಾಭಿವರ್ಧನ –2024ರ ಕಾರ್ಯಕ್ರಮ ಏರ್ಪಡಿಸಿದ್ದು, ಈ ವೇಳೆ ಹಿರಿಯ ಕಲಾವಿದ ವಿದ್ವಾನ್ ಡಾ.ರಾ.ವಿಶ್ವೇಶ್ವರನ್ ಅವರಿಗೆ 'ವೀಣಾ ವಾಗ್ಗೇಯ ವಿಭೂಷಣ' ಪ್ರಶಸ್ತಿಯನ್ನು, ಖ್ಯಾತ ಮೃದಂಗ ವಾದಕ ಆನೂರು ಅನಂತಕೃಷ್ಣ ಶರ್ಮ ಶುಕ್ರವಾರ ಪ್ರದಾನ ಮಾಡಿದರು.

ನಂತರ ಮಾತನಾಡಿ, ಹಿರಿಯ ಕಲಾವಿದರಾದ ಡಾ.ವಸುಂಧರೆ ದೊರೆಸ್ವಾಮಿ ಹಾಗೂ ಖ್ಯಾತ ವೀಣಾವಾದಕ ರಾ.ವಿಶ್ವೇಶ್ವರನ್ ಅವರು ಇಂದಿಗೂ ಯುವಕರು ನಾಚುವಂತೆ ವೇದಿಕೆಯಲ್ಲಿ ಪ್ರದರ್ಶನ ನೀಡುವಲ್ಲಿ ತಲೀನರಾಗುತ್ತಾರೆ. ಶೋತೃಗಳನ್ನು ಕಲೆಯಲ್ಲಿ ಭಾವ ಪರವಶರಾಗುವಂತೆ ಮಾಡುವ ಕೀರ್ತಿ ಇವರಿಗೆ ಸಲ್ಲುತ್ತದೆ. ಅಂದರೆ, ಮೈಸೂರಿನ ಶಾಸ್ತ್ರೀಯ ಕಲಾಕ್ಷೇತ್ರದಲ್ಲಿ ಈ ಇಬ್ಬರು ಕಲಾವಿದರು ಧ್ರುವತಾರೆಗಳಿದ್ದಂತೆ ಎಂದು ಬಣ್ಣಿಸಿದರು.

ಹಿರಿಯ ಕಲಾವಿದ ವಿದ್ವಾನ್ ಡಾ.ರಾ.ವಿಶ್ವೇಶ್ವರನ್ ಅವರು ಕಳೆದ 80 ವರ್ಷಗಳಿಂದ ವೀಣಾವಾದನದಲ್ಲಿ ತೊಡಗಿ, ಹಲವು ಶಿಷ್ಯವೃಂದವನ್ನು ಹುಟ್ಟು ಹಾಕಿ, ಭಾರತೀಯ ಪರಂಪರೆಗೆ ತಮ್ಮದೆ ಕೊಡುಗೆ ನೀಡಿದ್ದಾರೆ ಅದೇ ರೀತಿ ಖ್ಯಾತ ನಾಟ್ಯ ಕಲಾವಿದೆ ಡಾ.ವಸುಂಧರ ದೊರೆಸ್ವಾಮಿಯವರು ಹಲವು ಯುವಕ–ಯುವತಿಯರಿಗೆ ನಾಟ್ಯ ಕಲೆಗಳನ್ನು ಕಲಿಸಿ, ಭಾರತೀಯ ಪರಂಪರೆ ಉಳಿವಿಗೆ ಶ್ರಮಿಸಿದ್ದಾರೆ ಎಂದು ತಿಳಿಸಿದರು.

ವಿದ್ವಾನ್ ರಾಮಮೂರ್ತಿ ರಾವ್ ಮಾತನಾಡಿ, ಕಲಾಭಿವರ್ಧನ ಹೆಸರೇ ಸೂಚಿಸುವಂತೆ ಕಲೆಯ ಅಭಿವರ್ಧನೆಗಾಗಿ ಇರುವ ಸಂಸ್ಥೆ. ಈ ಸಂಸ್ಥೆ ಹಲವು ವರ್ಷಗಳಿಂದ ಹಿರಿಯ ಕಲಾವಿದರೊಂದಿಗೆ ಕಿರಿಯ ಕಲಾವಿದರನ್ನು ಒಗ್ಗೂಡಿಸಿ, ಭಾರತೀಯ ಪರಂಪರೆ ಉಳಿಸುವಲ್ಲಿ ಈ ಸಂಸ್ಥೆಯ ಕೊಡುಗೆ ಅಪಾರ. ಅಲ್ಲದೆ, 2014ರಲ್ಲಿ ಡಾ.ವಸುಂಧರಾ ದೊರೆಸ್ವಾಮಿ ಅವರಿಗೆ ಭರತನಾಟ್ಯ ಕ್ಷೇತ್ರದಿಂದ 'ನಾಟ್ಯ ಕಲೋತ್ತುಂಗ', ಕರ್ನಾಟಕ ಸಂಗೀತ ಕ್ಷೇತ್ರದಿಂದ ವಿದ್ವಾನ್ ಡಾ.ರಾ.ಸ.ನಂದಕುಮಾರ್ ಅವರಿಗೆ 'ಸಂಗೀತ ಕಲೋತ್ತುಂಗ' ಪ್ರಶಸ್ತಿ ಪ್ರದಾನ ಮಾಡಲಾಗಿದೆ ಎಂದರು.

ಯುವಕರನ್ನು ಕಲಾ ಕ್ಷೇತ್ರಕ್ಕೆ ಪರಿಚಯಿಸುವುದರ ಜೊತೆಗೆ ದೊಡ್ಡ ದೊಡ್ಡ ವಿದ್ವಾಂಸರನ್ನು ಗುರುತಿಸಿ ಪ್ರಶಸ್ತಿಗಳನ್ನು ಕಲಾಸಂದೇಶ ಪ್ರತಿಷ್ಠಾನ ವತಿಯಿಂದ ನೀಡಿ ಗೌರವಿಸಲಾಗುತ್ತಿದೆ. ಅದೇ ರೀತಿ ಈ ಸಾಲಿನಲ್ಲಿ ವಿದ್ವಾನ್ ಡಾ.ರಾ.ವಿಶ್ವೇಶ್ವರನ್ ಅವರಿಗೆ 'ವೀಣಾ ವಾಗ್ಗೇಯ ವಿಭೂಷಣ' ಗೌರವಿಸಿರುವುದು ಕಲಾಕ್ಷೇತ್ರಕ್ಕೆ ಹೆಮ್ಮೆಯ ವಿಷಯ ಎಂದರಲ್ಲದೆ, ರಾ.ವಿಶ್ವೇಶ್ವರನ್ ಅವರು, 150 ಕಲೆಗೆ ಸಂಬಂಧಪಟ್ಟ ಪುಸ್ತಕಗಳನ್ನು ಬರೆದಿದ್ದಾರೆ. ರಾಗ–ತಾಳ–ಲಯಗಳನ್ನು ಏರಿಳಿತಗಳ ಬಗ್ಗೆ ಬಲ್ಲವರಾಗಿದ್ದಾರೆ ಎಂದು ತಿಳಿಸಿದರು.

ವೇದಿಕೆ ಕಾರ್ಯಕ್ರಮ ನಂತರ ವಿದ್ವಾನ್ ರಾ.ವಿಶ್ವೇಶ್ವರನ್ ಅವರು ನುಡಿಸಿದ ವೀಣಾವಾದನ ಸ್ಥಿಕರ ಮನಸೂರೆಗೊಂಡಿತು. ಇದಕ್ಕೆ ವಿದ್ವಾನ್ ಆನೂರು ಅನಂತಕೃಷ್ಣ ಶರ್ಮ ಅವರು ಮೃದಂಗ ನುಡಿಸಿ, ವೀಣಾ ವಾದನ ಕಛೇರಿಗೆ ಮೆರುಗುತಂದರು.

ಈ ವೇದಿಕೆಯಲ್ಲಿ ವಿದ್ವಾನ್ ರಾ.ಸ.ನಂದಕುಮಾರ್, ಪಿಟೀಲು ವಾದಕ ವಿದ್ವಾನ್ ಎಚ್.ಕೆ.ನರಸಿಂಹಮೂರ್ತಿ, ಮೃದಂಗ ವಾದಕ ವಿದ್ವಾನ್ ಎಚ್.ಎಲ್. ಶಿವಶಂಕರಸ್ವಾಮಿ, ವಿದುಷಿ ತುಳಸಿರಾಮ ಚಂದ್ರ ವಿದುಷಿ ಶೀಲಾ ಶ್ರೀಧರ್, ವಿದ್ವಾನ್ ಆರ್.ಕಣ್ಣನ್, ವಿದುಷಿ ರೋಹಿಣಿ ಸುಬ್ಬರತ್ನಂ, ವಿದುಷಿ ಡಾ.ಜ್ಯೋತಿ ಶಂಕರ್, ವಿದ್ವಾನ್ ಆರ್.ಕೆ.ಪದ್ಮನಾಭ, ಡಾ.ವಸುಂಧರೆ ದೊರೆಸ್ವಾಮಿ ಉಪಸ್ಥಿತರಿದ್ದರು.

ಜ.13ರಂದು ವಿದ್ವಾನ್ ಕೆ.ಸಂದೇಶ ಭಾರ್ಗವ್ ಅವರು ಭರತನಾಟ್ಯ ಪದ್ಧತಿಯಲ್ಲಿ 'ಮಾರ್ಗ' ಅತ್ಯಂತ ಪ್ರಾಚೀನವಾದುದು ಮತ್ತು ಪ್ರಸಿದ್ಧಿಯನ್ನು ಪಡೆದಿರುವ ಸಾಂಪ್ರದಾಯಿಕ ಪಸ್ತುತಿಯಾಗಿದ್ದು, 'ಭಾಗವತ ಮಾರ್ಗ' ಪರಿಕಲ್ಪನೆಯಲ್ಲಿ ಖ್ಯಾತ ನೃತ್ಯಕಲಾವಿದ ಕೆ.ಸಂದೇಶ್ ಭಾರ್ಗವ್ ಅವರು ಭರತನಾಟ್ಯ ಪ್ರದರ್ಶಿಸಲಿದ್ದಾರೆ. ಜ.14ರಂದು ವಿದುಷಿ ಆಶಾ ಅಡಿಗ ಆಚಾರ್ಯ ಹಾಗೂ ಆದಿತಿ ಆಚಾರ್ಯ ಅವರಿಂದ ತ್ರಿದೇವಿ ಭರತನಾಟ್ಯ ರೂಪಕ ನಡೆಸಿಕೊಡಲಿದ್ದಾರೆ. ನಂತರ ಕಲಾಸಂದೇಶ ಪ್ರತಿಷ್ಠಾನದ ಕಲಾವಿದರು ದ್ವಾದಶ ಜ್ಯೋತಿರ್ಲಿಂಗ ಭರತನಾಟ್ಯ ನೃತ್ಯರೂಪಕ ಪ್ರದರ್ಶಿಸಲಿದ್ದಾರೆ.

ಗಾಣಿಗ ಸಮುದಾಯಕ್ಕೆ ರಾಜಕೀಯ ಪ್ರಾತಿನಿಧ್ಯ ಒದಗಿಸುವುದು ಅತ್ಯವಶ್ಯಕ

ಮಾಜಿ ಎಂಎಲ್‌ಸಿ ಧರ್ಮಸೇನಾ ಅಭಿಮತ


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗಾಣಿಗ ಮಹಾಸಭಾದ ನೂತನ ವರ್ಷದ ಕಾಲೆಂಡರ್ ಅನ್ನು ವಿಧಾನ ಪರಿಷತ್ ಮಾಜಿ ಸದಸ್ಯ ಆರ್.ಧರ್ಮಸೇನಾ ಬಿಡುಗಡೆ ಮಾಡಿದರು.

ಮೈಸೂರು, ಜ.12(ಎಂಟಿವೈ)– ಸಮಾಜದ ಎಲ್ಲಾ ಕ್ಷೇತ್ರಗಳಲ್ಲೂ ಹಿಂದು ಳಿದಿರುವ ಗಾಣಿಗ ಸಮುದಾಯಕ್ಕೆ ರಾಜಕೀಯ ಪ್ರಾತಿನಿಧ್ಯ ಒದಗಿಸುವ ಅವಶ್ಯಕತೆ ಇದೆ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಆರ್.ಧರ್ಮಸೇನಾ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನ ದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಗಾಣಿಗ ಮಹಾಸಭಾದ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಿ ಮಾತನಾಡಿದ ಅವರು, ಗಾಣಿಗ ಸಮುದಾಯ ಅತಿ ಹಿಂದುಳಿದಿದ್ದರೂ ಎಲ್ಲಾ ಸಮುದಾಯದೊಂದಿಗೆ ಸಮನ್ವಯತೆ ಯಿಂದ ಬೆರೆತು ಕೆಲಸ ಮಾಡುತ್ತಿರುವುದು ಶ್ಲಾಘನೀಯವಾಗಿದೆ. ಆದರೆ ಸಮುದಾಯವು ಇನ್ನಷ್ಟು ಗಟ್ಟಿಯಾಗಿ ಸಂಘಟನೆಯಾಗ ಬೇಕು. ಆ ಬಳಿಕ ರಾಜಕೀಯ ಸೇರಿದಂತೆ ಇನ್ನಿತರ ಕ್ಷೇತ್ರಗಳಲ್ಲಿ ಸೌಲಭ್ಯ ಪಡೆಯಲು ಯತ್ನಿಸಬೇಕೆಂದು ಸಲಹೆ ನೀಡಿದರು.

ಗಾಣಿಗ ಮಹಾಸಭಾ ಅಧ್ಯಕ್ಷ ಡಾ.ಕೆ. ವಿಜಯಕುಮಾರ್ ಮಾತನಾಡಿ, ಸಮುದಾಯ ಬಹಳಷ್ಟು ತುಳಿತಕ್ಕೆ ಒಳಗಾಗಿದೆ. ಆದ್ದರಿಂದ ಈಗಾಗಲೇ ಸಿದ್ಧಗೊಂಡಿರುವ ಜಾತಿ ಜನಗಣತಿ ವರದಿ ಜಾರಿಗೊಳಿಸುವ ಮೂಲಕ ಸರ್ಕಾರ ಸೌಲಭ್ಯ ಒದಗಿಸಬೇಕು. ತಮ್ಮ ಸಮು ದಾಯ ಪ್ರಬಲರೊಡನೆ ಹೋರಾಡಿ ಸೌಲಭ್ಯ ಪಡೆಯುವುದು ಅಸಾಧ್ಯ ವಾಗಿದೆ. ಹೀಗಾಗಿ ವರದಿ ಜಾರಿಗೊಳಿ ಸಿದಲ್ಲಿ ತಮ್ಮಂತಹ ಸಮುದಾಯಗಳಿಗೆ ನೆರವಾಗುತ್ತದೆ ಎಂದರು. ಈ ಸಂದರ್ಭ ದಲ್ಲಿ ಚಲನಚಿತ್ರ ನಿರ್ದೇಶಕ ಎ.ಸಿ. ಪೂರ್ಣಚಂದ್ರ, ಗಾಣಿಗ ಮಹಾಸಭಾ ಸದಸ್ಯರಾದ ಸಿ.ಕೆ. ಸುಮ, ಹರಿಪ್ರಕಾಶ್, ನಾಗಲಿಂಗಪ್ಪ ಹಾಗೂ ಇನ್ನಿತರರು ಇದ್ದರು.

'ಮೈಸೂರು ಫೆಸ್ಟ್' ಹೆಸರನ್ನು 'ಮೈಸೂರು ಹಬ್ಬ' ಎಂದು ಬದಲಿಸುವಂತೆ ಒತ್ತಾಯ


'ಮೈಸೂರು ಫೆಸ್ಟ್' ಬದಲು 'ಮೈಸೂರು ಹಬ್ಬ' ಎಂದು ಬಳಸುವಂತೆ ಕನ್ನಡ ಕ್ರಿಯಾ ಸಮಿತಿ ವತಿಯಿಂದ ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕರಿಗೆ ಶುಕ್ರವಾರ ಮನವಿ ಸಲ್ಲಿಸಿದರು.

ಮೈಸೂರು,ಜ.12(ಜಿಎ)– 'ಮೈಸೂರು ಫೆಸ್ಟ್' ಎನ್ನುವುದರ ಬದಲು 'ಮೈಸೂರು ಹಬ್ಬ' ಎಂದು ಬಳಸುವ ಮೂಲಕ ಕನ್ನಡಕ್ಕೆ ಪ್ರಾಧಾನ್ಯತೆ ನೀಡಬೇಕೆಂದು ಕನ್ನಡ ಕ್ರಿಯಾ ಸಮಿತಿ ವತಿಯಿಂದ ಪ್ರವಾ ಸೋದ್ಯಮ ಇಲಾಖೆ ಜಂಟಿ ನಿರ್ದೇಶಕರಿಗೆ ಶುಕ್ರವಾರ ಮನವಿ ಸಲ್ಲಿಸಲಾಯಿತು.

ಮೈಸೂರಿನ ಮಾನಸಗಂಗೋತ್ರಿಯ ಬಯಲು ರಂಗಮಂದಿರಲ್ಲಿ ಜ.26ರಂದು ಆಯೋಜಿಸಿರುವ ಮೈಸೂರು ಫೆಸ್ಟ್‌ನಲ್ಲಿ ಪ್ರದರ್ಶಿಸಲಾಗುವ ಎಲ್ಲಾ ತರಹದ ಜಾಹೀರಾತು, ನಾಮಫಲಕ, ಪ್ರಚಾರ ಸಾಮಗ್ರಿಗಳಲ್ಲಿ ಕನ್ನಡಕ್ಕೆ ಪ್ರಾಧನ್ಯತೆ ನೀಡಿ ರಾಜ್ಯ ಸರ್ಕಾರದ ನೀತಿಯಂತೆ ಶೇ.60ರಷ್ಟು ಮೊದಲಿಗೆ ಕನ್ನಡ ಬಳಸಿ ನಂತರ ಇಂಗ್ಲಿಷ್ ಬಳಸಬೇಕು ಎಂದು ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಮತ್ತು ಮೈಸೂರು ಫೆಸ್ಟ್ ವ್ಯವಸ್ಥಾಪಕರೂ ಆದ ಎಂ.ಕೆ.ಸವಿತಾ ಅವರಿಗೆ ಕನ್ನಡ ಕ್ರಿಯಾ ಸಮಿತಿ ಪದಾಧಿಕಾರಿಗಳು ಒತ್ತಾಯಿಸಿದರು.

ಮೈಸೂರು ಫೆಸ್ಟ್ ಲಾಂಛನದಲ್ಲಿ ಕನ್ನಡ ಕೇವಲ ಮೂರನೇ ಒಂದು ಭಾಗದಷ್ಟು ಮಾತ್ರ ಇದೆ. ಆದ್ದರಿಂದ ಕೂಡಲೇ ಈ ಲಾಂಛನವನ್ನು ಸರ್ಕಾರದ ಭಾಷಾ ನೀತಿಯಂತೆ ಬದಲಾಯಿಸಿ ಬಳಸಬೇಕು. ಉತ್ಸವವನ್ನು ಕನ್ನಡದಲ್ಲಿ 'ಮೈಸೂರು ಹಬ್ಬ' ಎಂದು ಕರೆಯಬೇಕು. ಇಂಗ್ಲಿಷ್‌ನಲ್ಲಿ ಬೇಕಾದರೆ, ಫೆಸ್ಟ್ ಎಂದು ಕರೆದುಕೊಳ್ಳಲಿ. ಆದರೆ, ಕನ್ನಡವನ್ನು ಕಡೆಗಣಿಸಿ ಮಸಿ ಬಳಿಯಲು ಪ್ರಚೋದಿಸಬೇಡಿ ಎಂದು ಎಚ್ಚರಿಸಿದರು.

ಈ ವೇಳೆ ಸಮಿತಿ ಅಧ್ಯಕ್ಷ ಮ.ಗು.ಸದಾನಂದಯ್ಯ, ಜಿ.ಪ್ರಕಾಶ್, ಮಾನಸ, ಸ.ರ.ಸುದರ್ಶನ್, ಸಿದ್ದಪ್ಪ, ಕೊ.ಸು.ನರಸಿಂಹ ಮೂರ್ತಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಲೋಕಾಯುಕ್ತ ಬಲೆಗೆ ಎಸ್‌ಡಿಎ

ಪಾಂಡವಪುರ, ಜ.12– ಪಟ್ಟಣದ ಬಿಇಓ ಕಚೇರಿಯ ಎಸ್‌ಡಿಎ ನಿವೃತ್ತ ಶಿಕ್ಷಕನಿಂದ 12 ಸಾವಿರ ರೂ. ಲಂಚ ಸ್ವೀಕರಿಸುತ್ತಿದ್ದ ವೇಳೆ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ. ಇಲ್ಲಿನ ಬಿಇಓ ಕಚೇರಿ ಸಿಬ್ಬಂದಿ ವೆಂಕಟೇಶ್ ಲೋಕಾಯುಕ್ತ ಬಲೆಗೆ ಬಿದ್ದವರು.



ವಿವರ: ಚಿನಕುರಳಿ ಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದ ಶಿಕ್ಷ ಸುರೇಶ್‌ಬಾಬು ಅವರು ಪಿಂಚಣಿ ಪಡೆಯಲು ದಾಖಲೆ ನೀಡುವಂತೆ ಮನವಿ ಸಲ್ಲಿಸಿದರು. ಆದರೆ, ದಾಖಲೆ ಒದಗಿಸಲು ಎಸ್‌ಡಿಎ ವೆಂಕಟೇಶ್ 12 ಸಾವಿರಕ್ಕೆ ಬೇಡಿಕೆ ಇಟ್ಟಿದ್ದರು. ಈ ಸಂಬಂಧ ನಿವೃತ್ತ ಶಿಕ್ಷಕ ಸುರೇಶ್ ಬಾಬು ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು. ಶುಕ್ರವಾರ ಮಧ್ಯಾಹ್ನ ಬಿಇಓ ಕಚೇರಿಯಲ್ಲಿ ವೆಂಕಟೇಶ್, ಸುರೇಶ್ ಬಾಬು ಅವರಿಂದ ಲಂಚ ಸ್ವೀಕರಿಸುವ ವೇಳೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ ವಶಕ್ಕೆ ಪಡೆದು ಗಂಟೆಗೂ ಹೆಚ್ಚು ಕಾಲ ವಿಚಾರಣೆಗೆ ಒಳಪಡಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ವೆಂಕಟೇಶ್ ಈ ಹಿಂದೆಯೂ ಬೇರೊಬ್ಬ ಶಿಕ್ಷಕನಿಂದ 33 ಸಾವಿರ ಲಂಚ ಪಡೆದಿರುವುದು ಪೊಲೀಸರ ತನಿಖೆ ಬೆಳಕಿಗೆ ಬಂದಿದೆ. ಕಾರ್ಯಾಚರಣೆಯಲ್ಲಿ ಡಿವೈಎಸ್ಪಿ ಸುನೀಲ್ ಕುಮಾರ್, ಸರ್ಕಲ್ ಇನ್ಸ್‌ಪೆಕ್ಟರ್ ಪ್ರಕಾಶ್ ಹಾಗೂ ಸಿಬ್ಬಂದಿ ಹಾಜರಿದ್ದರು.

ಸಂಸದೀಯ ನಿಯೋಗದಿಂದ ಕೆಆರ್‌ಎಸ್ ಜಲಾಶಯದ ಕ್ರಸ್ಟ್ ಗೇಟ್‌ಗಳ ಕಾಮಗಾರಿ ಪರಿಶೀಲನೆ

ಜಲಾಶಯದ ನೀರಿನ ಸಂಗ್ರಹ ಸಾಮರ್ಥ್ಯ ಮಾಹಿತಿ ಪಡೆದ ನಿಯೋಗದ ಸದಸ್ಯರು

ಮೈಸೂರು, ಜ.12(ಆರ್.ಕೆ)–ಜಲ ಸಂಪನ್ಮೂಲ ಇಲಾಖೆಯಡಿ ಬರುವ ಸಂಸದೀಯ ಸ್ಥಾಯಿ ಸಮಿತಿ ಸದಸ್ಯರ ನಿಯೋಗವು ಕೃಷ್ಣರಾಜಸಾಗರ ಅಣೆಕಟ್ಟೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿತು.

ಕೆಆರ್‌ಎಸ್ ಸುತ್ತಮುತ್ತಲಿನ 20ಕಿಮೀ ವ್ಯಾಪ್ತಿ ಪ್ರದೇಶದಲ್ಲಿ ಗಣಿಗಾರಿಕೆ ಮತ್ತು ಕ್ವಾರಿ ಚಟುವಟಿಕೆಗಳನ್ನು ನಿಷೇಧಿಸಿ ರಾಜ್ಯ ಉಚ್ಚ ನ್ಯಾಯಾಲಯ ಆದೇಶ ಹೊರಡಿಸಿದ ಬೆನ್ನಲ್ಲೇ ಸಂಸದೀಯ ಸ್ಥಾಯಿ ಸಮಿತಿ ಸದಸ್ಯರು ಭೇಟಿ ನೀಡಿರು ವುದು ಮಹತ್ವದ ಬೆಳವಣಿಗೆಯಾಗಿದೆ.

ಜಲಶಕ್ತಿ ಸಚಿವಾಲಯ, ಜಲಸಂಪ ನ್ಮೂಲ ಇಲಾಖೆ, ನದಿ ಅಭಿವೃದ್ಧಿ ಮತ್ತು ಗಂಗಾ ಪುನರುಜ್ಜೀವನ ಕುಡಿಯುವ ನೀರು ಮತ್ತು ಸ್ಯಾನಿಟೇಷನ್ ಇಲಾಖೆ ಗಳಿಂದ ಕೆಆರ್‌ಎಸ್‌ನಲ್ಲಿ ಕೈಗೊಂಡಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ವೀಕ್ಷಿಸಿದ ನಿಯೋಗದ ಸದಸ್ಯರು, ಅಣೆಕಟ್ಟೆಯ ಕ್ರಸ್ಟ್ ಗೇಟ್ ಬದಲಿಸುವ ಕಾಮಗಾರಿ ಪ್ರಗತಿ ಪರಿಶೀಲನೆ ನಡೆಸಿದರು.

ಜನವರಿ 6ರಿಂದ ಪ್ರವಾಸ ಕೈಗೊಂಡಿ ರುವ ಸದಸ್ಯರು ಭುವನೇಶ್ವರ, ತಿರುಪತಿ ನಂತರ ಇಂದು ಮೈಸೂರು, ಮಂಡ್ಯ ಜಿಲ್ಲೆಗಳಿಗೆ ಭೇಟಿ ನೀಡಿದ್ದರು. ಇಂದು ಬೆಳಗ್ಗೆಯೇ ರಾಮ ನಗರದಲ್ಲೂ ಸ್ಥಳ ಪರಿಶೀಲನೆ ನಡೆಸಿದರು.

ಪರ್‌ಬಾತ್‌ಬಾಯಿ ಸಾಬಾಬಾಯಿ ಪಟೇಲ್ ನೇತೃತ್ವದ 30 ಸದಸ್ಯರ ಸಂಸದೀಯ ಸ್ಥಾಯಿ ಸಮಿತಿ ಪೈಕಿ 7 ಸದಸ್ಯರ ನಿಯೋಗವು ಗುರುವಾರ ಕೆಆರ್‌ಎಸ್ ಅಣೆಕಟ್ಟೆಗೆ ಭೇಟಿ ನೀಡಿ ಕೇಂದ್ರ ಜಲ ಆಯೋಗ (Central water commission) ದ ಅಧಿಕಾರಿಗಳೊಂದಿಗೆ ಸುಮಾರು 2 ಗಂಟೆ ಕಾಲ ಪರಿಶೀಲನೆ ನಡೆಸಿದರು.


ಸಂಸದೀಯ ಸ್ಥಾಯಿ ಸಮಿತಿ ಸದಸ್ಯರ ನಿಯೋಗ ಗುರುವಾರ ಕೆಆರ್‌ಎಸ್ ಅಣೆಕಟ್ಟೆಯ ಕ್ರಸ್ಟ್ ಗೇಟ್ ಬದಲಾವಣೆ ಕಾಮಗಾರಿ ಪ್ರಗತಿ ಪರಿಶೀಲನೆ ನಡೆಸಿತು.

ಅಣೆಕಟ್ಟೆ ನಿರ್ಮಾಣದ ವೇಳೆ ಅಳವಡಿಸಿದ್ದ ವಿವಿಧ ಮಟ್ಟದ 136 ಕ್ರಸ್ಟ್ ಗೇಟ್‌ಗಳು ತುಕ್ಕು ಹಿಡಿದು ಜಲಾಶಯ ದಿಂದ ನೀರು ಸೋರಿಕೆಯಾಗುತ್ತಿರುವು ದರಿಂದ ಅವುಗಳನ್ನು ಬದಲಿಸಿ ಹೊಸ ಗೇಟ್ ಅಳವಡಿಸುವ ಕಾಮಗಾರಿ ಎರಡು ವರ್ಷಗಳ ಹಿಂದೆ ಆರಂಭವಾಗಿತ್ತು.

ಆ ಕಾಮಗಾರಿ ಶೇ.95 ರಷ್ಟು ಪೂರ್ಣ ಗೊಂಡಿರುವುದರಿಂದ ಹೊಸ ಗೇಟ್‌ಗಳ ಕಾರ್ಯ ಸಾಮರ್ಥ್ಯ, ಉಪಯೋಗ ಕುರಿತಂತೆ ಅಣೆಕಟ್ಟೆ ನಿರ್ವಹಣೆ ಮೇಲ್ವಿ ಚಾರಣೆ ನಡೆಸುತ್ತಿರುವ ಕಾವೇರಿ ನೀರಾವರಿ ನಿಗಮ ನಿಯಮಿತ(CNN) ದ ಅಧಿಕಾರಿ ಗಳು ಸಂಸದೀಯ ಸ್ಥಾಯಿ ಸಮಿತಿ ಸದಸ್ಯರು ಹಾಗೂ ಕೇಂದ್ರೀಯ ಜಲ ಆಯೋಗದ ಅಧಿಕಾರಿಗಳಿಗೆ ಮಾಹಿತಿ ನೀಡಿದರು.

ವಿಶ್ವಬ್ಯಾಂಕ್ ನೆರವಿನೊಂದಿಗೆ ಅಣೆಕಟ್ಟೆಗಳ ಪುನರುಜ್ಜೀವನ ಮತ್ತು ಅಭಿವೃದ್ಧಿ ಯೋಜನೆ (Dam Rehabitation and Improvement Project) ಯಡಿ ಕೆಆರ್‌ಎಸ್ ಅಣೆಕಟ್ಟೆಯ 136 ಕ್ರಸ್ಟ್ ಗೇಟ್‌ಗಳನ್ನು ಬದಲಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದ್ದು ಅದಕ್ಕಾಗಿ ವಿಶ್ವಬ್ಯಾಂಕ್ 69 ಕೋಟಿ ರೂ. ಅನುದಾನ ಬಿಡುಗಡೆ ಮಾಡಿತ್ತು ಎಂದು ಅಧಿಕಾರಿಗಳು ವಿವರಿಸಿದರು.

ಕೋವಿಡ್ ಹಾಗೂ ಅನುಭವಿ ಕೆಲಸಗಾರರ ಕೊರತೆಯಿಂದಾಗಿ ಗೇಟ್ ಬದಲಿಸುವ ಕಾರ್ಯ ವಿಳಂಬವಾಯಿತು. ಇದೀಗ ಶೇ.95ರಷ್ಟು ಕಾಮಗಾರಿ ಪೂರ್ಣಗೊಂಡಿದ್ದು, ಬಾಕಿ ಕಾಮಗಾರಿ ತ್ವರಿತವಾಗಿ ನಡೆಯುತ್ತಿದೆ. ಅತಿ ಶೀಘ್ರ ಪೂರ್ಣಗೊಳಿಸಿ ರಾಜ್ಯ ಜಲಸಂಪನ್ಮೂಲ ಇಲಾಖೆ ಮೂಲಕ ಸೆಂಟ್ರಲ್ ವಾಟರ್ ಕಮಿಷನರ್‌ಗೆ ವರದಿ ಸಲ್ಲಿಸಲಾಗುವುದು ಎಂದು ಅಧಿಕಾರಿಗಳು ನಿಯೋಗಕ್ಕೆ ತಿಳಿಸಿದರು.

ಅದೇ ವೇಳೆ ಜಲಾಶಯದ ನೀರಿನ ಮಟ್ಟ, ಶೇಖರಣಾ ಸಾಮರ್ಥ್ಯ, ಕಾವೇರಿ ಜಲಾನಯನ ಪ್ರದೇಶ ವ್ಯಾಪ್ತಿ ಅವಲಂಭಿ ಸುತ್ತಿರುವ ಕೃಷಿ ಭೂಮಿಯ ವಸ್ತುಸ್ಥಿತಿ, ಕುಡಿಯುವ ನೀರು ಪೂರೈಕೆ, ಕಾಲುವೆಗಳ ಸಂಪರ್ಕ, ಮಳೆ ಪ್ರಮಾಣ ಮುಂತಾದ ವಿಷಯಗಳ ಬಗ್ಗೆ ನಿಯೋಗದ ಸದಸ್ಯರು ಮಾಹಿತಿ ಪಡೆದುಕೊಂಡರು.

ರಾಜ್ಯ ಜಲಸಂಪನ್ಮೂಲ ಇಲಾಖೆ ಕಾರ್ಯದರ್ಶಿ ಕೃಷ್ಣಮೂರ್ತಿ ಬಿ.ಕುಲಕರ್ಣಿ, ಕಾವೇರಿ ನೀರಾವರಿ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕ ಮಹೇಶ್, ಜಲಸಂಪನ್ಮೂಲ ಸಚಿವರ ತಾಂತ್ರಿಕ ಸಹಾಯಕರಾದ ಸಿಎನ್‌ಎನ್ ನಿವೃತ್ತ ಎಂಡಿ ಜಯಪ್ರಕಾಶ್, ಚೀಫ್ ಇಂಜಿನಿ ಯರ್ ಆರ್.ಎಲ್.ವೆಂಕಟೇಶ್, ಸೂಪರಿಂ ಟೆಂಡಿಂಗ್ ಇಂಜಿನಿಯರ್ ರಘುರಾಂ, ಎಕ್ಸಿಕ್ಯೂಟಿವ್ ಇಂಜಿನಿಯರ್ ಜಯಂತ್, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಗಳಾದ ಅಬು ಫಾರುಖ್, ಕಿಶೋರ್ ಕುಮಾರ್ ಹಾಗೂ ಇತರ ಅಧಿಕಾರಿಗಳು ಈ ಸಂದರ್ಭ ಹಾಜರಿದ್ದರು.

ಜ.18ರಿಂದ ರಾಜ್ಯ ಮಟ್ಟದ ಪುರುಷರ ಹಾಕಿ ಪಂದ್ಯಾವಳಿ


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಹಾಕಿ ಮೈಸೂರು ಸಂಸ್ಥೆಯ ಖಜಾಂಚಿ ಪೊನ್ನಪ್ಪ ಮಾತನಾಡಿದರು.

ಮೈಸೂರು, ಜ.12(ಎಂಟಿವೈ)– ಮೈಸೂರು ವಿಶ್ವವಿದ್ಯಾನಿಲಯದ ಹಾಕಿ ಮೈದಾನದಲ್ಲಿ ಜ.18ರಿಂದ 21ರವರೆಗೆ ರಾಜ್ಯಮಟ್ಟದ ಪುರುಷರ ಹಾಕಿ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ಹಾಕಿ ಮೈಸೂರು ಸಂಸ್ಥೆಯ ಖಜಾಂಚಿ ಪೊನ್ನಪ್ಪ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, ಹಾಕಿ ಮೈಸೂರು ಅಸೋಸಿಯೇಷನ್ ವತಿಯಿಂದ ರಾಜ್ಯಮಟ್ಟದ ಪುರುಷರ ಹಾಕಿ ಪಂದ್ಯಾವಳಿ ಏರ್ಪಡಿಸಲಾಗಿದೆ. ಲೀಗ್ ಮತ್ತು ನಾಕೌಟ್ ಮಾದರಿಯಲ್ಲಿ ನಡೆ ಯುವ ಈ ಪಂದ್ಯಾವಳಿಯಲ್ಲಿ ಕಸ್ಟಮ್ಸ್, ಎಜಿಒಆರ್‌ಸಿ, ಎಂಇಜಿ ಬಾಯ್ಸ್, ಸಾಯಿ ಬೆಂಗಳೂರು, ಡೈಸ್ ಬೆಂಗಳೂರು, ನೈರುತ್ಯ ರೈಲ್ವೆ, ಹಾಕಿ ಬಳ್ಳಾರಿ, ಧಾರವಾಡ, ಹಾಸನ, ಗದಗ, ಬೆಳಗಾಂ ಹಾಗೂ ಮೈಸೂರು ತಂಡ ಸೇರಿದಂತೆ 12 ತಂಡ ಪಾಲ್ಗೊಳ್ಳುತ್ತಿವೆ. ತಲಾ ಮೂರು ತಂಡ ಗಳುಳ್ಳ 4 ಗುಂಪು ರಚಿಸಲಾಗಿದ್ದು, ಒಂದು ಗುಂಪಿನಿಂದ ಎರಡು ತಂಡವನ್ನು ಕ್ವಾಟರ್ ಫೈನಲ್‌ಗೆ ಪರಿಗಣಿಸಲಾಗುತ್ತದೆ. ಪಂದ್ಯಾವಳಿಯ ಯಶಸ್ವಿಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದರು.

ಮೈಸೂರು ವಿವಿಯ ಹಾಕಿ ಮೈದಾನ ದಲ್ಲಿ ಜ.18ರಂದು ಬೆಳಗ್ಗೆ 10 ಗಂಟೆಗೆ ಮಾಜಿ ಶಾಸಕ ಎಲ್.ನಾಗೇಂದ್ರ ಪಂದ್ಯಾವಳಿಯನ್ನು ಉದ್ಘಾಟಿಸಲಿದ್ದಾರೆ. ಶಾಸಕ ಟಿ.ಎಸ್.ಶ್ರೀವತ್ಸ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ಉಪನಿರ್ದೇಶಕ ಡಾ.ಸಿ.ವೆಂಕಟೇಶ್, ಮಾಜಿ ಮೇಯರ್ ಶಿವಕುಮಾರ್, ಪಾಲಿಕೆ ಮಾಜಿ ಸದಸ್ಯ ಎಂ.ಯು.ಸುಬ್ಬಯ್ಯ, ಇಂಡಿಯನ್ ಆಯಿಲ್ ಸಂಸ್ಥೆಯ ವಿಭಾಗೀಯ ಮಾರಾಟ ಸಂಸ್ಥೆಯ ಮುಖ್ಯಸ್ಥ ಸುನೀಲ್ ಕುಮಾರ್ ಮಿಶ್ರ ಪಾಲ್ಗೊಳ್ಳಲಿದ್ದಾರೆ. ಜ.21ರ ಸಂಜೆ 4ಕ್ಕೆ ಬಹುಮಾನ ವಿತರಣಾ ಸಮಾರಂಭ ನಡೆಯಲಿದೆ. ರಾಜ್ಯ ಹಾಕಿ ಸಂಸ್ಥೆಯ ಅಧ್ಯಕ್ಷ ಡಾ.ಎಸ್.ವಿ.ಎಸ್.ಸುಬ್ರಮಣ್ಯ ಗುಪ್ತ, ಸಂಸದ ಪ್ರತಾಪ್‌ಸಿಂಹ ಹಾಗೂ ಇನ್ನಿತರರು ಅತಿಥಿಗಳಾಗಿ ಪಾಲ್ಗೊಳ್ಳಲಿ ದ್ದಾರೆ ಎಂದು ತಿಳಿಸಿದರು.

ಈ ಪಂದ್ಯಾವಳಿಯಲ್ಲಿ ಪ್ರಥಮ ಬಹು ಮಾನ 2 ಲಕ್ಷ ರೂ., ದ್ವಿತೀಯ ಬಹು ಮಾನ 1.50 ಲಕ್ಷ ರೂ., ತೃತೀಯ ಬಹು ಮಾನ 1 ಲಕ್ಷ ರೂ, ನಾಲ್ಕನೆ ಬಹುಮಾನ 50 ಸಾವಿರ ರೂ. ನಗದು ಸೇರಿದಂತೆ ಟ್ರೋಫಿ ನೀಡಲಾಗುತ್ತದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಹಾಕಿ ಮೈಸೂರು ಅಸೋಸಿಯೇಷನ್ ಅಧ್ಯಕ್ಷ ದಿಲೀಪ್, ಕಾರ್ಯದರ್ಶಿ ಸಿ.ಟಿ. ಸತೀಶ್, ಗಿರೀಶ್ ಇದ್ದರು.

ಉಚಿತ ನರ್ಸಿಂಗ್ ತರಬೇತಿ ಕಾರ್ಯಾಗಾರ


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಪ್ರಥಮ್ ಎಜುಕೇಷನ್ ಫೌಂಡೇಷನ್ ಪೇಸ್ ಸ್ಕಿಲ್ ಟ್ರೈನಿಂಗ್ ಸೆಂಟರ್ ಮುಖ್ಯಸ್ಥ ಜಯಪ್ರಸಾದ್ ಬೋಳನ ತರಬೇತಿ ಶಿಬಿರದ ಪೋಸ್ಟರ್ ಬಿಡುಗಡೆ ಮಾಡಿದರು.

ಮೈಸೂರು,ಜ.12(ಎಂಟಿವೈ)– ಮೈಸೂರಿನ ಹೂಟಗಳ್ಳಿಯ ಕೆಹೆಚ್‌ಬಿ ಕಾಲೋನಿಯಲ್ಲಿರುವ ಪ್ರಥಮ್ ಎಜು ಕೇಷನ್ ಫೌಂಡೇಷನ್ ಪೇಸ್ ಸ್ಕಿಲ್ ಟ್ರೈನಿಂಗ್ ಸೆಂಟರ್ ವತಿಯಿಂದ ಎಸ್‌ಎಸ್ ಎಲ್‌ಸಿ. ಪಿಯುಸಿ, ಪದವಿ ಉತ್ತೀರ್ಣ ಅಥವಾ ಅನುತ್ತೀರ್ಣರಾಗಿರುವ ಯುವತಿಯರಿಗೆ ಎರಡು ತಿಂಗಳ ಉಚಿತ ನರ್ಸಿಂಗ್ ತರಬೇತಿ ಕಾರ್ಯಾಗಾರ ನಡೆಸಿ, ಉದ್ಯೋಗಾವಕಾಶಕ್ಕೂ ನೆರವಾಗುವುದು ಎಂದು ಮುಖ್ಯಸ್ಥ ಜಯಪ್ರಸಾದ್ ಬೋಳನ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ಸಂಸ್ಥೆಯಲ್ಲಿ ಈಗಾಗಲೇ ವಿವಿಧ ರೀತಿಯ ಕೌಶಲ್ಯದ ಬಗ್ಗೆ ತರಬೇತಿ ನೀಡಲಾಗಿದೆ. ಇದೀಗ ಬೇಸಿಕ್ ನರ್ಸಿಂಗ್ ತರಬೇತಿ ಕಾರ್ಯಾಗಾರ ನಡೆಸಲು ಉದ್ದೇಶಿಸಲಾಗಿದ್ದು, ಗ್ರಾಮೀಣ ಪ್ರದೇಶದ ನಿರುದ್ಯೋಗಿಗಳು ತರಬೇತಿ ಪಡೆಯಬಹುದಾಗಿದೆ. ತರಬೇತಿ ಪಡೆದ ಬಳಿಕ ವೃದ್ಧಾಶ್ರಮ, ಹೋಂ ಕೇರ್‌ಗಳಲ್ಲಿ ಹಾಗೂ ನಗರ ಪ್ರದೇಶದ ಆಸ್ಪತ್ರೆಗಳಲ್ಲಿ ಉದ್ಯೋಗ ಕೊಡಿಸಲಾಗುವುದು. ವಯೋಮಿತಿ 18 ರಿಂದ 35 ವರ್ಷ ಗಳಾಗಿರಬೇಕು ಎಂದರು. ಸುದ್ದಿ ಗೋಷ್ಠಿಯಲ್ಲಿ ಪ್ರಥಮ್ ಎಜುಕೇಷನ್ ಫೌಂಡೇಷನ್ ಸಂಸ್ಥೆಯ ರಶ್ಮಿಕಾ, ಸುಮಾ, ಸುಶ್ಮಿತ, ಪ್ರಿಯಾಂಕ ಇದ್ದರು.

ಹಳಿ ಮೇಲೆ ಉರುಳಿ ಬಿದ್ದ ಮರ

ರಾಮನಗರ ಬಳಿ ಒಂದೂವರೆ ಗಂಟೆ ಮಾಲ್ಗುಡಿ ಎಕ್ಸ್‌ಪ್ರೆಸ್ ರೈಲು ಸ್ಥಗಿತ

ಮೈಸೂರು, ಜ.12(ಆರ್‌ಕೆ)–ಹಳಿ ಮೇಲೆ ಮರವೊಂದು ಉರುಳಿ ಬಿದ್ದ ಕಾರಣ, ಮೈಸೂರಿಗೆ ಬರುತ್ತಿದ್ದ ಮಾಲ್ಗುಡಿ ಎಕ್ಸ್‌ಪ್ರೆಸ್ ರೈಲು ರಾಮನಗರದಲ್ಲಿ ಒಂದೂವರೆ ತಾಸು ಸ್ಥಗಿತಗೊಂಡ ಪ್ರಸಂಗ ಇಂದು ನಡೆಯಿತು.

ಬೆಂಗಳೂರಿನಿಂದ ಮಧ್ಯಾಹ್ನ 1.50 ಗಂಟೆಗೆ ಹೊರಟು ಸಂಜೆ 4.20ಕ್ಕೆ ಮೈಸೂರು ತಲುಪಬೇಕಾಗಿದ್ದ ರೈಲು, ರಾಮನಗರ ಮತ್ತು ಚನ್ನಪಟ್ಟಣ ನಡುವೆ ಹಳಿ ಮೇಲೆ ಮರ ಬಿದ್ದಿದ್ದರಿಂದ ಅದನ್ನು ತೆರವು ಗೊಳಿಸುವವರೆಗೆ ಒಂದೂವರೆ ಗಂಟೆ ರಾಮನಗರ ರೈಲು ನಿಲ್ದಾಣದಲ್ಲಿ ನಿಲ್ಲಬೇ ಕಾಯಿತು. ವಿಷಯ ತಿಳಿಯುತ್ತಿದ್ದಂತೆಯೇ ಸಿಗ್ನಲ್ ಆಪರೇಟರ್‌ಗಳು ಬೆಂಗಳೂರಿನಿಂದ ಮೈಸೂರಿಗೆ ಹೊರಟಿದ್ದ ಮಾಲ್ಗುಡಿ ಎಕ್ಸ್‌ಪ್ರೆಸ್ ರೈಲಿನ ಲೋಕೋ ಪೈಲಟ್‌ಗೆ ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ರೈಲನ್ನು ರಾಮನಗರ ಸ್ಟೇಷನ್‌ನಲ್ಲಿ ನಿಲ್ಲಿಸಲಾಗಿತ್ತು. ತಕ್ಷಣ ಕಾರ್ಯ ಪ್ರವೃತ್ತರಾದ ಕ್ಷಿಪ್ರ ಕಾರ್ಯಾಚರಣೆ ಪಡೆ ಸಿಬ್ಬಂದಿ ಉರುಳಿ ಬಿದ್ದಿದ್ದ ಮರವನ್ನು ತೆರವುಗೊಳಿಸಿದರು.

ಆ ವೇಳೆ ರೈಲಿನಲ್ಲಿದ್ದ ಪ್ರಯಾಣಿಕರು ಒಂದೂವರೆ ಗಂಟೆ ಕಾಯಬೇಕಾಯಿತು. ಅದು ಮಧ್ಯಾಹ್ನ ಊಟದ ಸಮಯ ವಾದ್ದರಿಂದ ಮಕ್ಕಳು, ಹಿರಿಯ ನಾಗರಿ ಕರು, ಆರೋಗ್ಯ ಸಮಸ್ಯೆ ಇರುವವರಿಗೆ ತೀವ್ರ ತೊಂದರೆಯಾಯಿತು.

ಮರ ತೆರವುಗೊಳಿಸಿ ಸುರಕ್ಷತೆ ಬಗ್ಗೆ ಅಧಿ ಕಾರಿಗಳು ದೃಢಪಡಿಸಿದ ಬಳಿಕ ಪ್ರಯಾಣ ಮುಂದುವರಿಸಿದ ರೈಲು ಒಂದೂವರೆ ಗಂಟೆ ತಡವಾಗಿ ಸಂಜೆ 5.50 ಗಂಟೆಗೆ ಮೈಸೂರು ತಲುಪಿತು. ಅದರಿಂದಾಗಿ ಇನ್ನಿತರ ರೈಲುಗಳ ವೇಳೆಯಲ್ಲೂ ಸ್ವಲ್ಪ ವ್ಯತ್ಯಯ ವಾಯಿತು ಎಂದು ಪ್ರಯಾಣಿಕರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಇಂದು ಮೈಸೂರಲ್ಲಿ ಕೆ–ಸೆಟ್ ಪರೀಕ್ಷೆ

23 ಕೇಂದ್ರಗಳು, 10,246 ಅಭ್ಯರ್ಥಿಗಳ ನೋಂದಣಿ

ಮೈಸೂರು, ಜ. 12(ಆರ್‌ಕೆ)– ನಾಳೆ (ಜ. 13) ಮೈಸೂರಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ದಿಂದ ಕೆ–ಸೆಟ್ ಪರೀಕ್ಷೆಗಳು ನಡೆಯಲಿವೆ.

ಮೈಸೂರಿನ ಶಾರದಾ ವಿಲಾಸ, ಸೆಂಟ್ ಫಿಲೋಮಿನಾ, ಡಿ.ಬನುಮಯ್ಯ, ಟೆರಿಷಿಯನ್, ಮಹಾರಾಜ, ಮರಿ ಮಲ್ಲಪ್ಪ, ಮಹಾಜನ, ಮಾತೃಮಂಡಳಿ, ಮಹಾರಾಣಿ ಸೇರಿದಂತೆ ಒಟ್ಟು 23 ಕೇಂದ್ರಗಳಲ್ಲಿ ಶನಿವಾರ ಬೆಳಗ್ಗೆ 10ರಿಂದ 11 ಮತ್ತು ಮಧ್ಯಾಹ್ನ 12ರಿಂದ 1 ಗಂಟೆವರೆಗೆ ನಡೆಯುವ ಪರೀಕ್ಷೆಯಲ್ಲಿ ಒಟ್ಟು 10,246 ಅಭ್ಯರ್ಥಿಗಳು ನೋಂದಣಿ ಮಾಡಿಕೊಂಡಿದ್ದಾರೆ.

ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ನಡೆಯಲಿರುವ ಪರೀಕ್ಷೆಗೆ ಪದವಿ ಪೂರ್ವ ಮತ್ತು ವೃತ್ತಿ ಶಿಕ್ಷಣ ಉಪ ನಿರ್ದೇಶಕ ಎಂ.ಮರಿಸ್ವಾಮಿ ನೋಡಲ್ ಅಧಿಕಾರಿಯಾಗಿದ್ದು, ಪ್ರತೀ ಪರೀಕ್ಷಾ ಕೇಂದ್ರಕ್ಕೆ ಮುಖ್ಯ ಅಧೀಕ್ಷಕ, ವೀಕ್ಷಕ ಹಾಗೂ ಕಸ್ಟೋಡಿಯನ್ ನೇಮಿಸ ಲಾಗಿದ್ದು, ಪ್ರಶ್ನೆ ಪತ್ರಿಕೆ ಹಾಗೂ ಉತ್ತರ ಪತ್ರಿಕೆಗಳನ್ನು ಖಜಾನೆಯಿಂದ ಕೇಂದ್ರ ಗಳಿಗೆ ತಲುಪಿಸಿ ಸುರಕ್ಷಿತವಾಗಿ ತರಲು ಜಿಪಿಎಸ್ ವ್ಯವಸ್ಥೆ ಮಾಡಲಾಗಿದೆ.

ಪರೀಕ್ಷಾ ಕೇಂದ್ರಗಳ ಕೊಠಡಿಗಳಲ್ಲಿ ಅಭ್ಯರ್ಥಿಗಳ ನೋಂದಣಿ ಸಂಖ್ಯೆ ಬರೆದು ಸಕಲ ಸಿದ್ಧತೆ ಮಾಡಲಾಗಿದೆ. ಕುಡಿಯುವ ನೀರು, ಸ್ವಚ್ಛತೆ, ಸಿಸಿ ಕ್ಯಾಮರಾ, ಮೊಬೈಲ್ ಶೇಖರಣಾ ಸೌಲಭ್ಯಗಳನ್ನು ಒದಗಿಸ ಲಾಗಿದೆ. ಸ್ಥಳದಲ್ಲಿ ಪೊಲೀಸ್ ಸಿಬ್ಬಂದಿ ನಿಯೋಜಿಸಿ ಬಂದೋಬಸ್ತ್ ಮಾಡಲಾಗಿದೆ.

ಪರೀಕ್ಷಾ ಕೇಂದ್ರಗಳ ಸುತ್ತ 200 ಮೀಟರ್ ವ್ಯಾಪ್ತಿಯಲ್ಲಿ ಬೆಳಗ್ಗೆ 6ರಿಂದ ಸಂಜೆ 6 ಗಂಟೆವರೆಗೆ ದಂಡ ಪ್ರಕ್ರಿಯಾ ಸಂಹಿತೆ 1973ರ ಕಲಂ 144 ರೀತ್ಯಾ ನಿಷೇಧಾಜ್ಞೆ ಜಾರಿಗೊಳಿಸಿ ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಆದೇಶ ಹೊರಡಿಸಿದ್ದಾರೆ ಅಲ್ಲದೇ ಸುತ್ತಲಿನ ಜೆರಾಕ್ಸ್ ಅಂಗಡಿಗಳನ್ನು ಪರೀಕ್ಷೆ ನಡೆಯುವ ಅವಧಿಯಲ್ಲಿ ಬಂದ್ ಮಾಡುವಂತೆಯೂ ಸೂಚಿಸಲಾಗಿದೆ.

ರಾಜ್ಯ ಸರ್ಕಾರದಿಂದ ಮುಸಲ್ಮಾನರ ಕಡೆಗಣನೆ ಆರೋಪ

ಎಸ್‌ಡಿಪಿಐ ಪ್ರತಿಭಟನೆ


ಮೈಸೂರಿನ ಬನುಮಯ್ಯ ವೃತ್ತದಲ್ಲಿ ರಾಜ್ಯ ಸರ್ಕಾರ ಮುಸಲ್ಮಾನರನ್ನು ಕಡೆಗಣಿಸುತ್ತಿದೆ ಎಂದು ಎಸ್‌ಡಿಪಿಐ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು, ಜ.12(ಜಿಎ)–ರಾಜ್ಯ ಸರ್ಕಾರ ಮುಸಲ್ಮಾನರನ್ನು ಕಡೆಗಣಿಸುತ್ತಿದ್ದು, ಮುಸಲ್ಮಾನರ ಮೇಲಿನ ಕೋಮುವಾದಿ ದಾಳಿಗಳನ್ನು ತಡೆಯುವಲ್ಲಿ ವಿಫಲವಾಗಿದೆ ಎಂದು ಆರೋಪಿಸಿ ಸೋಶಿಯಲ್ ಡೆಮಾ ಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿ ಪಿಐ) ವತಿಯಿಂದ ನಗರದ ಬನುಮಯ್ಯ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಮುಸಲ್ಮಾನರ ಸಾಂವಿಧಾನಿಕ ಹಕ್ಕುಗಳ ವಿರುದ್ಧ ಸಂಘ ಪರಿವಾರ ನಡೆಸುತ್ತಿರುವ ಷಡ್ಯಂತ್ರ ತಡೆಯುವಲ್ಲಿ ಅಸಹಾಯಕತೆ ಪ್ರದರ್ಶಿಸುತ್ತಿರುವ ಸರ್ಕಾರದ ಧೋರಣೆಗಳ ವಿರುದ್ಧ ನಾವಿಂದು ಗಟ್ಟಿ ದನಿಯಲ್ಲಿ ಮಾತ ನಾಡಬೇಕಿದೆ. ಭ್ರಷ್ಟಾಚಾರ, ಅನೀತಿ, ಅಕ್ರಮ, ಕೋಮುವಾದಿ ನಿಲುವು ಹಾಗೂ ಧರ್ಮಾಂಧತೆ ಕೃತ್ಯಗಳಿಂದ ಬೇಸತ್ತಿದ್ದ ಜನರು ಬದಲಾವಣೆ ಬಯಸಿ ಕಾಂಗ್ರೆಸ್ ಸರ್ಕಾರ ಆಯ್ಕೆ ಮಾಡಿದ್ದಾರೆ. ಮುಸಲ್ಮಾನ ಸಮುದಾಯದ 50 ಲಕ್ಷಕ್ಕೂ ಹೆಚ್ಚು ಮತ ಗಳು ಕಾಂಗ್ರೆಸ್‌ಗೆ ಬಿದ್ದಿವೆ. ಬಿಜೆಪಿ ದೇಶಾ ದ್ಯಂತ ಸೃಷ್ಟಿಸಿದ್ದ ಭಯದ ವಾತಾವರಣ ಹೋಗಲಾಡಿಸುತ್ತದೆ ಎಂಬ ಭರವಸೆಯಲ್ಲಿ ಮುಸಲ್ಮಾನರು ಕಾಂಗ್ರೆಸ್ ಬೆಂಬಲಿಸಿದ್ದರು. ಆದರೆ, ಕಾಂಗ್ರೆಸ್ ಮೇಲಿನ ಭರವಸೆಗಳು ಹುಸಿಯಾಗಿವೆ ಎಂದು ಕಿಡಿಕಾರಿದರು.

ಬಿಜೆಪಿ ಸರ್ಕಾರ ರದ್ದು ಮಾಡಿದ್ದ 2ಎ ಮೀಸಲಾತಿಯನ್ನು ಅಧಿಕಾರಕ್ಕೆ ಬಂದ ಮೊದಲ ಕ್ಯಾಬಿನೆಟ್ ಸಭೆಯಲ್ಲೇ ಪುನರ್ ಸ್ಥಾಪಿಸುವ ಭರವಸೆ ಈಡೇರಿಲ್ಲ. ಮುಸ ಲ್ಮಾನರಿಗೆ 10 ಸಾವಿರ ಕೋಟಿ ಮೀಸಲಿ ಡುವುದಾಗಿ ಸಿದ್ದರಾಮಯ್ಯ ಹೇಳಿದ್ದರು. ಆದರೆ, ಬಜೆಟ್‌ನಲ್ಲಿ ಕೇವಲ 2200 ಕೋಟಿ ನೀಡಲಾಗಿದೆ. ಅಲ್ಪಸಂಖ್ಯಾತ ಸಂಶೋಧನಾರ್ಥಿಗಳಿಗೆ ಎಂಫಿಲ್ ಪಿಎಚ್‌ಡಿ ಮಾಡುವ ಫೆಲೋಶಿಪ್‌ನ್ನು 10 ಸಾವಿರಕ್ಕೆ ಇಳಿಕೆ ಮಾಡಲಾಗಿದೆ. ಕಲ್ಲಡ್ಕ ಪ್ರಭಾಕರ್ ಭಟ್ ಮುಸಲ್ಮಾನರ ವಿರುದ್ಧ ಮಾತನಾ ಡಿದರೂ ಅವರ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ. ಕೂಡಲೇ ಮುಸ್ಲಿಂ ಸಮು ದಾಯದ ಭರವಸೆಗಳನ್ನು ಈಡೇರಿಸಿ ಸಮುದಾಯದ ಮೇಲಿನ ದಾಳಿಗಳನ್ನು ತಡೆಯಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ರಫತುಲ್ಲಾ ಖಾನ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ಶಫಿ, ಫರ್ಹಾದೀನ್ ಖಾನ್, ವುಮನ್ ಇಂಡಿಯಾ ಮೂವ್‌ಮೆಂಟ್ ರಾಜ್ಯ ಸಮಿತಿ ಸದಸ್ಯೆ ಸಾನಿಯಾ, ರಾಜ್ಯ ಉಪಾಧ್ಯಕ್ಷ ಪುಟ್ಟ ನಂಜಯ್ಯ, ಉಪಾಧ್ಯಕ್ಷ ಸ್ವಾಮಿ ಸೇರಿದಂತೆ ಹಲವರು ಪಾಲ್ಗೊಂಡಿದರು.

ನಾಳೆವರೆಗೆ ಸರ್ಕಾರಿ ನೌಕರರಿಂದ ಜನಪ್ರತಿನಿಧಿಗಳಿಗೆ ವಿವಿಧ ಬೇಡಿಕೆಗಳ ಮನವಿ ಸಲ್ಲಿಸುವ ಅಭಿಯಾನ

ಮೈಸೂರು,ಜ.12(ಎಂಟಿವೈ)– ರಾಜ್ಯ ಸರ್ಕಾರಿ ನೌಕರರಿಗೆ 7ನೇ ವೇತನ ಭತ್ಯೆ ಪರಿಷ್ಕರಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಮೈಸೂರಲ್ಲಿ ಇಂದಿನಿಂದ ಜ.14ರವರೆಗೆ ಜನಪ್ರತಿನಿಧಿಗಳಿಗೆ ಬೇಡಿಕೆಗಳುಳ್ಳ ಮನವಿ ಸಲ್ಲಿಸುವ ಅಭಿಯಾನ ಹಮ್ಮಿಕೊಂಡಿರು ವುದಾಗಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಜೆ. ಗೋವಿಂದರಾಜು ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರದ ಕಾರ್ಯಕ್ರಮ, ಯೋಜನೆ ಗಳನ್ನು ಜನರಿಗೆ ಪರಿಣಾಮಕಾರಿಯಾಗಿ ತಲುಪಿಸುವ ಜವಾಬ್ದಾರಿ ಸರ್ಕಾರಿ ನೌಕರ ರದ್ದಾಗಿದೆ. ತಮ್ಮ ಜವಾಬ್ದಾರಿಯನ್ನು ಸರ್ಕಾರಿ ನೌಕರರು ಉತ್ತಮವಾಗಿ ನಿಭಾಯಿಸುತ್ತಿದ್ದಾರೆ. ಆದರೆ, ಹಲವು ಸಮಸ್ಯೆಗಳನ್ನು ಎದುರಿ ಸುತ್ತಿದ್ದಾರೆ. ಬೇಡಿಕೆ ಈಡೇರಿಸುವಂತೆ ಹಲವು ಬಾರಿ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಇದೀಗ ನಮ್ಮ ಬೇಡಿಕೆಯುಳ್ಳ ಮನವಿ ಪತ್ರವನ್ನು ಸಚಿವರು, ಶಾಸಕರು, ವಿಧಾನ ಪರಿಷತ್ ಸದಸ್ಯರಿಗೆ ಸಲ್ಲಿಸುವ ಅಭಿಯಾನ ನಡೆಸಲಾಗುತ್ತಿದೆ ಎಂದರು.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಜೆ. ಗೋವಿಂದರಾಜು ಮಾತನಾಡಿದರು.

ರಾಜ್ಯ ಸರ್ಕಾರ 7ನೇ ವೇತನ ಆಯೋಗ ದಿಂದ ವರದಿ ಪಡೆದು ರಾಜ್ಯ ಸರ್ಕಾರಿ ನೌಕರರ ವೇತನ ಭತ್ಯೆಗಳನ್ನು ಪೂರ್ಣ ಪ್ರಮಾಣದಲ್ಲಿ ಪರಿಷ್ಕರಿಸಿ ಆದೇಶ ಹೊರಡಿಸಬೇಕು. ಸರ್ಕಾರ ಈಗಾಗಲೇ ನೀಡಿರುವ ಶೇ. 17ರಷ್ಟು ಮಧ್ಯಂತರ ಪರಿಹಾರ ಭತ್ಯೆಯೂ ಸೇರಿದಂತೆ ಶೇ. 40ರಷ್ಟು ಫಿಟ್‌ಮೆಂಟ್ ಸೌಲಭ್ಯವನ್ನು ರಾಜ್ಯ ಸರ್ಕಾರಿ ನೌಕರರು ಹಾಗೂ ಸರ್ಕಾರದ ಅಧೀನಕ್ಕೊಳಪಡುವ ನೌಕರರಿಗೆ 2022ರ ಜು. 1ರಿಂದ ಜಾರಿಗೆ ತರಬೇಕು. ಹಳೇ ಪಿಂಚಣಿ ಯೋಜನೆಯನ್ನು ಮರು ಜಾರಿಗೊಳಿಸಬೇಕು. ರಾಜ್ಯದ ಎನ್‌ಪಿಎಸ್. ನೌಕರರ ಜೀವನ ನಿರ್ವಹಣೆ ಹಾಗೂ ಸಂಧ್ಯಾಕಾಲದ ಬದುಕು ಅತ್ಯಂತ ಕಷ್ಟ ಕರವಾಗಿರುವುದರಿಂದ ಎನ್.ಪಿ.ಎಸ್. ನೌಕರರನ್ನು ಓಪಿಎಸ್. ವ್ಯಾಪ್ತಿಗೆ ತರು ವುದು ಸರ್ಕಾರದ ಜವಾಬ್ದಾರಿಯಾಗಿದೆ. ಈಗಾಗಲೇ ಪಂಜಾಬ್, ರಾಜಸ್ಥಾನ, ಛತ್ತಿಸ್‌ಘಡ, ಜಾರ್ಖಂಡ್ ಮತ್ತು ಹಿಮಾ ಚಲ ಪ್ರದೇಶದಲ್ಲಿ ಹಳೇ ಪಿಂಚಣಿ ಯೋಜನೆಯನ್ನು ಜಾರಿಗೆ ತರಲಾಗಿದೆ. ಅದರಂತೆ ಪ್ರಣಾಳಿಕೆಯಲ್ಲಿ ನೀಡಿದ ಭರವಸೆಯಂತೆ ಕರ್ನಾಟಕ ದಲ್ಲೂ ಎನ್‌ಪಿಎಸ್ ಯೋಜನೆಯನ್ನು ರದ್ದುಪಡಿಸಿ ಹಳೇ ಪಿಂಚಣಿ ಯೋಜನೆಯನ್ನು ಜಾರಿ ಗೊಳಿಸಬೇಕು ಎಂದು ಒತ್ತಾಯಿಸಿದರು.

ರಾಜ್ಯ ಸರ್ಕಾರಿ ನೌಕರರು ಮತ್ತು ಅವರ ಅವಲಂಬಿತ ಕುಟುಂಬ ಸದಸ್ಯರಿಗೆ ನಗದು ರಹಿತ ಚಿಕಿತ್ಸೆ ನೀಡುವ ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆಯನ್ನು ಕೂಡಲೇ ಜಾರಿಗೊಳಿಸಬೇಕು ಎಂಬಿವೇ ಮೊದಲಾ ದವು ಬೇಡಿಕೆಗಳಾಗಿವೆ. ಈ ನಿಟ್ಟಿನಲ್ಲಿ ಸಿಎಂ ಗಮನ ಸೆಳೆದು ಜಾರಿಗೆ ಸಹಕರಿಸುವಂತೆ ಮನವಿಪತ್ರ ಸಲ್ಲಿಕೆ ವೇಳೆ ಕೋರಲಾ ಗುತ್ತಿದೆ ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಕಾರ್ಯ ದರ್ಶಿ ರೇವಣ್ಣ ಪದಾಧಿಕಾರಿಗಳಾದ ರಮೇಶ್ ಕುಮಾರ್, ಭಾಸ್ಕರ್, ರಘು ಇದ್ದರು.

ಜ.16, ನೇರ ಸಂದರ್ಶನ

ಮಡಿಕೇರಿ: ಜಿಲ್ಲಾ ಆಯುಷ್ ಇಲಾಖೆಯ ಪಾರಾಣೆ ಮತ್ತು ಶ್ರೀ ಮಂಗಲ ಆಯುಷ್ ಆರೋಗ್ಯ ಹಾಗೂ ಕ್ಷೇಮ ಕೇಂದ್ರಗಳ ಸಿಎಚ್‌ಓ ಹುದ್ದೆಗಳಿಗೆ ಜ.16ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಆಯುಷ್ ಸಮಿತಿಯ ಅಧ್ಯಕ್ಷ ಹಾಗೂ ಸದಸ್ಯರ ಸಮ್ಮುಖದಲ್ಲಿ ನೇರ ಸಂದರ್ಶನ ನಡೆಯಲಿದೆ.

ಡಾ.ಶಿವು ಬಾದಾಮಿ ನಿಧನ



ಸೋಮವಾರಪೇಟೆ, ಜ.12–ಪಟ್ಟಣದ ಪಶು ವೈದ್ಯಕೀಯ ಆಸ್ಪತ್ರೆಯ ಸಹಾಯಕ ನಿರ್ದೇಶಕ ಡಾ. ಶಿವು ಬಾದಾಮಿ (55) ಹೃದಯಾಘಾತದಿಂದ ಶುಕ್ರವಾರ ನಿಧನರಾದರು. ಮೃತರು ಮೂಲತಃ ಗದಗ ಜಿಲ್ಲೆಯ ರೋಣ ತಾಲೂಕಿನವರು. ಇವರು 5 ವರ್ಷಗಳಿಂದ ಸೋಮವಾರಪೇಟೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಪತ್ನಿ, ಪುತ್ರ, ಪುತ್ರಿ ಹಾಗೂ ಅಪಾರ ಬಂಧು–ಬಳಗ ಅಗಲಿದ್ದಾರೆ. ಶನಿವಾರ ಸ್ವಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸುಲೋಚನಾ ಗಿರೀಶ್



ಕೊಡ್ಲಿಪೇಟೆ, ಜ.12–ಇಲ್ಲಿನ ಕೊಡ್ಲಿಪೇಟೆ ವಿದ್ಯಾಸಂಸ್ಥೆಯ ನಿರ್ದೇಶಕ ಸುಲೋಚನಾ ಗಿರೀಶ್ (76) ಅನಾರೋಗ್ಯದಿಂದ ಗುರುವಾರ ರಾತ್ರಿ ನಿಧನರಾದರು. ಮೃತರು ಪುತ್ರ ಮತ್ತು ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು–ಬಳಗ ಅಗಲಿದ್ದಾರೆ. ಮೃತರ ಸ್ವಗ್ರಾಮ ಕೊಡ್ಲಿಪೇಟೆಯಲ್ಲಿ ಶುಕ್ರವಾರ ಅಂತ್ಯಸಂಸ್ಕಾರ ನೆರವೇರಿಸಲಾಯಿತು.

ಅಕಾಲಿಕ ಮಳೆಯಿಂದ ಕಾಫಿ ಬೆಳೆಗಾರರು ತಲ್ಲಣ

● ಸರ್ಕಾರ ಕೂಡಲೇ ನೆರವಿಗೆ ಸ್ಪಂದಿಸಲಿ ● ಸಂವಾದದಲ್ಲಿ ಬೆಳೆಗಾರರ ಒತ್ತಾಯ



ಕಂಬಿಬಾಣೆಯ ಪ್ರಗತಿಪರ ಕೃಷಿಕ ಟಿ.ಕೆ.ಸಾಯಿಕುಮಾರ್ ಅವರ ಕಾಫಿ ತೋಟದಲ್ಲಿ ನಡೆದ 'ಪತ್ರಕರ್ತರ ನಡಿಗೆ ಕೃಷಿಕರ ಕಡೆಗೆ' ಸಂವಾದದಲ್ಲಿ ಅಕಾಲಿಕ ಮಳೆಯಿಂದ ಉಂಟಾಗಿರುವ ಕಾಫಿ ನಷ್ಟದ ಬಗ್ಗೆ ಪ್ರಾತ್ಯಕ್ಷಿಕೆಯೊಂದಿಗೆ ಬೆಳೆಗಾರರು ಮಾಹಿತಿ ನೀಡಿದರು.

ಮಡಿಕೇರಿ, ಜ.12–ಕೃಷಿಕರ ಹತ್ತಾರು ಸಮಸ್ಯೆಗಳ ನಡುವೆ ಅಕಾಲಿಕ ಮಳೆ ಮತ್ತಷ್ಟು ತಲ್ಲಣಗೊಳಿಸಿದೆ. ಅಲ್ಲದೆ, ಮುಂದಿನ ಜೀವನ ನಿರ್ವಹಣೆ ಹೇಗೆ? ಎಂಬ ಪ್ರಶ್ನೆಯನ್ನೂ ಹುಟ್ಟು ಹಾಕಿದೆ. ಆದ್ದರಿಂದ ಸರ್ಕಾರ ಕೂಡಲೇ ಬೆಳೆಗಾರರ ನೆರವಿಗೆ ಸ್ಪಂದಿಸುವಂತೆ ಸಂವಾದದಲ್ಲಿ ಒತ್ತಾಯಿಸಲಾಯಿತು.

ಕಂಬಿಬಾಣೆಯ ಪ್ರಗತಿಪರ ಕೃಷಿಕ ಟಿ.ಕೆ.ಸಾಯಿಕುಮಾರ್ ಅವರ ಕಾಫಿ ತೋಟದಲ್ಲಿ ಕೊಡಗು ಪತ್ರಕರ್ತರ ಸಂಘದ ಕುಶಾಲನಗರ ತಾಲೂಕು ಘಟಕದ ವತಿಯಿಂದ ಆಯೋಜಿಸಿದ್ದ 'ಪತ್ರಕರ್ತರ ನಡಿಗೆ ಕೃಷಿಕರ ಕಡೆಗೆ' ಸಂವಾದದಲ್ಲಿ ಬೆಳೆಗಾರರು, ಸಮಸ್ಯೆ ಹಾಗೂ ಅಕಾಲಿಕ ಮಳೆಯಿಂದ ತಾವು ಎದುರಿಸುತ್ತಿರುವ ಸವಾಲುಗಳನ್ನು ಮುಂದಿಟ್ಟರು.

ಬೆಳೆಗಾರ ಟಿ.ಕೆ.ಸಾಯಿಕುಮಾರ್ ಮಾತನಾಡಿ, ಈಗಾಗಲೇ ಫಸಲಿನ ಬೆಲೆಯ ಏರಿಳಿತ, ಸಾಲದ ಹೊರೆ, ಕಾರ್ಮಿಕರ ಕೊರತೆ, ಕಾಡಾನೆ ಸೇರಿದಂತೆ ವನ್ಯಪ್ರಾಣಿಗಳ ಹಾವಳಿಯಿಂದ ಬೆಳೆಗಾರರು ಕಂಗೆಟ್ಟಿದ್ದಾರೆ. ಜೊತೆಗೆ ಜನವರಿಯಲ್ಲಿ ಅಕಾಲಿಕವಾಗಿ ಸುರಿಯುತ್ತಿರುವ ಮಳೆಯಿಂದ ಗಿಡದಲ್ಲಿ ಕಾಫಿ ಹಣ್ಣುಗಳು ಇರುವಾಗಲೇ ಮತ್ತೆ ಹೂವನ್ನು ಬಿಡು ವಂತಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

> ವನ್ಯಜೀವಿಗಳಿಂದ ರಕ್ಷಣೆ ಪಡೆಯುವ ನಿಟ್ಟಿನಲ್ಲಿ ಬಂದೂಕು ಪರವಾನಿಗೆಯನ್ನು ಹೊಂದಲು ಅರ್ಜಿ ಸಲ್ಲಿಸಿದರೆ ಪೊಲೀಸ್ ವತಿಯಿಂದ ನಿರಾಪೇಕ್ಷಣಾ ಪತ್ರ ಸಿಗುತ್ತಿಲ್ಲ. ನಾನಾ ರೀತಿಯ ದಾಖಲೆಗಳನ್ನು ಕೇಳುತ್ತಾ ಸತಾಯಿಸುತ್ತಿದ್ದಾರೆ. ಇನ್ನಾದರೂ ಬೆಳೆಗಾರರಿಗೆ ಆತ್ಮರಕ್ಷಣೆಗಾಗಿ ಕೋವಿ ಹೊಂದಲು ಅವಕಾಶ ನೀಡಬೇಕು. –ಪಿ.ಎಂ.ಬಿಜು, ಬೆಳೆಗಾರ

ಕೇಂದ್ರ ಹಾಗೂ ರಾಜ್ಯ ಸರ್ಕಾರ ಬೆಳೆಗಾರರ ನೆರವಿಗೆ ಕೂಡಲೇ ಧಾವಿಸಬೇಕಿದೆ. ಪ್ರಸ್ತುತ ಕಾಫಿಗೆ ಅತ್ಯುತ್ತಮ ಬೆಲೆ ಬಂದಿದ್ದರೂ, ಅಕಾಲಿಕ ಮಳೆ ಹಿನ್ನೆಲೆಯಲ್ಲಿ ಶೇ.40 ರಷ್ಟು ನಷ್ಟ ಸಂಭವಿಸಿದೆ. ಆದ್ದರಿಂದ ಸಾಲದ ಬಡ್ಡಿ ಮನ್ನಾ ಮಾಡಬೇಕೆಂದು ಆಗ್ರಹಿಸಿದರು.

ನಾಕೂರು ಶಿರಂಗಾಲದ ಸಮಗ್ರ ಕೃಷಿಕ ಪಿ.ಎಂ.ಬಿಜು ಮಾತನಾಡಿ, ಅರಣ್ಯ ಇಲಾಖೆ ಕಾಫಿ ತೋಟಗಳಲ್ಲಿ ಮರ ಕಪಾತು ಮಾಡುವುದನ್ನು ನಿಷೇಧಿಸಿ ಮೊಕದ್ದಮ್ಮೆ ದಾಖಲಿಸುವ ಪ್ರಯತ್ನಕ್ಕೆ ಮುಂದಾಗಿದೆ. ನೆರಳಿದ್ದಲ್ಲಿರುವ ರೋಬೆಸ್ಟಾ ಕಾಫಿ ಇಳುವರಿ ಕಡಿಮೆಯಾಗುವ ಹಿನ್ನೆಲೆಯಲ್ಲಿ ಮರ ಕಪಾತು ಮಾಡುವ ಅನಿವಾರ್ಯತೆ ಇದೆ. ಕೃಷಿಕರ ಅಹವಾಲುಗಳನ್ನು ಕೇಳಿ ಪರಿಹರಿಸುವ ನಿಟ್ಟಿನಲ್ಲಿ ಜಿಲ್ಲೆಯ ಶಾಸಕರು ಬೆಳೆಗಾರರೊಂದಿಗೆ ಸಂವಾದ ನಡೆಸಬೇಕು ಎಂದು ಮನವಿ ಮಾಡಿದರು.

ಕುಶಾಲನಗರ ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ವಿಘ್ನೇಶ್ ಭೂತನಕಾಡು ಮಾತನಾಡಿ, ಅಕಾಲಿಕ ಮಳೆಯ ಹಿನ್ನೆಲೆಯಲ್ಲಿ ಕೃಷಿ ಪ್ರಧಾನ ಜಿಲ್ಲೆಯಾಗಿರುವ ಕೊಡಗಿನಲ್ಲಿ ಕಾಫಿ ಮತ್ತು ಭತ್ತ ಆರ್ಥಿಕ ವ್ಯವಸ್ಥೆ ಹೇಗಿದೆ ಎಂಬ ಪ್ರಾತ್ಯಕ್ಷಿಕೆ ಮಾಹಿತಿಯನ್ನು ಸಂಬಂಧಿಸಿದವರಿಗೆ ತಲುಪಿಸುವ ನಿಟ್ಟಿನಲ್ಲಿ ಸಂವಾದ ಆಯೋಜಿಸಲಾಗಿದೆ ಎಂದು ಹೇಳಿದರು.

ಸುಂಟಿಕೊಪ್ಪ ಹೋಬಳಿಯ ಭತ್ತ ಕೃಷಿಕ ಪಟ್ಟೆಮನೆ ಉದಯಕುಮಾರ್, ಗುಡ್ಡೆಹೊಸೂರಿನ ಪ್ರಗತಿಪರ ಭತ್ತದ ಕೃಷಿಕ ಚಂದ್ರಶೇಖರ್ ಮಾತನಾಡಿದರು. ಇದೇ ಸಂದರ್ಭದಲ್ಲಿ ಕಾಫಿ ತೋಟದಲ್ಲಿ ಅಕಾಲಿಕ ಮಳೆಯಿಂದ ಉಂಟಾದ ನಷ್ಟ, ಅರಳಿರುವ ಕಾಫಿ ಹೂವು, ನೆಲಕಚ್ಚಿರುವ ಕಾಫಿ, ಆನೆ ಹಾವಳಿಯಿಂದ ಉಂಟಾಗಿರುವ ನಷ್ಟದ ಬಗ್ಗೆ ಪ್ರಾತ್ಯಕ್ಷಿಕೆ ಸಹಿತ ಬೆಳೆಗಾರರೊಂದಿಗೆ ಪತ್ರಕರ್ತರು ಮಾಹಿತಿ ಪಡೆದರು.

ಸಂವಾದದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಬಿ. ವಿನ್ಸೆಂಟ್, ಉಪಾಧ್ಯಕ್ಷ ಬಿ.ಸಿ.ದಿನೇಶ್, ಖಜಾಂಚಿ ವಿ.ಸಿ.ನವೀನ್, ನಿರ್ದೇಶಕ ಶಿವಣ್ಣ, ಗುಡ್ಡೆಮನೆ ವಿಶುಕುಮಾರ್ ಮತ್ತಿತರರಿದ್ದರು.

ಕಾಡು ಪ್ರಾಣಿಗಳು ತಿಂದು ಉಳಿದಿದ್ದು ನಮಗೆ

ಕಾಡಾನೆ, ಕೋತಿಗಳು, ನವಿಲು, ಕಾಡುಹಂದಿ, ಕಾಡುಕೋಣ, ಪಕ್ಷಿಗಳು ತಿಂದು ಅವುಗಳು ಉಳಿದಿದ್ದ ಫಸಲಿನಲ್ಲಿ ನಾವು ಜೀವನ ನಿರ್ವಹಣೆ ಮಾಡಬೇಕು. ಅರಣ್ಯ ಇಲಾಖೆಯವರು ಆನೆಗಳನ್ನು ಕಾಡಿಗಟ್ಟುವ ನಾಟಕೀಯವಾಡುತ್ತಿದ್ದು, ಆದರಿಂದ ಕವಡೆಕಾಸಿನ ಕಿಮ್ಮತ್ತಿಲ್ಲ. ಜೊತೆಗೆ ಕಸ್ತೂರಿ ರಂಗನ್ ವರದಿ ಜಾರಿ ಎಂಬ ತೂಗುಗತ್ತಿ ನಮ್ಮೆಲ್ಲರ ಮೇಲಿದ್ದು, ಮುಂದೊಂದು ದಿನ ನಾವು ಬೆಳೆದ ಫಸಲನ್ನು ಕೊಯ್ಲು ಮಾಡಲು ವಿವಿಧ ಇಲಾಖೆಗಳ ಅನುಮತಿ ಬೇಕಾಗಬಹುದು ಎಂಬ ಬೆಳೆಗಾರರು ಸಂವಾದದಲ್ಲಿ ತಮ್ಮ ಅಳಲು ತೋಡಿಕೊಂಡರು.

ಸಾರ್ವಜನಿಕರಿಂದ ದೂರು ಬರದಂತೆ ನೌಕರರು ಗಮನಹರಿಸಿ



ಮಡಿಕೇರಿಯ ತಹಸೀಲ್ದಾರ್ ಕಚೇರಿಯಲ್ಲಿ ಲೋಕಾಯುಕ್ತ ಡಿವೈಎಸ್‌ಪಿ ವಿ.ಕೃಷ್ಣಯ್ಯ ಅವರಿಗೆ ವೃದ್ಧೆ ಅಹವಾಲು ಸಲ್ಲಿಸಿದರು. ಲೋಕಾಯುಕ್ತ ಇನ್ಸ್‌ಪೆಕ್ಟರ್ ಲೋಕೇಶ್, ತಹಸೀಲ್ದಾರ್ ಪ್ರವೀಣ್ ಕುಮಾರ್ ಇದ್ದರು.

ಮಡಿಕೇರಿ ಜ.12–ಸಾರ್ವಜನಿಕರಿಂದ ದೂರು ಬರದಂತೆ ಗಮನಹರಿಸುವುದು ಸೂಕ್ತ ಅಧಿಕಾರಿ ಮತ್ತು ಸಿಬ್ಬಂದಿಯ ಕರ್ತವ್ಯ ಎಂದು ಲೋಕಾಯುಕ್ತ ಡಿವೈಎಸ್‌ಪಿ ವಿ.ಕೃಷ್ಣಯ್ಯ ಸಲಹೆ ನೀಡಿದರು.

ನಗರದ ತಹಸೀಲ್ದಾರ್ ಕಚೇರಿಯಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ ಮಾತನಾಡಿದ ಅವರು, ಸರ್ಕಾರದ ನಿಯಮಾನುಸಾರ ಕೆಲಸಗಳನ್ನು ಮಾಡಬೇಕು. ಸಾರ್ವಜನಿಕರ ಕೆಲಸ ಆಗದಿರುವುದಕ್ಕೆ ಹಿಂಬರಹ ನೀಡಬೇಕು. ಸಾರ್ವಜನಿಕರಿಂದ ದೂರುಗಳು ಬಂದಾಗ ತಕ್ಷಣ ಸ್ಪಂದಿಸಬೇಕು ಎಂದು ಹೇಳಿದರು.

ಸಾರ್ವಜನಿಕರು ಮಾಹಿತಿ ಕೇಳಿದಾಗ ನೀಡುವುದು ಮೊದಲ ಆದ್ಯತೆ ಆಗಬೇಕು. ಮಾಹಿತಿ ನೀಡದೆ ಸತಾಯಿಸುವುದು ಒಂದು ರೀತಿಯ ಭ್ರಷ್ಟಾಚಾರವಿದ್ದಂತೆ. ಆದ್ದರಿಂದ ಯಾವುದೇ ಮಾಹಿತಿಯನ್ನು ಸಮರ್ಪಕವಾಗಿ ಒದಗಿಸಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿ ಪ್ರತಿ ವರ್ಷ ಆಸ್ತಿದಾಯಕ ಪಟ್ಟಿ ಸಲ್ಲಿಸಬೇಕು. ಕಚೇರಿಯಲ್ಲಿ ಅಧಿಕಾರಿ ಮತ್ತು ಸಿಬ್ಬಂದಿಯ ವಿವರದ ನಾಮಫಲಕ ಅಳವಡಿಸಬೇಕು. ದಾಖಲಾತಿಗಳನ್ನು ಕ್ರಮಬದ್ಧವಾಗಿ ಇಟ್ಟುಕೊಳ್ಳಬೇಕು. ಮಧ್ಯವರ್ತಿಗಳಿಗೆ ಅವಕಾಶ ನೀಡಬಾರದು ಎಂದು ಸೂಚಿಸಿದರು.

ಲೋಕಾಯುಕ್ತ ಇನ್ಸ್‌ಪೆಕ್ಟರ್ ಲೋಕೇಶ್ ಮಾತನಾಡಿ, ಜಿಲ್ಲೆಯಲ್ಲಿ ಸರಿಯಾಗಿ ನಿರ್ವಹಣೆ ಮಾಡದ ಕೆಲ ಹೋಂ ಸ್ಟೇಗಳಿಗೂ ಪರವಾನಗಿ ನೀಡಲಾಗಿದೆ. ಈ ಸಂಬಂಧ ಮತ್ತೊಮ್ಮೆ ಪರಿಶೀಲಿಸಬೇಕು. ಜಿಲ್ಲೆಯಲ್ಲಿ ದೊಡ್ಡ ದೊಡ್ಡ ಶ್ರೀಮಂತರು ಸಹ ಬಿಪಿಎಲ್ ಪಡಿತರ ಚೀಟಿ ಪಡೆದಿರುವ ಬಗ್ಗೆ ಮಾಹಿತಿ ಇದ್ದು, ಈ ಬಗ್ಗೆ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಪರಿಶೀಲಿಸಬೇಕು. ಅರ್ಹರಲ್ಲದವರಿಗೆ ಬಿಪಿಎಲ್ ಪಡಿತರ ಚೀಟಿ ತಲುಪಿಸಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ಕಂದಾಯ ನಿಗದಿ, ಭೂಮಿಗೆ ಸಂಬಂಧಿಸಿದ ದಾಖಲೆ ಒದಗಿಸುವುದು, ರಸ್ತೆ ನಿರ್ಮಾಣಕ್ಕೆ ಜಾಗ ಬಿಡಿಸುವುದು ಸೇರಿದಂತೆ ಮತ್ತಿತರ ಸಮಸ್ಯೆಗಳ ಕುರಿತು ಅರ್ಜಿಗಳು ಸಲ್ಲಿಕೆಯಾದವು. ನಂತರ ತಹಸೀಲ್ದಾರ್ ಪ್ರವೀಣ್ ಕುಮಾರ್, ಕಂದಾಯ ಇಲಾಖೆ ದೂರುಗಳಿಗೆ ಸಂಬಂಧಿಸಿದಂತೆ ಕೆಲ ಮಾಹಿತಿ ನೀಡಿದರು. ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.

ಅಧಿಕಾರ ವಿಕೇಂದ್ರೀಕರಣದ ರೂವಾರಿ ರಾಮಕೃಷ್ಣ ಹೆಗಡೆ



ಮಂಡ್ಯ, ಜ.12– ಮೌಲ್ಯಧಾರಿತ ರಾಜಕಾರಣಕ್ಕೆ ಹೆಸರುವಾಸಿಯಾದ ರಾಮಕೃಷ್ಣ ಹೆಗಡೆ ಅವರು ಮುಖ್ಯಮಂತ್ರಿಯಾಗಿದ್ದ ವೇಳೆ ಅಧಿಕಾರ ವಿಕೇಂದ್ರಿಕರಣ ವ್ಯವಸ್ಥೆ ಜಾರಿಗೊಳಿಸಿ ಪಂಚಾಯತಿಗಳಿಗೆ ಅಧಿಕಾರ ನೀಡುವ ಮೂಲಕ ಶಕ್ತಿಯುತ ರಾಜಕಾರಣ ವ್ಯವಸ್ಥೆ ರೂಪಿಸಿದರು ಎಂದು ಹಿರಿಯ ಪತ್ರಕರ್ತ ಮತ್ತಿಕೆರೆ ಜಯರಾಂ ಬಣ್ಣಿಸಿದರು.

ಶುಕ್ರವಾರ ನಗರದ ಗಾಂಧಿ ಭವನದಲ್ಲಿ ಲೋಕಶಕ್ತಿ ಪಾರ್ಟಿ ಸಹಯೋಗದಲ್ಲಿ ಆಯೋಜಿಸಿದ್ದ ಮಾಜಿ ಮುಖ್ಯಮಂತ್ರಿ ದಿ.ರಾಮಕೃಷ್ಣ ಹೆಗಡೆಯವರ 20ನೇ ಪುಣ್ಯ ಸ್ಮರಣೆ ಪ್ರಯುಕ್ತ ರಕ್ತದಾನ ಹಾಗೂ ಸಾಧಕರಿಗೆ ಅಭಿನಂದನಾ ಸಮಾರಂಭ ಉದ್ಘಾಟಿಸಿ ಮಾತನಾಡಿ, ರಾಮಕೃಷ್ಣ ಹೆಗಡೆ ಅವರು ವಿಕೇಂದ್ರಿಕರಣ ವ್ಯವಸ್ಥೆ ಜಾರಿ ಮಾಡಿ ಜಿಪಂ ಮತ್ತು ಮಂಡಲ ಪಂಚಾಯತಿಗೆ ಪರಮಾಧಿಕಾರ ನೀಡಿದ್ದರು. ಸಚಿವರಿಗೆ ಇದ್ದ ಅಧಿಕಾರ ಜಿಪಂ ಅಧ್ಯಕ್ಷರಿಗೆ, ಸದಸ್ಯರಿಗೆ ಶಾಸಕರ ಅಧಿಕಾರ ಇತ್ತು. ಮಂಡಲ ಪಂಚಾಯತ್ ಪ್ರಧಾನರಿಗೆ ಹೆಚ್ಚಿನ ಅಧಿಕಾರ ನೀಡಲಾಗಿತ್ತು. ಆದರೆ ಶಾಸಕರು ಮತ್ತು ಸಚಿವರು ನಮಗೆ ಹೆಚ್ಚಿನ ಅಧಿಕಾರ ಇಲ್ಲ ಎಂದು ಪಂಚಾಯತ್ ಅಧಿಕಾರ ಮೊಟಕುಗೊಳಿಸಿ ವಿಕೇಂದ್ರೀಕರಣ ವ್ಯವಸ್ಥೆ ಅಸ್ಥಿರಗೊಳಿಸಿದ್ದಾರೆ. ಈಗಿರುವ 3 ಹಂತದ ಪಂಚಾಯತ್‌ಗಳಲ್ಲಿ ಅಧಿಕಾರಿಗಳದ್ದೇ ಕಾರುಬಾರು ಎಂದರು.

ರಾಮಕೃಷ್ಣ ಹೆಗಡೆ ತತ್ವ ಸಿದ್ಧಾಂತ ಬಿಟ್ಟು ರಾಜಕಾರಣ ಮಾಡಿದವರಲ್ಲ. ಅವರು ಎಂದಿಗೂ ರಾಜಿ ವ್ಯವಸ್ಥೆಗೆ ಹೋಗಲಿಲ್ಲ. ಅವರು ಮುಖ್ಯಮಂತ್ರಿ ಆಗಿದ್ದಾಗ ಫೋನ್ ಕದ್ದಾಲಿಕೆ ಆರೋಪ ಬಂದ ತಕ್ಷಣ ಕುರ್ಚಿ ತ್ಯಾಗ ಮಾಡಿದರು. ಮೌಲ್ಯಧಾರಿತ ರಾಜಕಾರಣ, ಉತ್ತಮ ಆಡಳಿತ ವ್ಯವಸ್ಥೆಯಿಂದ ಅವರು ಚಿರಸ್ಥಾಯಿಯಾಗಿದ್ದಾರೆ ಎಂದರು. ಲೋಕಶಕ್ತಿ ಪಾರ್ಟಿ ರಾಜ್ಯಾಧ್ಯಕ್ಷ ಚಂದ್ರಶೇಖರ್ ವಿ.ಸ್ಥಾವರಮಠ್ ಮಾತನಾಡಿ, ರಾಜ್ಯದಲ್ಲಿ ಮೊದಲ ಕಾಂಗ್ರೆಸ್ಸೇತರ ಸರ್ಕಾರದ ಮುಖ್ಯಮಂತ್ರಿಯಾಗಿದ್ದ ರಾಮಕೃಷ್ಣ ಹೆಗಡೆಯವರಿಗೆ ಸಮ್ಮಿಶ್ರ ಸರ್ಕಾರದ ಗದ್ದುಗೆ ಹೂವಿನ ಹಾಸಿಗೆಯಲ್ಲ. ಮುಳ್ಳಿನ ಹಾಸಿಗೆ ಎಂಬ ಅನುಭವ ಆಗಿತ್ತು. ಆದರೂ ಉತ್ತಮ ಆಡಳಿತ ನೀಡಿದ ಅವರು ಮಹಾತ್ಮ ಗಾಂಧಿಯವರ ಗ್ರಾಮ ರಾಜ್ಯ ಕನಸು ಸಾಕಾರಕ್ಕೆ ಶ್ರಮಿಸಿದ್ದರು. ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಸೌಲಭ್ಯ ದೊರಕಿಸಿ ಕೊಟ್ಟ ಕೀರ್ತಿ ಇವರಿಗೆ ಸಲ್ಲುತ್ತದೆ. ಹೆಗಡೆ ಅವರನ್ನು ಪಕ್ಷದಿಂದ ಉಚ್ಚಾಟಿಸಿದಾಗ ಅವರೊಂದಿಗೆ ನಿತ್ಯ ಸಚಿವ ಕೆ.ಎಸ್.ಶಂಕರೇಗೌಡರ ಮಗ ಸಚ್ಚಿದಾನಂದ ಬೆಂಬಲವಾಗಿ ನಿಂತಿದ್ದರು ಎಂಬುದನ್ನು ಸ್ಮರಿಸಿದ ಅವರು ಮುಂಬರುವ ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ ತಾವೂ ಸ್ಪರ್ಧೆ ಮಾಡುತ್ತಿರುವುದಾಗಿ ಘೋಷಿಸಿದರು.

ಇದೇ ವೇಳೆ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಗಣ್ಯರನ್ನು ಅಭಿನಂದಿಸಲಾಯಿತು.

ವೇದಿಕೆಯಲ್ಲಿ ಪತ್ರಕರ್ತರ ಸಂಘದ ಅಧ್ಯಕ್ಷ ಬಿ.ಪಿ.ಪ್ರಕಾಶ್, ರೈತ ಸಂಘದ ಜಿಲ್ಲಾಧ್ಯಕ್ಷ ಎ.ಎಲ್.ಕೆಂಪೂಗೌಡ, ಹಿರಿಯ ಪತ್ರಕರ್ತ ಎಸ್.ಕೃಷ್ಣಸ್ವರ್ಣಸಂದ್ರ, ಡಿ.ಎಲ್‌ಲಿಂಗರಾಜು, ಕನ್ನಡಪರ ಹೋರಾಟಗಾರ ಮಂಜುನಾಥ್, ಲೋಕ್ ಶಕ್ತಿ ಮಹಿಳಾ ಘಟಕದ ಅಧ್ಯಕ್ಷೆ ಭಾಗ್ಯ, ಪ್ರಧಾನ ಕಾರ್ಯದರ್ಶಿ ಬಸವರಾಜಪ್ಪ, ಮುಖಂಡರಾದ ವೆಂಕಟೇಶ್, ಎಂ.ಎನ್.ಶಂಕರ್ ಉಪಸ್ಥಿತರಿದ್ದರು.

ಭಾರತಿ ಕಾಲೇಜಿನಲ್ಲಿ ಸಂಕ್ರಾಂತಿ ಸಂಭ್ರಮಕ್ಕೆ ಚಾಲನೆ



ಭಾರತೀನಗರ, ಜ.12– ಇಲ್ಲಿನ ಭಾರತಿ ಕಾಲೇಜಿನಲ್ಲಿ ಭಾರತಿ ಎಜುಕೇಷನ್ ಟ್ರಸ್ಟ್ ನಿಂದ ಆಯೋಜಿಸಿದ್ದ ಸಂಕ್ರಾಂತಿ ಸಂಭ್ರಮಕ್ಕೆ ರಾಶಿಗೆ ಪೂಜೆ ಮಾಡುವ ಮೂಲಕ ಟ್ರಸ್ಟ್ ಸಿಇಓ ಆಶಯ್ ಚಾಲನೆ ನೀಡಿದರು.

ಭಾರತಿ ಎಜುಕೇಶನ್ ಟ್ರಸ್ಟ್ ಅಧ್ಯಕ್ಷ ಮಧು ಜಿ.ಮಾದೇಗೌಡರ ಅಧ್ಯಕ್ಷತೆಯಲ್ಲಿ ನಡೆದ ಸಂಕ್ರಾಂತಿ ಸಂಭ್ರಮಲ್ಲಿ ವಿದ್ಯಾರ್ಥಿಗಳು ಕುಣಿದು ಕುಪ್ಪಳಿಸಿದರು. ಕಾಲೇಜು ಆವರಣದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು. ಕಾಲೇಜಿನ ಎಲ್ಲಾ ಅಧ್ಯಾಪಕರು, ಅಧ್ಯಾಪಕೇತರರು, 1000ಕ್ಕೂ ಹೆಚ್ಚು ವಿದ್ಯಾರ್ಥಿಗಳು ದೇಸಿ ಉಡುಗೆ ತೊಟ್ಟು ಸಂಭ್ರಮಾಚರಣೆಯಲ್ಲಿ ಪಾಲ್ಗೊಂಡಿದ್ದರು. ಪೂರ್ವಿಕರು ಹಾಡುತ್ತಿದ್ದ ಹಾಡು, ನೃತ್ಯ, ಗಾದೆ, ಒಗಟು ಹೇಳುವುದು, ಕೋಲಾಟ ಸೇರಿದಂತೆ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾಲೇಜಿನ ಅಂಗಳದಲ್ಲಿ ಅಂಗಡಿ ನಿರ್ಮಿಸಿ ವಿದ್ಯಾರ್ಥಿಗಳು ಚಕ್ಕುಲಿ, ನಿಪ್ಪಟ್ಟು ರವೆ ಉಂಡೆ, ಕಡಲೆಕಾಯಿ, ಸೋರೆಕಾಯಿ, ಬೇಯಿಸಿದ ಹಸಿರುಕಾಳು, ತರಕಾರಿ, ಪಾನಕ, ಮಜ್ಜಿಗೆ ಮೊದಲಾದ ದೇಸಿ ತಿಂಡಿಗಳನ್ನು ಮಾರಾಟ ಮಾಡಿದರು. ರುಚಿಕರ ತಿಂಡಿ ಮಾಡಿದ ವಿದ್ಯಾರ್ಥಿಗಳಿಗೆ ಕಜ್ಜಾಯದ ಬುಟ್ಟಿಯ ಮೂಲಕ ಬಹುಮಾನ ನೀಡಲಾಯಿತು.

ಸ್ವದೇಶಿ ಬಳಸಿ ದೇಶ ಉಳಿಸಿ, ಜಾಗತೀಕರಣ ಸಾಕು ಭಾರತೀಕರಣ ಬೇಕು. ಸ್ವದೇಶಿಯಿಂದ ರಾಷ್ಟ್ರಜಾಗೃತಿ. ಆಚಾರವೇ ಔಷಧ ಎಂಬ ಘೋಷಣೆಗಳು ಮೊಳಗಿದವು.

ಅಲಂಕೃತಗೊಂಡ ಎತ್ತಿನಗಾಡಿಗಳಿಗೆ ಮತ್ತು ಸುಂದರವಾಗಿ ದೇಸಿ ವೇಷಭೂಷಣ ತೊಟ್ಟ ಇಬ್ಬರು ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ 'ದೇಶಿ ಚಲುವ' ಮತ್ತು 'ದೇಶಿ ಚೆಲುವೆ' ಪ್ರಶಸ್ತಿ ಪತ್ರ ಮತ್ತು ಬಹುಮಾನ ವಿತರಿಸಲಾಯಿತು. ಕಾರ್ಯಕ್ರಮದ ನಂತರ ವಿದ್ಯಾರ್ಥಿಗಳು ರಾಸುಗಳನ್ನು ಕಿಚ್ಚು ಹಾಯಿಸಿದರು. ಕಾರ್ಯಕ್ರಮಕ್ಕೂ ಮೊದಲು ಉಪನ್ಯಾಸಕರು, ವಿದ್ಯಾರ್ಥಿಗಳು ಎತ್ತಿನಗಾಡಿ ಮೂಲಕ ಮದ್ದೂರು–ಮಳವಳ್ಳಿ ಮುಖ್ಯ ರಸ್ತೆಯಲ್ಲಿ ತಮಟೆ, ನಗಾರಿಗಳೊಂದಿಗೆ ಮೆರವಣಿಗೆ ನಡೆಸಿದರು. ಪೂಜಾ ಕುಣಿತ, ಪೂರ್ಣಕುಂಭ, ಅಲಂಕೃತ ಎತ್ತಿನ ಗಾಡಿಗಳು ಮೆರವಣಿಗೆ ಮೆರಗು ನೀಡಿದವು. ವಿದ್ಯಾರ್ಥಿಗಳು, ಶಿಕ್ಷಕರು, ಪ್ರಾಧ್ಯಾಪಕಿಯರು ಒಬ್ಬರಿಗೊಬ್ಬರಿಗೂ ಹಬ್ಬದ ಶುಭಾಶಯ ವಿನಿಯಮ ಮಾಡಿಕೊಂಡು ಎಳ್ಳುಬೆಲ್ಲ ಹಂಚುವ ಮೂಲಕ ಹಬ್ಬವನ್ನು ಸಂಭ್ರಮಿಸಿದರು.

ವಿಧಾನ ಪರಿಷತ್ ಸದಸ್ಯ ಮಧು ಜಿ.ಮಾದೇಗೌಡ ಮಾತನಾಡಿ, ಭಾರತಿ ವಿದ್ಯಾಸಂಸ್ಥೆಯ ಎಲ್ಲಾ ವಿದ್ಯಾರ್ಥಿಗಳಿಗೂ ಹಳ್ಳಿ ಸೊಗಡಿನ ಸಂಕ್ರಾಂತಿ ಹಬ್ಬದ ಬಗ್ಗೆ ತಿಳಿಸಲು ಕಾರ್ಯಕ್ರಮ ಆಯೋಜಿಸಲಾಗಿದೆ. ಇಂದಿನ ಪೀಳಿಗೆಗೆ ಕಜ್ಜಾಯ, ರವೆ ಉಂಡೆ ಎಂದರೇನು ಎಂಬುದೇ ಗೊತ್ತಿಲ್ಲ. ಹಾಗಾಗಿ ಕೆಲವು ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಕಜ್ಜಾಯ, ರವೆ ಉಂಡೆ ಸೇರಿದಂತೆ ಹಲವು ಹಳ್ಳಿ ಸೊಗಡಿನ ಖಾದ್ಯಗಳಿರುವ ಬುಟ್ಟಿಯನ್ನು ನೀಡಲು ನಿರ್ಧರಿಸಲಾಗಿದೆ ಎಂದರು. ವೇದಿಕೆಯಲ್ಲಿ ಬಿಇಟಿ ಕಾರ್ಯದರ್ಶಿ ಬಿ.ಎಂ.ನಂಜೇಗೌಡ, ಸಿದ್ದೇಗೌಡ, ಟ್ರಸ್ಟಿಗಳಾದ ಎಸ್.ಜಯರಾಮು, ಎಸ್.ಬಸವೇಗೌಡ, ಕಾಲೇಜಿನ ಪ್ರಾಂಶುಪಾಲ ಡಾ.ಪಿ. ನಾಗೇಂದ್ರ, ಸಂಚಾಲಕ ಪ್ರೊ.ಎಸ್ ರೇವಣ್ಣ, ಡಾ.ಎಂ.ಎಸ್.ಮಹದೇವಸ್ವಾಮಿ, ಬಿ.ಕೆ.ಕೃಷ್ಣ, ಸ್ನಾತಕೋತ್ತರ ವಿಭಾಗದ ಮುಖ್ಯಸ್ಥ ಎಸ್. ನಾಗರಾಜು, ಗ್ರಾಪಂ ಅಧ್ಯಕ್ಷೆ ಕೌಸಲ್ಯ ಇದ್ದರು.

ದಶಪಥ ಹೆದ್ದಾರಿಗೆ ಬಿದ್ದ ಹೈಟೆನ್ಷನ್ ಕಂಬ: ವ್ಯಕ್ತಿ ಪ್ರಾಣಾಪಾಯದಿಂದ ಪಾರು

ಮಂಡ್ಯ, ಜ.12– ದಶಪಥ ಹೆದ್ದಾರಿಗೆ ಹೈಟೆನ್ಷನ್ ವಿದ್ಯುತ್ ಕಂಬ ಉರುಳಿ ಬಿದ್ದಿದ್ದು, ಕೂದಲೆಳೆ ಅಂತರದಲ್ಲಿ ಬೈಕ್ ಸವಾರ ಪ್ರಾಣಾಪಾಯದಿಂದ ಪಾರಾಗಿರುವ ಘಟನೆ ಶ್ರೀರಂಗಪಟ್ಟಣ ತಾಲೂಕಿನ ರಾಗಿಮುದ್ದನಹಳ್ಳಿ ಬಳಿ ಸಂಭವಿಸಿದೆ.

ಶ್ರೀರಂಗಪಟ್ಟಣದ ಗಂಜಾಂ ನಿವಾಸಿ ಸುರೇಶ್ ಪ್ರಾಣಾಪಾಯದಿಂದ ಪಾರಾದವರು. ಈತ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಯ ಸರ್ವಿಸ್ ರಸ್ತೆಯಲ್ಲಿ ಮಂಡ್ಯದಿಂದ ಮೈಸೂರು ಕಡೆಗೆ ಬೈಕ್‌ನಲ್ಲಿ ತೆರಳುತ್ತಿದ್ದ ವೇಳೆ ಬೈಕ್ ಮೇಲೆ ವಿದ್ಯುತ್ ಕಂಬ ಬಿದ್ದಿದ್ದು, ಅದೃಷ್ಟವಶಾತ್ ಸುರೇಶ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಸರ್ವಿಸ್ ರಸ್ತೆಗೆ ವಿದ್ಯುತ್ ಕಂಬ ಬಿದ್ದ ಪರಿಣಾಮ ಟ್ರಾಫಿಕ್ ಜಾಮ್ ಉಂಟಾಗಿತ್ತು. ವಿದ್ಯುತ್ ಕಂಬದಲ್ಲಿ ಕ್ಲಾಂಪ್ ಕಳ್ಳತನ ಹಿನ್ನೆಲೆಯಲ್ಲಿ ರಸ್ತೆಗೆ ವಿದ್ಯುತ್ ಕಂಬ ಉರುಳಿ ಬಿದ್ದಿದೆ ಎಂದು ಶಂಕಿಸಲಾಗಿದೆ.

ಬೈಕ್ ಸವಾರ ಸುರೇಶ್ ಮಾತನಾಡಿ, ನನ್ನ ತಂದೆ, ತಾಯಿ ಪುಣ್ಯ, ದೇವರ ಆಶೀರ್ವಾದ ನನಗೆ ಪುನರ್ಜನ್ಮ ಸಿಕ್ಕಿದೆ. ಒಂದು ಸೆಕೆಂಡ್ ಮುಂದೆ ಬಂದಿದ್ದರೇ ನಿಮ್ಮ ಜೊತೆ ಮಾತನಾಡುತ್ತಿರಲಿಲ್ಲ. ಏಕಾಏಕಿ ನನ್ನ ಬೈಕ್ ಮೇಲೆ ಕಂಬ ಉರುಳಿ ಬಿತ್ತು. ಏನಾಯ್ತು ಎಂದು ನನಗೆ ಒಂದು ಕ್ಷಣ ತಿಳಿಯಲೇ ಇಲ್ಲ. ವಿದ್ಯುತ್ ಕಂಬದ ಸಪೋರ್ಟಿಂಗ್ ಕಂಬಿ ಕಳ್ಳತನವೇ ಈ ದುರಂತಕ್ಕೆ ಕಾರಣ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ವಿದ್ಯುತ್ ಕಂಬ ಬೀಳುತ್ತಿದ್ದಂತೆಯೆ ವಿದ್ಯುತ್ ಸಂಪರ್ಕ ಕಡಿತವಾಯಿತು. ಇಲ್ಲದಿದ್ದರೇ ಇನ್ನು ದೊಡ್ಡ ದುರಂತ ನಡೆಯುತ್ತಿತ್ತು. ವಿದ್ಯುತ್ ಕಂಬದ ಸಪೋರ್ಟಿಂಗ್ ಕಂಬ ಕಳ್ಳತನವಾಗಿದ್ರು ಅದನ್ನು ಸರಿಪಡಿಸದ ಅಧಿಕಾರಿಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ಸ್ವಾಮಿ ವಿವೇಕಾನಂದರ ಚಿಂತನೆಗಳು ಸಾರ್ವಕಾಲಿಕ

● ಉಪನ್ಯಾಸಕ ಸುರೇಶ್ ಋಗ್ವೇದಿ ಸ್ಮರಣೆ ● ರಾಷ್ಟ್ರೀಯ ಯುವ ದಿನಾಚರಣೆ



ಚಾಮರಾಜನಗರದ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದ ಬಿ.ಎಡ್ ಕಾಲೇಜಿನಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಯುವ ದಿನಾಚರಣೆಯಲ್ಲಿ ಗಣ್ಯರು ಪ್ರತಿಜ್ಞಾವಿಧಿ ಬೋಧಿಸಿದರು.

> ಜಗತ್ತಿನ ಅತಿದೊಡ್ಡ ವೀರಸನ್ಯಾಸಿ ಸ್ವಾಮಿ ವಿವೇಕಾನಂದರು ಅಪ್ರತಿಮ ದೇಶಭಕ್ತ, ಧಾರ್ಮಿಕ, ವೈಜ್ಞಾನಿಕ ಚಿಂತಕ, ಸಮಾಜ ಸುಧಾರಕರು ಹೌದು. ಇಡೀ ವಿಶ್ವಕ್ಕೆ ಭಾರತ ದರ್ಶನ ಮಾಡಿಸಿದ ವಿವೇಕಾನಂದರ ವಿಚಾರಧಾರೆಗಳು ಇಂದಿಗೂ ಪ್ರಸ್ತುತವಾಗಿದೆ. ಸ್ವಾಮಿ ವಿವೇಕಾನಂದರು ನಮ್ಮೆಲ್ಲರಿಗೂ ಮಾದರಿಯಾಗಿದ್ದಾರೆ.
> -ಡಾ.ಕೆ.ಸಿ.ಬಸವಣ್ಣ, ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲ

ಚಾಮರಾಜನಗರ, ಜ.12–ಭಾರತದ ಶ್ರೇಷ್ಠ ಸಂಸ್ಕೃತಿ ಹಾಗೂ ಪರಂಪರೆಯನ್ನು ಇಡೀ ವಿಶ್ವಕ್ಕೆ ಅನಾವರಣಗೊಳಿಸಿದ ಸ್ವಾಮಿ ವಿವೇಕಾನಂದರ ರಾಷ್ಟ್ರೀಯ ಪರಿಕಲ್ಪನೆಯ ಆದರ್ಶ ಚಿಂತನೆಗಳು ಸಾರ್ವಕಾಲಿಕವಾಗಿವೆ ಎಂದು ಉಪನ್ಯಾಸಕ ಹಾಗೂ ರಾಷ್ಟ್ರೀಯ ಯುವ ಪ್ರಶಸ್ತಿ ಪುರಸ್ಕೃತ ಸುರೇಶ್ ಎನ್.ಋಗ್ವೇದಿ ಸ್ಮರಿಸಿದರು.

ನಗರದ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದ ಬಿ.ಎಡ್ ಕಾಲೇಜಿನಲ್ಲಿ ಕೇಂದ್ರ ಯುವ ಕಾರ್ಯ ಹಾಗೂ ಕ್ರೀಡಾ ಸಚಿವಾಲಯ, ನೆಹರು ಯುವ ಕೇಂದ್ರ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಏಡ್ಸ್ ನಿಯಂತ್ರಣ ಮತ್ತು ಪ್ರತಿಬಂಧಕ ಘಟಕ ಹಾಗೂ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯ ವತಿಯಿಂದ ಸ್ವಾಮಿ ವಿವೇಕಾನಂದರ 161ನೇ ಜನ್ಮ ದಿನಾಚರಣೆ ಹಾಗೂ ರಾಷ್ಟ್ರೀಯ ಯುವ ಸಪ್ತಾಹ ಅಂಗವಾಗಿ ಶುಕ್ರವಾರ ಆಯೋಜಿಸಿದ್ದ 'ರಾಷ್ಟ್ರೀಯ ಯುವ ದಿನ' ಆಚರಣೆ ಸಮಾರಂಭದಲ್ಲಿ ವಿಶೇಷ ಉಪನ್ಯಾಸ ನೀಡಿ ಅವರು ಮಾತನಾಡಿದರು.

ರಾಷ್ಟ್ರದ ಯುವಜನತೆಗೆ ಮಾದರಿ ಶಕ್ತಿಯಾಗಿರುವ ಸ್ವಾಮಿ ವಿವೇಕಾನಂದರ ಜನ್ಮದಿನವನ್ನು ದೇಶದ್ಯಾಂತ ಆಚರಿಸಲಾಗುತ್ತಿದೆ. ಇಡೀ ಯುವಶಕ್ತಿ ಸಂಭ್ರಮಿಸುವ ದಿನ ಇದಾಗಿದೆ. ದೇಶದ ಅಭಿವೃದ್ಧಿಗಾಗಿ ಯುವಶಕ್ತಿಯ ಸೇವಾ ಮನೋಭಾವ, ಗುಣಶ್ರೇಷ್ಠತೆ, ತ್ಯಾಗ, ಏಕಾಗ್ರತೆ ಹೇಗಿರಬೇಕು ಎಂದು ತಮ್ಮ ಸಂದೇಶಗಳ ಮೂಲಕ ಸಾರಿದ ವಿವೇಕಾನಂದರು ಯುವಕರನ್ನು ಅಜ್ಞಾನದಿಂದ ಸುಜ್ಞಾನದೆಡೆಗೆ ನಡೆಸಿದರು. ಯುವಜನತೆಗೆ ರಾಷ್ಟ್ರೀಯ ಪರಿಕಲ್ಪನೆಯನ್ನು ಬಿತ್ತಿದವರಲ್ಲಿ ವಿವೇಕಾನಂದರು ಮೊದಲಿಗರು ಎಂದರು.

ಬಡತನ, ಜಾತೀಯತೆಯಿಂದ ಭಾರತೀಯರನ್ನು ಕೇವಲವಾಗಿ ನೋಡು ತ್ತಿದ್ದ ವಿದೇಶಿಯರಿಗೆ ಚಿಕಾಗೋ ವಿಶ್ವ ಸಮ್ಮೇಳನದಲ್ಲಿ ಸಹೋದರ, ಸಹೋದರಿಯರೇ ಎಂದು ಮಾನವತೆಯ ಸಂದೇಶದ ಮೂಲಕ ಉಪನ್ಯಾಸ ಆರಂಭಿಸಿದ ವಿವೇಕಾನಂದರು, ಇಡೀ ಜಗತ್ತು ಅಭಿಮಾನ, ಆತ್ಮವಿಶ್ವಾಸದಿಂದ ಭಾರತದತ್ತ ನೋಡುವಂತೆ ಮಾಡಿದರು. ಪ್ರಪಂಚದಲ್ಲಿ ಸಾಕಷ್ಟು ಸಂಸ್ಕೃತಿ, ನಾಗರಿಕತೆಗಳು ಬಂದು ಹೋಗಿವೆ. ಆದರೆ, ಭಾರತೀಯ ಸಂಸ್ಕೃತಿ, ಪರಂಪರೆಯ ಜೀವಂತಿಕೆಗೆ ವಿವೇಕಾನಂದರ ಕೊಡುಗೆ ಅಪಾರವಾಗಿದೆ ಎಂದು ತಿಳಿಸಿದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ವಸ್ವಾಮಿ ಮಾತನಾಡಿ, ಸ್ವಾಮಿ ವಿವೇಕಾನಂದರು ದೇಶದ ಆಧುನಿಕ ಚಿಂತಕ, ತತ್ವಜ್ಞಾನಿ, ದಾರ್ಶನಿಕರಾಗಿದ್ದಾರೆ. ಯುವ ಜನರಲ್ಲಿದ್ದ ಸಾಮಾಜಿಕ ಮೌಢ್ಯವನ್ನು ತೊಡೆಯಲು ಸತ್ಯಶೋಧನೆ ಮೂಲಕ ದೇಶದ ಪ್ರಗತಿ ಪೂರಕವಾಗಿ ಕೊಡುಗೆ ನೀಡಿದವರಲ್ಲಿ ವಿವೇಕಾನಂದರು ಪ್ರಮುಖರು. ಅವರ ಆದರ್ಶ ಚಿಂತನೆ ಗಳನ್ನು ಎಲ್ಲರೂ ಮೈಗೂಡಿಸಿಕೊಳ್ಳಬೇಕು ಎಂದರು.

ಜಿಲ್ಲಾ ಯುವ ಪ್ರಶಸ್ತಿ ಪುರಸ್ಕೃತ ಜಿ.ಬಂಗಾರು ಹಾಗೂ ಜಿಲ್ಲಾ ಏಡ್ಸ್ ನಿಯಂತ್ರಣ ಮತ್ತು ಪ್ರತಿಬಂಧಕ ಘಟಕದ ಮಹದೇವಪ್ರಸಾದ್, ರಾಷ್ಟ್ರೀಯ ಯುವ ಸಪ್ತಾಹ ಉದ್ದೇಶ ಹಾಗೂ ಸ್ವಾಮಿ ವಿವೇಕಾನಂದರ ಮೌಲ್ಯಯುತ ವಿಚಾರ ಕುರಿತು ತಿಳಿಸಿದರು. ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯ ಗ್ರಂಥಾಲಯದ ಶಿವ ಶಂಕರರಾಜೇ ಅರಸ್ ಏಡ್ಸ್ ನಿಯಂತ್ರಣದ ಬಗ್ಗೆ ಪ್ರತಿಜ್ಞಾವಿಧಿ ಬೋಧಿಸಿದರು. ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದ ಬಿ.ಎಡ್ ಕಾಲೇಜಿನ ಉಪನ್ಯಾಸಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಚಿಕ್ಕಲ್ಲೂರಿನಲ್ಲಿ ಪಂಕ್ತಿಭೋಜನಕ್ಕೆ ಅವಕಾಶ ನೀಡಿ



ಕೊಳ್ಳೇಗಾಲ ತಾಲೂಕಿನ ಚಿಕ್ಕಲ್ಲೂರು ಜಾತ್ರೆಯಲ್ಲಿ ಪಂಕ್ತಿಭೋಜನಕ್ಕೆ ಭಕ್ತರಿಗೆ ಯಾವುದೇ ತೊಂದರೆಯಾಗದಂತೆ ಕ್ರಮ ಕೈಗೊಳ್ಳಬೇಕು ಎಂದು ಮಂಟೇಸ್ವಾಮಿ, ರಾಚಪ್ಪಾಜಿ, ಸಿದ್ದಪ್ಪಾಜಿ ಹಾಗೂ ಪರಂಪರೆ ರಕ್ಷಣಾ ಹೋರಾಟ ಸಮಿತಿಯಿಂದ ಜಿಲ್ಲಾಧಿಕಾರಿ ಆಪ್ತಸಹಾಯಕ ಹೆಚ್.ಬಿ.ಭರತ್‌ಭೂಷನ್ ಅವರಿಗೆ ಮನವಿ ಸಲ್ಲಿಸಲಾಯಿತು.

ಚಾಮರಾಜನಗರ, ಜ.12– ಕೊಳ್ಳೇಗಾಲ ತಾಲೂಕಿನ ಚಿಕ್ಕಲ್ಲೂರಿನಲ್ಲಿ ಜ.25 ರಿಂದ 29ರವರೆಗೆ ನಡೆಯುವ ಜಾತ್ರೆಯಲ್ಲಿ ಪಂಕ್ತಿಭೋಜನಕ್ಕೆ ಭಕ್ತರಿಗೆ ಯಾವುದೇ ತೊಂದರೆಯಾಗದಂತೆ ಕ್ರಮ ಕೈಗೊಳ್ಳಬೇಕು ಎಂದು ಮಂಟೇಸ್ವಾಮಿ, ರಾಚಪ್ಪಾಜಿ, ಸಿದ್ದಪ್ಪಾಜಿ ಹಾಗೂ ಪರಂಪರೆ ರಕ್ಷಣಾ ಹೋರಾಟ ಸಮಿತಿಯಿಂದ ನಗರದ ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿ ಆಪ್ತ ಸಹಾಯಕ ಹೆಚ್.ಬಿ. ಭರತ್‌ಭೂಷನ್ ಅವರಿಗೆ ಮನವಿ ಸಲ್ಲಿಸಲಾಯಿತು.

ವಿಶ್ವಪ್ರಾಣಿ ದಯಾಸಂಘದ ಸ್ವಾಮೀಜಿ ಒಬ್ಬರು ಮಂಟೇಸ್ವಾಮಿ ಪರಂಪರೆಯ ಚಿಕ್ಕಲ್ಲೂರು ಜಾತ್ರೆಯಲ್ಲಿ ಬಲಿ ನಡೆಯುತ್ತದೆ ಎಂದು ಅಪಪ್ರಚಾರ ಮಾಡುತ್ತಿದ್ದಾರೆ. ಅವರು ಹೈಕೋರ್ಟ್ ಮೊರೆಹೋಗಿದ್ದು, ಈ ವಿಷಯ ನ್ಯಾಯಾಲಯಕ್ಕೆ ತಲಿಪಿದೆ. ಹೋರಾಟ ಸಮಿತಿಯು ಕೂಡ ಪಂಕ್ತಿಸೇವೆ ಆಚರಣೆ ವಾಸ್ತವಾಂಶವನ್ನು ನ್ಯಾಯಾಲಯದ ಗಮನಕ್ಕೆ ತಂದ ಮೇಲೆ ಮಧ್ಯಂತರ ಆದೇಶವನ್ನು 2017ರಲ್ಲಿ ನೀಡಿದೆ. ಅದರ ಪ್ರಕಾರ ಈ ಒಕ್ಕಲುಗಳು ಮಾಂಸಾಹಾರ ಅಡುಗೆ ತಯಾರಿಸಿ ಎಡೆ ಅರ್ಪಿಸುವ ಆಚರಣೆಗೆ ಧಕ್ಕೆ ತರಬಾರದೆಂದು ಹಾಗೂ ಅಲ್ಲಿ ಬಲಿಪ್ರಾಣಿ ನೆಡಯುತ್ತಿದ್ದರು ಅದನ್ನು ತಡೆಯುವಂತೆ ನೋಡಿಕೊಳ್ಳಬೇಕು ನ್ಯಾಯಾಲಯ ಆದೇಶದಲ್ಲಿ ತಿಳಿಸಿದೆ.

ಜನರು ಅವರವರ ಧಾರ್ಮಿಕ ಹಕ್ಕಿನ ಪ್ರಕಾರ ಪಂಕ್ತಿಭೋಜನ ಮಾಡಬಾರದು ಹಾಗೂ ಮಾಂಸಾಹಾರ ಮಾಡಬೇಡಿ ಎಂದು ಯಾವುದೇ ನ್ಯಾಯಾಲಯ ಹೇಳಿಲ್ಲ. ಆದ್ದರಿಂದ ಜಿಲ್ಲಾಡಳಿತ ಭಕ್ತರಿಗೆ ಪಂಕ್ತಿಭೋಜನಕ್ಕೆ ಅವಕಾಶ ನೀಡಬೇಕು ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಇದೇ ವೇಳೆ ಸಮಿತಿ ಅಧ್ಯಕ್ಷ ಉಗ್ರ ನರಸಿಂಹೇಗೌಡ, ಕಾರ್ಯದರ್ಶಿ ಎಲ್.ಶಂಭುಲಿಂಗಸ್ವಾಮಿ, ಸಂಶೋಧಕ ಶಂಕನಪುರ ಮಹದೇವ್, ಹೊಂಡರಬಾಳು ವಾಸು, ನಾಗೇಶ್, ಇರಸವಾಡಿ ಮಹೇಶ್ ಹಾಜರಿದ್ದರು.

ಆರೋಗ್ಯ ಕೇಂದ್ರಕ್ಕೆ ನ್ಯಾಯಾಧೀಶರ ದಿಢೀರ್ ಭೇಟಿ

ಚಾಮರಾಜನಗರ, ಜ.12–ತಾಲೂಕಿನ ಮರಿಯಾಲ ಗ್ರಾಮದ ಸಮುದಾಯ ಆರೋಗ್ಯ ಕೇಂದ್ರ ಹಾಗೂ ಪಣ್ಯದ ಹುಂಡಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶ ಎಂ.ಶ್ರೀಧರ್ ದಿಢೀರ್ ಭೇಟಿ ನೀಡಿ, ಪರಿಶೀಲಿಸಿದರು.

ಮೊದಲು ಮರಿಯಾಲ ಗ್ರಾಮದ ಸಮುದಾಯ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿದ ಅವರು, ಅಲ್ಲಿನ ಸ್ವಚ್ಛತೆ, ವೈದ್ಯರು ಹಾಗೂ ಸಿಬ್ಬಂದಿಯ ಕರ್ತವ್ಯದ ಬಗ್ಗೆ ಪರಿಶೀಲಿಸಿದರು. ಇದೇ ವೇಳೆ ಆರೋಗ್ಯ ಕೇಂದ್ರಕ್ಕೆ ಬರುವ ರೋಗಿಗಳಿಗೆ ಜನಸ್ನೇಹಿಯಾಗಿ ಉತ್ತಮ ವೈದ್ಯಕೀಯ ಸೇವೆ ನೀಡುವಂತೆ ವೈದ್ಯರು ಹಾಗೂ ಸಿಬ್ಬಂದಿಗೆ ಸೂಚಿಸಿದರು. ಬಳಿಕ ಪಣ್ಯದಹುಂಡಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ, ಅಲ್ಲಿನ ಔಷಧಾಲಯ, ಲ್ಯಾಬ್, ವಾರ್ಡ್‌ಗಳನ್ನು ಪರಿಶೀಲಿಸಿದರು. ರೋಗಿಗಳಿಗೆ ಉಚಿತ ಔಷಧ ನೀಡುವಂತೆ ಸೂಚಿಸಿದರು. ಆರೋಗ್ಯ ಕೇಂದ್ರದ ಪರಿಸರವನ್ನು ಉತ್ತಮವಾಗಿ ಕಾಪಾಡಿಕೊಳ್ಳಬೇಕು. ವಿಕಲಚೇತನರು ಆರೋಗ್ಯ ಕೇಂದ್ರಕ್ಕೆ ಬರಲು ರ್‍ಯಾಂಪ್ (ಇಳಿಜಾರು) ಸೌಲಭ್ಯ ಹಾಗೂ ಸೂಕ್ತ ಪ್ರವೇಶದ್ವಾರ ಮಾರ್ಪಡಿಸಲು ಸಂಬಂಧಪಟ್ಟವರಿಗೆ ಸೂಚನೆ ನೀಡಿದರು.



ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿದ ಹಿರಿಯ ಸಿವಿಲ್ ನ್ಯಾಯಾಧೀಶ ಎಂ.ಶ್ರೀಧರ್, ಸಾರ್ವಜನಿಕರಿಂದ ವೈದ್ಯಕೀಯ ಸೇವೆ ಕುರಿತು ಮಾಹಿತಿ ಪಡೆದರು.

ಗಾಂಜಾ ಬೆಳೆದಿದ್ದ ವ್ಯಕ್ತಿಯ ಬಂಧನ

ಕೊಳ್ಳೇಗಾಲ, ಜ.12– ಕೊಳ್ಳೇಗಾಲ ತಾಲೂಕಿನ ಜಾಗೇರಿ ಸಮೀಪದ ಪಾಸ್ಕಲ್ ನಗರದ ಮನೆಯ ಹಿತ್ತಲಿನಲ್ಲಿ ಗಾಂಜಾ ಗಿಡಗಳನ್ನು ಬೆಳೆದಿದ್ದ ವ್ಯಕ್ತಿಯನ್ನು ಗ್ರಾಮಾಂತರ ಠಾಣೆ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ. ಪಾಸ್ಕಲ್ ನಗರದ ಸಂದೇಹು ಅಲಿಯಾಸ್ ಸಂತ್ಯಾಗು ಬಂಧಿತ ಆರೋಪಿ. ಈತ ತನ್ನ ಮನೆಯ ಹಿತ್ತಲಿನಲ್ಲಿ 2 ಗಾಂಜಾ ಗಿಡಗಳನ್ನು ಬೆಳೆದಿದ್ದ. ಮಾಹಿತಿ ಮೇರೆಗೆ ಪಿಎಸ್‌ಐ ಚೆಲುವರಾಜು, ಮುಖ್ಯಪೇದೆಗಳಾದ ವಿರೇಂದ್ರ, ಅನಿಲ ದಾಳಿ ನಡೆಸಿ, ಗಾಂಜಾ ಗಿಡ ವಶಪಡಿಸಿಕೊಂಡು ಆರೋಪಿಯನ್ನು ಬಂಧಿಸಿದ್ದಾರೆ.

ಈ ಸಂಬಂಧ ಕೊಳ್ಳೇಗಾಲ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮುಡಾ ಕಾರ್ನರ್ ಸೈಟ್
ಮುಡಾ ಖಾತೆ, ಈಸ್ಟ್ ಫೇಸಿಂಗ್, 1124 ಚದುರಡಿ, ಏರ್‌ಪೋರ್ಟ್ ಹಿಂಭಾಗದ ರಸ್ತೆ, ಚದುರಡಿಗೆ 3000 ರೂ.ಗಳು
ಡೈರೆಕ್ಟ್ ಓನರ್
9342123373

ಲಲಿತಾದ್ರಿನಗರ ಪಕ್ಕದಲ್ಲಿ 46 ಕುಂಟೆ ಜಾಗ ಮಾರಾಟಕ್ಕಿದೆ
9448601655

ಮನೆ ಮಾರಾಟಕ್ಕಿದೆ
60x40 3BHK ಡ್ಯೂಪ್ಲೆಕ್ಸ್ ಮನೆ ಅಟಾಚ್ ಬಾತ್‌ರೂಮ್ಸ್ & ವಾರ್ಡ್‌ರೋಬ್ ಇಟಾಲಿಯನ್ ಕಿಚನ್ ವಿತ್ ಕಾರ್ ಗ್ಯಾರೇಜ್ 3 ಕಾರ್ ಪಾರ್ಕಿಂಗ್ ರಾಮಕೃಷ್ಣನಗರ ಆಂದೋಲನ ಸರ್ಕಲ್ ಪಕ್ಕದಲ್ಲಿ
9341624462

SITE FOR SALE
30x50 W/F
Suvarna Nagara
Mob: 9740088990

NEW HOUSE FOR SALE
40X60 East Facing
4 Bed Rooms (All Attached)
As per Vasthu, 60ft Road
At 1st Stage, 1st Main,
Vijayanagar, Mysore
Price - 3.6 cr
(Sligthly Negotiable)
9880718980

ಸೈಟುಗಳು ಮಾರಾಟಕ್ಕಿದೆ
40x60 S/F, 30x40 N/F ಸುವರ್ಣನಗರ ಭೋಗಾದಿ ರಸ್ತೆ, ಬೆಲೆ : 48 ಲಕ್ಷ ಮತ್ತು 33 ಲಕ್ಷ, 40 ಅಡಿ ರಸ್ತೆ, ರೈನ್‌ಬೋ ಸ್ಕೂಲ್ ಹತ್ತಿರ
ಬನಶಂಕರಿ ರಿಯಲ್ ಎಸ್ಟೇಟ್
9945042875

ಬೇಕಾಗಿದ್ದಾರೆ
ಕರ್ನಾಟಕದಾದ್ಯಂತ ಮತ್ತು ಮೈಸೂರಿನಾದ್ಯಂತ ಪ್ರಸಿದ್ಧ MNC ಕಂಪನಿಗಳಿಗೆ ಕಂಪನಿ ಕೆಲಸಕ್ಕೆ ಆಫೀಸ್ ಕೆಲಸಕ್ಕೆ ಮತ್ತು ವರ್ಕ್ ಫ್ರಂ ಹೋಂ ಕೆಲಸಕ್ಕೆ ತಕ್ಷಣ ಯುವಕ, ಯುವತಿಯರು ಬೇಕಾಗಿದ್ದಾರೆ. ಯಾವುದೇ ಎಜ್ಯುಕೇಷನ್ ಯಾವುದೇ Age ಲಿಮಿಟ್ ಇಲ್ಲ. Salary (18000 to 38000) ಇರುತ್ತದೆ. ಹೆಚ್ಚಿನ ಮಾಹಿತಿಗೆ ಇಂದೇ ಸಂಪರ್ಕಿಸಿ. H.R. Madam
9886365585
8296278130

ಹೋಟೆಲ್ ಬಾಡಿಗೆಗೆ ಮಾರಾಟಕ್ಕಿದೆ
ವಿಜಯನಗರ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ಹತ್ತಿರ
9606488123

ಬೇಕಾಗಿದ್ದಾರೆ
ಗೂಡ್ಸ್ ಆಟೋ ಡ್ರೈವರ್ ಲೈನ್ ಸೇಲ್‌ನಲ್ಲಿ ಅನುಭವವಿರುವ ಡ್ರೈವರ್ ಬೇಕಾಗಿದ್ದಾರೆ. ಸ್ವಂತ ಗೂಡ್ಸ್ ಆಟೋ ಇದ್ದರೆ ಉತ್ತಮ
9972258425

ಮನೆ ನವೀಕರಣ
ಸಿಮೆಂಟ್ ಕೆಲಸ, ಪೈಂಟಿಂಗ್, ವಾಟರ್ ಪ್ರೂಫಿಂಗ್, ಟೈಲ್ಸ್ ಮತ್ತು ಎಲ್ಲಾ ತರಹದ ಕನ್‌ಸ್ಟ್ರಕ್ಷನ್ ಕೆಲಸಗಳು ಕಡಿಮೆ ದರದಲ್ಲಿ ಹಾಗೂ ಸರಿಯಾದ ಸಮಯಕ್ಕೆ ಮುಗಿಸಿ ಕೊಡುತ್ತೇವೆ. ಸಂಪರ್ಕಿಸಿ:
ಆರ್ಯನ್ ಬಿಲ್ಡರ್ಸ್
Mob: 7411659292

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8880558064

ಮಂಟಪ ಮನೆ

ನಿತ್ಯ ಪೂಜೆ ಮಾಡಲು ನಿಮಗೊಂದು ದೇವರ ಮಂಟಪ ಬೇಕೆ, ಬೀಟೆ ಮತ್ತು ಹಲಸು ಮರದಿಂದ ತಯಾರಿಸುತ್ತೇವೆ. ಸುಲಭ ಕಂತುಗಳಲ್ಲಿ ದೊರೆಯುತ್ತದೆ. ಸಂಪರ್ಕಿಸಿ: ಶ್ರೀನಗರ, ಮೈಸೂರು
9448207634
9036742526

100% TEAK WOOD FACTORY FINISH DOORS @ DEPOT RATES

10 YEARS WARRANTY
www.ssbuildmart.com
9901291267
9845426862

ವೃದ್ಧಾಶ್ರಮ
ಹಿರಿಯ ಜೀವಗಳಿಗೆ, ಹಾಸಿಗೆ ಹಿಡಿದ ವೃದ್ಧರನ್ನು, ಪಾರ್ಶ್ವವಾಯು ಪೀಡಿತರು, ಹಾಗೂ ಕೈಲಾಗದ ವಯೋ ವೃದ್ಧರನ್ನು ಮನೆಯಂತೆಯೇ ನೋಡಿ ಕೊಳ್ಳುತ್ತಿರುವ ಸಂಸ್ಥೆ ನಮ್ಮ ಮೈಸೂರಿನಲ್ಲಿ ಊಟ, ವಸತಿ, ವೈದ್ಯಕೀಯ ಸೌಲಭ್ಯದೊಂದಿಗೆ ಇಚ್ಛೆವುಳ್ಳವರು ಸಂಪರ್ಕಿಸಿ
9110455297 | 9591557126

ಬೇಕಾಗಿದ್ದಾರೆ
ಮನೆ ಕೆಲಸ ಹಾಗೂ ಅಡುಗೆ ಮಾಡುವವರು ಬೇಕಾಗಿದ್ದಾರೆ
ಸಮಯ: ಬೆಳಿಗ್ಗೆ 09–00 ರಿಂದ ಸಂಜೆ 05.30 ವರೆಗೆ
ಸಂಬಳ: 10,000–12,000
ಸ್ಥಳ: ಆನಂದನಗರ, ಬೋಗಾದಿ ರಿಂಗ್ ರಸ್ತೆ,
6366366388

ಮನೆ ಭೋಗ್ಯಕ್ಕಿದೆ
(7,50,000)
16x42 ವಿಸ್ತೀರ್ಣವುಳ್ಳ 1ನೇ ಅಂತಸ್ತಿನ ಮನೆ
2BHK with Solar
5ನೇ ಕ್ರಾಸ್ ವಿದ್ಯಾರಣ್ಯಪುರಂ
9845570573 ಸ್ವಾಮಿ
9113612442

ವಿಠಲ್ ರೆಕಾರ್ಡ್ಸ್ ಪ್ರೈವೇಟ್ ಲಿಮಿಟೆಡ್
ಖಾಲಿ ಹುದ್ದೆ: 150+
DATA ENTRY OPERATOR
ಸಂಬಳ 10,000 + 5000 Incentive
ಸಂದರ್ಶನದ ಸಮಯ: 9.30 ರಿಂದ 5.30.
ವಿಳಾಸ: #42, JCK ಇಂಡಸ್ಟ್ರಿಯಲ್ ಪಾರ್ಕ್, ಮೇಟಗಳ್ಳಿ ಪೋಸ್ಟ್, ಪ್ರೀತಿ ಗ್ರಾನೈಟ್ ಹತ್ತಿರ, ಕೆ.ಆರ್.ಎಸ್. ರಸ್ತೆ, ಮೈಸೂರು–570 016. ಕರೆ ಮಾಡಿ:
Mob: 8867064586

DTCP SITES FOR SALE
DTCP Sites
Rs. 699 per sq.ft.,
Near Jayapura,
H.D. Kote Road, Mysore.
9590491194, 9606783264

SHRIRAM LAND SITES
"Oxygen-2"
Rs.14.99L @ Lakhs Onwards
HD Kote Road,
(Jayapura)
(90% Home Loan Available)
9686188919
7676644999

ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಸೇಲ್ಸ್ ಮ್ಯಾನ್ ಕೆಲಸ ಮಾಡಲು ಅನುಭವವುಳ್ಳ ಹುಡುಗ ಹುಡುಗಿಯರು ಬೇಕಾಗಿದ್ದಾರೆ. ಆಕರ್ಷಕ ಸಂಬಳ, ESI+PF ಮತ್ತು ಇನ್ಸೆಂಟೀವ್ ಸೌಲಭ್ಯದೊಂದಿಗೆ
ಗಾಂಧಿ ಸರ್ಕಲ್, ಮೈಸೂರು
9980620678
Call after 10:30 am

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 9591815191

ಸೈಟು ಮಾರಾಟಕ್ಕಿದೆ
40x60
ಕ್ರೈಸ್ಟ್ ಪಬ್ಲಿಕ್ ಸ್ಕೂಲ್ ಹತ್ತಿರ ದಟ್ಟಗಳ್ಳಿ
9901676619

3 BHK HOUSE FOR RENT
With Carshed, House no.341, Near Opposite to Kamakshi Hospital
Saraswathipuram
Mysore
9902302176

ಸುವರ್ಣ ಯಾತ್ರ
1) 21/02/24, 2 ಜ್ಯೋತಿರ್ಲಿಂಗದೊಂದಿಗೆ ಕಾಶಿ ಪ್ರವಾಸ 7 ದಿನಗಳು(ಕಾಶಿ, ಗಯಾ ಬುದ್ಧಗಂಯ, ಪ್ರಯಾಗ್ ರಾಜ್, ಬಾಬಾ ಬೈದ್ಯನಾಥ, ಅಯೋಧ್ಯ, ನೈಮಿಶಾರಣ)
2) 12–03–24 ನೇಪಾಳ ಪ್ರವಾಸ 9 ದಿನಗಳು (ಮುಕ್ತಿನಾಥ, ಪಶುಪತಿನಾಥ, ಕಠ್ಮಂಡು, ಮನೋಕಾಮನ, ಲುಂಬಿನಿ, ಪೊಖ್ರ, ಜನಕಪುರ)
9019462508
9008381022

HOUSE FOR SALE
Vijayanagar 4th stg
3 BHK Duplex New House, MUDA, E/F Door,
Near Marimallappa School,
20x30 - Price - 82 Lakhs
30x40 - Price - 1.55 Cr
8660105902

HOUSE FOR LEASE
East Facing
Spacious Single BED Room Ist Floor House at Vijayanagar 4th Stage 1st Phase,
Next to Ring Road
8660848321

Mysuru Retina Care
STAFF REQUIRED
1) O.T. Technician / Optometrist
2) Receptionist
Mob: 7338369364
Nivedithanagar, Mysore

WANTED For an injection Moulding, Unit in Mysuru requires :
1) Line Quality Qualification :ITI fitter, Diploma Mech & BE Mech Fresher or Exp
2) HR Assistant with 2 to 3 Yrs Exp
3) Data entry operators Fresher or Exp
4) Front office Executive 1 to 2 years Exp
5) Production Head 5 to 10 years Exp
6) Production supervisor 2 to 5 years Exp
Apply with a Bio-data in detail, present and expected salary. those who are willing to settle in mysuru can apply.
aerospacemys@gmail.com

ಲಾಲ್ ಬಹದ್ದೂರ್ ಶಾಸ್ತ್ರಿ ನಗರ ಮತ್ತು ಗೋಪಾಲ್ ಗೌಡನಗರದಲ್ಲಿ ಸೈಟ್ ಬೇಕಾಗಿದೆ
20x30, 30x40, 40x60
9448601655

ಮನೆ ಪತ್ರ ಕಳೆದುಹೋಗಿದೆ
ದಿನಾಂಕ: 27–12–2023ರಂದು ಬೆಳಿಗ್ಗೆ 11 ಗಂಟೆಯಿಂದ 12 ಗಂಟೆ ಸಮಯದಲ್ಲಿ ಕೆ.ಆರ್.ಹಾಸ್ಪಿಟಲ್ ಮುಂಭಾಗದ ಬಸ್ ನಿಲ್ದಾಣದಲ್ಲಿ, ಮನೆ ನಂ. 320, ಗೋಕುಲಂ 2ನೇ ಹಂತ, 6ನೇ ಮೇನ್, 14ನೇ ಅಡ್ಡರಸ್ತೆ, ಮೈಸೂರುಗೆ ಸಂಬಂದಪಟ್ಟ ಸಿ.ಐ.ಟಿ.ಬಿ ವತಿಯಿಂದ ಕೊಡಲ್ಪಟ್ಟ ಮನೆ ಮಂಜೂರು ಪತ್ರ, ಸ್ವಾದೀನ ಪತ್ರ ಮತ್ತು ಬ್ಯಾಂಕಿನ ಚಲನ್‌ಗಳು ಕಳೆದುಹೋಗಿರುತ್ತವೆ. ಯಾರಿಗಾದರೂ ಸಿಕ್ಕಿದ್ದಲ್ಲಿ ಈ ಕೆಳಕಂಡ ವ್ಯಕ್ತಿಗೆ ದಯಮಾಡಿ ತಲುಪಿಸುವುದು.
(ಎಂ.ಎಸ್.ಆರೋಕ್ಯದಾಸ್)
ಗೋಕುಲಂ 2ನೇ ಹಂತ, ಮೈಸೂರು,
9036022489

MUDA App Sites
JP Nagar Ring Road
30 x 40 Sites,
Price - 62 Lakhs
Bank Loan upto 75%,
Ready for Registration
8660105902

Aquaguard & Kent Sales and Service
Service Charge: 300/-
9901200444

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU: 9611028523 MANGALURU: 9343142258

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

MUDA App Site
Kamadhenu Layout,
Srirampura
30 x 40
East South Corner Site
Price - 68 lakhs
Within Ring Road
8660105902

AFFIDAVIT
I Syed Sadam R/a No. 217, 2nd Cross, I Stage, Kesare, Mysore my name is Mentioned in adhar Card (No.7916425361489) as Syed Sadam but in my DL (No. KA 5520150006247) Wrongly mentioned as Sadam Husen. My Correct name is Syed Sadam and here by affirm & declare in front of Notary C.R.Seetharam, Mysore on 10-1-2024
Sd/- Syed Sadam

ಬೇಕಾಗಿದ್ದಾರೆ
ಶ್ರೀ ಛಾಯಾದೇವಿ ವಿಶೇಷ ದತ್ತು ಕೇಂದ್ರ ಮೈಸೂರು, ಚಿಕ್ಕ ಮಕ್ಕಳು ಹಾಗೂ ದೊಡ್ಡ ಮಕ್ಕಳುಗಳನ್ನು ನೋಡಿಕೊಳ್ಳಲು ಮಹಿಳೆಯರು ಸಂಸ್ಥೆಯಲ್ಲೇ ಉಳಿದುಕೊಂಡು ಕೆಲಸಮಾಡಲು ಬೇಕಾಗಿದ್ದಾರೆ.
8618770716

Sudarshan Saur

ಸೇಲ್ಸ್ & ಸರ್ವೀಸ್
10 ವರ್ಷಗಳ ಗ್ಯಾರಂಟಿ
ATTRACTIVE OFFER
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

GAS GEYSER

Only Rs. 2,999/-
With 2 years Service Free.
Offer only 2 days.
ಹಳೆಯ ಗ್ಯಾಸ್‌ಗೀಸರ್‌ನ್ನು ರಿಪೇರಿ ಮಾಡಲಾಗುವುದು
HARSHA ENTERPRISES
PH: 99454-99180

MUDA SITE FOR SALE
52/54 Corner Site for Sale in Kuvempunagar Mysore.
20/30, 20/30 Site For Sale in Srirampura, Near Bramaramba choultry Mysore.
PH: 99004 64111

2.5 BHK HOME INTERIORS @ ₹ 2.5 Lacs*
Home Space Mart
TALK TO OUR DESIGN TEAM
8197310113

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಬೇಕಾಗಿದ್ದಾರೆ
ಸೆಕ್ಯೂರಿಟಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ ಕೆಲಸದ ಸಮಯ ಸಂಜೆ 6 ರಿಂದ ಬೆಳಗ್ಗೆ 6 ತನಕ
ಸ್ಥಳ: ನಾಯ್ಡುನಗರ,
ಆಸಕ್ತಿಯುಳ್ಳವರು ಈ ಕೆಳಗಿನ ಸಂಖ್ಯೆಗೆ ಕರೆ ಮಾಡತಕ್ಕದ್ದು.
9900026127

ಸೈಟ್‌ಗಳು ಮಾರಾಟಕ್ಕಿದೆ ಜೆಪಿ ನಗರ ರಿಂಗ್ ರಸ್ತೆ
30x40 - 33 Lakhs
20x30 17 Lakshs
ಗೊರೂರು ಬಸ್ ನಿಲ್ದಾಣ ಹತ್ತಿರ, ರಮಾಬಾಯಿನಗರ, ಮೈಸೂರು DTCP ಅನುಮೋದಿತ (ಕಾರ್ಪೊರೇಶನ್ ಮಿತಿ)
1.5 Kms from JP nagar ring road
8660105902

ಗೋವಾ ಪ್ರವಾಸ
ಹೊರಡುವ ದಿನಾಂಕ: 26–1–2024 (03 ದಿನಗಳು). ಭಾಗ ಬೀಚ್, ದೂಧ್ ಸಾಗರ್ ಜಲಪಾತ, ಕಲಂಗುಟ್ ಬೀಚ್, ಬಾಸಲಿಕ ಚರ್ಚ್, ಅಗೊಡ ಕೋಟೆ, ಮಂಗೇಶಿ ದೇವಸ್ಥಾನ ಮತ್ತು ನಾಗೇಶಿ ದೇವಸ್ಥಾನ, ಡಾಲ್ಫಿನ್ ಬೋಟ್, ಡಿಜೆ ಬೋಟ್. * ಫ್ಯಾಮಿಲಿಗೆ ಪ್ರತ್ಯೇಕ ಎಸಿ ರೂಮ್ * ತಿಂಡಿ ಮತ್ತು ಊಟ * ಕಾಫಿ / ಟೀ, ಸ್ನ್ಯಾಕ್ಸ್ ಎಲ್ಲಾ ಸೇರಿ ಒಬ್ಬರಿಗೆ 7500 ರೂಗಳು ಮಾತ್ರ
Mob: 70222 71023

ಮನೆ ಬಾಡಿಗೆಗೆ ಇದೆ
ಸುಭಾಶ್‌ನಗರ ಮೈಸೂರಿನಲ್ಲಿ 3 BHK, ಕಾರ್ ಪಾರ್ಕಿಂಗ್ ಸೌಲಭ್ಯವಿರುತ್ತದೆ.
Mob: 7348831599

Ads Posting Job
No Registration Fees
ನಿಮ್ಮ ಮನೆಯಿಂದ ನಿಮ್ಮ ಮೊಬೈಲ್ ಫೋನ್ ಮೂಲಕ ತಿಂಗಳಿಗೆ 20,000/– ರಿಂದ 30,000/– ಗಳಿಸಿ.
9731891409

ಮನೆ ಬಾಡಿಗೆಗೆ
97, 30x50, West Facing North Door, 2bhk ಡೈನಿಂಗ್ ಹಾಲ್, ಪೂಜಾ ರೂಂ ಸೌಲಭ್ಯವುಳ್ಳ ಮನೆ, ರಾಮಮಂದಿರ ಮುಖ್ಯರಸ್ತೆ, ಜಯನಗರ, ಮೈಸೂರು
(ಸಸ್ಯಾಹಾರಿಗಳಿಗೆ ಮಾತ್ರ)
15000/– ಬಾಡಿಗೆ
9880348350
7975757858

ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ MNC ಕಂಪನಿಗಳಲ್ಲಿ ಹೆಬ್ಬಾಳ್, ಹೂಟಗಳ್ಳಿ, ಮೇಟಗಳ್ಳಿ, ಕುವೆಂಪುನಗರ, ಸರಸ್ವತಿಪುರಂ, ಎನ್.ಆರ್.ಮೊಹಲ್ಲಾ, ಜೆ.ಪಿ.ನಗರ, ನಂಜನಗೂಡು, ಕಡಕೊಳ, ಒಂಟಿಕೊಪ್ಪಲ್, ಕ್ವಾಲಿಟಿ ಚೆಕ್ಕಿಂಗ್, ಪ್ಯಾಕಿಂಗ್, ಹೆಲ್ಪರ್, ಕ್ಯಾಷಿಯರ್, ಬಿಲ್ಲಿಂಗ್, ಡೇಟಾ ಎಂಟ್ರಿ, ಟೆಲಿಫೋನ್, ಅಟೆಂಡರ್, ಅಡ್ಮಿನ್ ಹೆಚ್.ಆರ್.ಕೆಲಸಕ್ಕೆ ಯುವಕ, ಯುವತಿಯರು ಬೇಕಾಗಿದ್ದಾರೆ. ಸಂಬಳ 15000 ದಿಂದ 35000ರವರೆಗೆ ESI, PF, ಸಂಪರ್ಕಿಸಿ:
9916641959, 9035143190

ಬೇಕಾಗಿದ್ದಾರೆ
ನೂತನವಾಗಿ ಪ್ರಾರಂಭವಾಗುವ ಹೋಟೆಲ್‌ಗೆ ಕೆಲಸಗಾರರು ಬೇಕಾಗಿದ್ದಾರೆ. ಅಡುಗೆ ಭಟ್ಟರು, ದೋಸೆಭಟ್ಟರು, ನಾರ್ತ್ ಇಂಡಿಯನ್ ಕುಕ್, ಚಾಟ್ಸ್ ಐಟಂ, ಟೀಮೇಕರ್, ಕ್ಯಾಷಿಯರ್, ವೇಟರ್ಸ್, ಕ್ಲೀನಿಂಗ್, ಪಾತ್ರೆ ತೊಳೆಯುವವರು, ಕೌಂಟರ್, ವಾಶ್ರೂಮ್ ಕ್ಲೀನರ್, ಸೆಕ್ಯೂರಿಟಿ ಗಾರ್ಡ್
9535568637

ಹೊಸ ಮನೆ ಮಾರಾಟಕ್ಕಿದೆ
ಮೈಸೂರು ಶ್ರೀರಾಂಪುರ ಕಂದಾಯನಗರ ಬಡಾವಣೆ 30x40
3 BHk + Gym Room
9945615736

ಬೇಕಾಗಿದ್ದಾರೆ
ಬೆಳಗಿನ ಸಮಯದಲ್ಲಿ ಪ್ರತಿ ಏರಿಯಾದಲ್ಲಿ ಪೇಪರ್ ಹಾಕುವ ಹುಡುಗರು ಬೇಕಾಗಿದ್ದಾರೆ.
8867726474

ತಕ್ಷಣ ಬೇಕಾಗಿದ್ದಾರೆ
* ಸೆಕ್ಯೂರಿಟಿ ಗಾರ್ಡ್ಸ್ 12 Hours ವಯಸ್ಸಿನ ಅಂತರ 55
* ಹೌಸ್ ಕೀಪಿಂಗ್ Boys and Girls
* ಡ್ರೈವರ್ 4 ವೀಲ್ ಕಾರ್ with DL 2 years Experience
* and Helper Factory any SSLC, PUC
9035367083
8123769346

NEW HOUSE FOR SALE
North Face, ground & First flour ISWARYA Layout, J.P.Nagar, Near Siddalingeswara Layout IInd Stage, Price: 1.46 Cr
(Brokers Excuse)
30x40 2BHK ಮನೆ ಭೋಗ್ಯಕ್ಕೆ ಇದೆ G/F J P Nagar
9448271349

ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ
ಕೆಲಸ: ಹಿನಕಲ್ ಬನ್ನಿಮಂಟಪ ಸುತ್ತಮುತ್ತ
ಸಮಯ: 12 ಗಂಟೆ,
ಸಂಬಳ : 10000/–
9742531666

ಜಮೀನು ಮಾರಾಟಕ್ಕಿದೆ
ಮೈಸೂರಿನ ಜೆ.ಪಿ.ನಗರ ಹತ್ತಿರದ ಗುರೂರಿನಲ್ಲಿ 36 ಗುಂಟೆ ಪೂರ್ವದಿಕ್ಕಿನ 40 ಅಡಿ ಮುಖ್ಯ ರಸ್ತೆಯನ್ನು ಹೊಂದಿರುವ ಸುಸಜ್ಜಿತವಾದ ಜಮೀನು ಮಾರಾಟಕ್ಕಿದೆ
Opp. * ಓಂಕಾರ್ ಲೇಔಟ್
* ಮಹದೇಶ್ವರ ಲೇಔಟ್
ಆಸಕ್ತರು ಸಂಪರ್ಕಿಸಿ:
7975957605

ಸೈಟುಗಳು ಮಾರಾಟಕ್ಕಿವೆ
ಜೆ.ಪಿ.ನಗರದಲ್ಲಿ ಮುಡಾ ಅನುಮೋದನೆಯ
30x40
W.S ಫೇಸಿಂಗ್ ಸೈಟುಗಳು
9743660797

ಅನುಬಂಧ ಮ್ಯಾರೇಜಸ್
ವಧು–ವರರನ್ನು ಹುಡುಕಲು ಸಹಾಯ ಬೇಕೇ? ನಮಗೆ ಕರೆ ಮಾಡಿ ಫೋಟೋ & ಬಯೋಡೇಟಾ ವಾಟ್ಸ್‌ಅಪ್ ಮಾಡಿರಿ
6361740552

SITE FOR SALE
30X40, North West corner Site
Semi Commercial
Site Bramins layout, 'A' Block
8217042841

ತಕ್ಷಣ ಬೇಕಾಗಿದ್ದಾರೆ
Experienced PHARMA AIDE
(ಔಷದಿಗಳ ಬಗ್ಗೆ ಅನುಭವವುಳ್ಳ ಸಹಾಯಕರು)
For Medical Shop
9880587586

HOUSE FOR SALE
30X40 Duplex at Srirampura
25x40 ground & 40x60 G/F floor at Ramakrishnanagar
40x60 G/F Floor at Kuvempunagar, 40x60 at saraswathipuram
8792538993
9663136318

CONVERTED LAND FOR SALE
Historical Town at Srirangapatna Residential Layout converted Land at Srirangapatna purasabhe Limit 17, 424 Sq.ft Land. 10 minuts from Manipal Hospital Junction, 200 Meters from new mysuru-Bengaluru express High-way. Near by Good Residential Layout's & Good Location rate Rs. 1500/- per sqft. Interested Person's contact
9945708365
8904296624

HOUSE FOR LEASE
40x60 3BHK Duplex at vijayanagar 1st Stage,
Rs.35 Lacs
2 BHK at Saraswathipuram
2BHK at Nazarbad
8792538993
9663136318

ಬೇಕಾಗಿದ್ದಾರೆ
ಹೂಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಕಂಪನಿಗೆ (ಆಟೋಮೆಟಿಕ್ ಆಕ್ಸಲ್ ಹತ್ತಿರ) 18 ರಿಂದ 50 ವರ್ಷದ ಒಳಗಿನ ಪುರುಷರು ಕೆಲಸಕ್ಕೆ ಬೇಕಾಗಿದ್ದಾರೆ. ಸಂಬಳ: 15,000 ಕೆಲಸದ ಸಮಯ: ಬೆಳಿಗ್ಗೆ 8 ರಿಂದ ಸಂಜೆ 6 ಗಂಟೆಯವರೆಗೆ ಸಂಪರ್ಕಿಸಿ:
ಚಾಮುಂಡೇಶ್ವರಿ ಎಂಟರ್ ಪ್ರೈಸಸ್
8722844236

ಮನೆ ಬಾಡಿಗೆಗೆ ಇದೆ
ವಿಜಯನಗರ 4ನೇ ಹಂತ, 2ನೇ ಫೇಸ್‌ನಲ್ಲಿ ಮನೆ ನಂ: 376, 2ರೂಂ ಹೊಂದಿರುವ ಎರಡನೇ ಮಹಡಿ ಮನೆ ಬಾಡಿಗೆಗೆ ಇದೆ.
9206380489
8762577289

ಬೇಕಾಗಿದ್ದಾರೆ
ಕಂಪನಿ ಕೆಲಸಕ್ಕೆ ಬೇಕಾಗಿದ್ದಾರೆ.
(Only Male)
ಮತ್ತು Receptionist ಕೆಲಸಕ್ಕೆ ಬೇಕಾಗಿದ್ದಾರೆ.
(ONLY FEMALE)
9845028614

WANTED
1) Blow Mould-Machine Operator
2) Micro Biologist-B.Sc/M.Sc
Kadakola-Mysore
7353480662

WANTED
FOR A SPORTS SHEPX
Sales Boys & Girls
Full Time & Part Time
10 am to 7 pm,
5pm to 9.30 pm
7760109044
8105368325

ಮನೆ ಮಾರಾಟಕ್ಕಿದೆ
ಎರಡು ಅಂತಸ್ತಿನ ಕಟ್ಟಡ # 499, 20X30, 3ನೇ ಕ್ರಾಸ್, 2ನೇ ಹಂತ, ಹೆಬ್ಬಾಳು, ಮೈಸೂರು
8951262136

ಉಚಿತವಾಗಿ ಪಡೆಯಿರಿ
26 Kg BT ರೈಸ್‌ನ್ನು ಖರೀದಿಸಿದರೆ 2kg ಗೋಧಿ ಹಿಟ್ಟು, 2kg ಸಕ್ಕರೆ, 2Ltr ಸನ್‌ಫ್ಲವರ್ ಎಣ್ಣೆ, 1kg ತೊಗರಿ ಬೇಳೆ, ಯನ್ನು ಉಚಿತವಾಗಿ ಪಡೆಯಿರಿ. ಬೆಲೆ ರೂ. 2000/– ಮಾತ್ರ (ಷರತ್ತು ಅನ್ವಯ)
ಶ್ರೀ ಅನ್ನಪೂರ್ಣೇಶ್ವರಿ ರೈಸ್ ಕಾರ್ನರ್
1498, 1ನೇ ಕ್ರಾಸ್, ಶಿವರಾಂಪೇಟೆ, ಮೋರ್ ಮೆಗಾಸ್ಟೋರ್ ಎದುರಿನ ರಸ್ತೆ, ಮೈಸೂರು–570001
9741859037
9902158019

HOUSE FOR LEASE
Newly Built 2BHK Independent House, Fully Furnished with Solar & UPS @ Lalithadri Nagar, Near Ring Road, Behind Indian Oil Petrol Bunk
9964414484

100% ಕೆಲಸ
ಮೈಸೂರಿನ ಕೈಗಾರಿಕ ಪ್ರದೇಶಗಳಾದ ಹೂಟಗಳ್ಳಿ, ಮೇಟಗಳ್ಳಿ, ನಂಜನಗೂಡು, ಹೆಬ್ಬಾಳ ಮುಂತಾದ ಏರಿಯಾಗಳಲ್ಲಿರುವ ಕಂಪನಿಗಳಿಗೆ Production, Maintenace, Line incharge, Store Dept., Machine Operators, Helpers, Packers ಇತ್ಯಾದಿ ಹುದ್ದೆಗಳಿಗೆ. 7th, 10th, PUC, ITI (Any Trade), Degree (Pass/Fail ಆದವರು) ಬೇಕಾಗಿದ್ದಾರೆ. ಸಂಬಳ: 16500/- 42000 (ESI+PF+OT) ಯೊಂದಿಗೆ T&C Apply
9164052361, 6366141586

ಉದ್ಯೋಗವಕಾಶ
ಮೈಸೂರಿನ ಹೆಸರಾಂತ ವೈದ್ಯಕೀಯ ಸೇವಾ ಸಂಸ್ಥೆಯಲ್ಲಿ ಹೋಂ ನರ್ಸಿಂಗ್ ಕೆಲಸಕ್ಕೆ ಯುವತಿಯರು ಮತ್ತು ಮಹಿಳೆಯರು ಬೇಕಾಗಿದ್ದಾರೆ. ವಿದ್ಯಾರ್ಹತೆ 7th, SSLC, PUC, Degree, ANM and GNM (Pass or Fail) ವೇತನ : 15000-20,000 (ಉಚಿತ ತರಬೇತಿ, ಊಟ, ವಸತಿಯೊಂದಿಗೆ)
9606714441, 7349278501
0821-4242351

ಮಾರಾಟಕ್ಕಿದೆ
ಕಾಫಿ ಶಾಪ್ (COFFE SHOP) ಮಾರಾಟಕ್ಕಿದೆ
ಸ್ಥಳ: ರಾಮಸ್ವಮಿ ಸರ್ಕಲ್, ಮೈಸೂರು
8296695765
7996193952

ಬೇಕಾಗಿದ್ದಾರೆ
ಕಂಪ್ಯೂಟರ್ ಟೈಪಿಂಗ್ ಮಾಡಲು ಬರುವಂತಹ ಅಭ್ಯರ್ಥಿಗಳು ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ.
ಶೇಖರ್: **9945911118**
ಅನಿಲ್: **7026996123**
ARTHOR SERVICES PVT.LTD
NO. L-89, 2nd Floor, M Block, Opp. Karuna Hospital, Kuvempunagar, Mysore-570023

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ
ರೂ. 630 ಮಾತ್ರ

ಮೈಸೂರು ಮಿತ್ರ

ಡಾ.ರಾಜೇಂದ್ರ ಸ್ವಾಮೀಜಿ ಪ್ರತಿಮೆ ಸ್ಥಾಪನೆಗೆ ಸರ್ಕಾರವೇ ಒಪ್ಪಿಗೆ ನೀಡಿದೆ

ಜಿಲ್ಲಾಧಿಕಾರಿ ಡಾ.ರಾಜೇಂದ್ರ ಸ್ಪಷ್ಟನೆ



ಮೈಸೂರು, ಜ12(ಬಿಎಲ್‌ಯು)– ಮೈಸೂರಿನ ಗನ್‌ಹೌಸ್ ಬಳಿಯ ವೃತ್ತದಲ್ಲಿ ಸುತ್ತೂರು ಮಠದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ಪ್ರತಿಮೆ ಸ್ಥಾಪನೆಗೆ ಸರ್ಕಾರವೇ ಕಾನೂನಾತ್ಮಕ ಒಪ್ಪಿಗೆ ನೀಡಿದೆ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸ್ಪಷ್ಟಪಡಿಸಿದರು. ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ರಸ್ತೆ ಸುರಕ್ಷತೆಗೆ ಸಂಬಂಧಿಸಿದಂತೆ ವೃತ್ತ ನಿರ್ಮಾಣ ಮಾಡುವ ಸುಪ್ರೀಂಕೋರ್ಟ್‌ನ 2009ರ ಮಾರ್ಗಸೂಚಿಯನ್ನು ಪಾಲಿಸಿ, ಈ ಪ್ರತಿಮೆ ಸ್ಥಾಪನೆಗೆ ಸಮ್ಮತಿ ಸೂಚಿಸಲಾಗಿದೆ ಎಂದರು.

ಗನ್ ಹೌಸ್ ವೃತ್ತದಲ್ಲಿ ಶ್ರೀಗಳ ಪ್ರತಿಮೆ ಸ್ಥಾಪನೆ ಮಾಡಲು ಮೈಸೂರು ನಗರ ಪಾಲಿಕೆಯ ಕೌನ್ಸಿಲ್ ಸಭೆ ಅನುಮೋದನೆ ನೀಡಿತ್ತು. ಈ ಸಂಬಂಧ ಸಚಿವ ಸಂಪುಟ ಕೂಡ ಒಪ್ಪಿಗೆ ಸೂಚಿಸಿದೆ. ಆದರೆ ಹೈಕೋರ್ಟ್‌ನಿಂದ ತಡೆಯಾಜ್ಞೆ ಇತ್ತು. ಈ ವೇಳೆ ಸರ್ಕಾರವೇ ಅಡ್ವೋಕೇಟ್ ಜನರಲ್ ಮೂಲಕ ರಿಟ್ ಪಿಟಿಷನ್ ಹಾಕಿತ್ತು. ಈ ಸಂಬಂಧ ಜಿಲ್ಲಾ ಮಟ್ಟದ ಸಮಿತಿಯು ಪರಿಶೀಲಿಸಿ, ತೀರ್ಮಾನ ಮಾಡುವಂತೆ ಹೈಕೋರ್ಟ್ ಸೂಚನೆ ನೀಡಿತ್ತು.

ಗನ್ ಹೌಸ್ ಬಳಿಯ ವೃತ್ತದಲ್ಲಿ ಶ್ರೀಗಳ ಪ್ರತಿಮೆ ಸ್ಥಾಪನೆ ಮಾಡಲು ಜಿಲ್ಲಾ ಸಮಿತಿ ಕೂಡ ಅನುಮೋದನೆ ನೀಡಿದೆ. ಅದರಂತೆ ಅಲ್ಲಿ ಪ್ರತಿಮೆ ನಿರ್ಮಾಣ ಮಾಡಲಾಗುತ್ತಿದೆ. ಸುಪ್ರೀಂಕೋರ್ಟ್ ಮಾರ್ಗಸೂಚಿಯ ಪ್ರಕಾರವೇ ವೃತ್ತ ನಿರ್ಮಾಣ ಮಾಡಲಾಗುತ್ತಿದ್ದು, ಇದರಿಂದ ರಸ್ತೆ ಸುರಕ್ಷತೆಗೆ ಯಾವುದೇ ಧಕ್ಕೆ ಆಗುವುದಿಲ್ಲ ಎಂದು ಡಾ.ರಾಜೇಂದ್ರ ಹೇಳಿದರು.

ಅದೂ ಅಲ್ಲದೆ ಗನ್ ಹೌಸ್ ಬಳಿಯ ವೃತ್ತವನ್ನು 1980ರಿಂದಲೇ ಶ್ರೀ ರಾಜೇಂದ್ರ ಸ್ವಾಮೀಜಿ ವೃತ್ತ ಎಂದು ನಗರ ಪಾಲಿಕೆ ವತಿಯಿಂದಲೇ ಫಲಕ ಸ್ಥಾಪಿಸಲಾಗಿದೆ.

ಪ್ರತಿಮೆ ಸ್ಥಾಪನೆ ಮಾಡುವ ಸಂಬಂಧ ಸಂಘ–ಸಂಸ್ಥೆಯೊಂದಿಗೆ ನಗರ ಪಾಲಿಕೆ ಒಡಂಬಡಿಕೆ ಮಾಡಿಕೊಂಡು, ಅದರ ನಿರ್ಮಾಣ ಹಾಗೂ ನಿರ್ವಹಣೆ ಜವಾಬ್ದಾರಿ ಹೊತ್ತಿದೆ. ಅದರಂತೆ ಆ ಸಂಸ್ಥೆಯವರು ಪ್ರತಿಮೆ ಸ್ಥಾಪನೆ ಮಾಡಿ, ವೃತ್ತ ನಿರ್ಮಾಣ ಮಾಡುತ್ತಿದ್ದಾರೆ ಎಂದು ಡಾ. ರಾಜೇಂದ್ರ ತಿಳಿಸಿದರು. ಕೆಲವು ಸಂಘ–ಸಂಸ್ಥೆಯವರು ಪ್ರತಿಮೆ ಸ್ಥಾಪನೆ ವಿರುದ್ಧ ಹೋರಾಟ ಮಾಡುತ್ತಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಡಾ.ರಾಜೇಂದ್ರ ಪ್ರತಿಯೊಬ್ಬರಿಗೂ ಕಾನೂನು ಮುಖಾಂತರ ಹೋರಾಟ ಮಾಡುವ ಅವಕಾಶವಿದೆ ಎಂದು ಸ್ಪಷ್ಟನೆ ನೀಡಿದರು.

ಮುಂದಿನ ಬಾರಿ ನಂಬರ್ ಒನ್ ಆಗುತ್ತೇವೆ...

ಮುಂದಿನ ವರ್ಷದ ಸ್ವಚ್ಛ ಸರ್ವೇಕ್ಷಣೆಯಲ್ಲಿ ಮೈಸೂರು ನಗರವನ್ನು ಇಡೀ ದೇಶದಲ್ಲೇ ಅಗ್ರ ಸ್ಥಾನಕ್ಕೆ ತರುವುದನ್ನು ಸವಾಲಾಗಿ ಸ್ವೀಕರಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ರಾಜೇಂದ್ರ ತಿಳಿಸಿದರು.

ಈ ಬಾರಿ ನಮಗೆ ಅಗ್ರ ಸ್ಥಾನ ಕೈ ತಪ್ಪಲು ಯಾವ ಅಂಶಗಳು ಕಾರಣ ಎಂಬುದನ್ನು ಮೊದಲು ಅವಲೋಕಿಸಲಾಗುವುದು. ಈಗ ಉಂಟಾಗಿರುವ ಲೋಪಗಳನ್ನು ಸರಿಪಡಿಸಿ ಮುಂದಿನ ವರ್ಷ ಮೈಸೂರು ನಗರವನ್ನು ಮೊದಲ ಸ್ಥಾನಕ್ಕೆ ತರುವ ಗುರಿ ಹೊಂದಲಾಗಿದೆ ಎಂದು ತಿಳಿಸಿದರು. ಮೈಸೂರು ನಗರದ ಸುತ್ತಮುತ್ತ ಬಡಾವಣೆಗಳು, ನಗರ ಸಭೆ, ಪಟ್ಟಣ ಪಂಚಾಯಿತಿಗಳಿವೆ. ಇಲ್ಲಿ ವೈಜ್ಞಾನಿಕ ರೀತಿಯಲ್ಲಿ ಸಮರ್ಪಕವಾಗಿ ಕಸ ವಿಲೇವಾರಿ ಆಗುತ್ತಿಲ್ಲ. ಈ ಎಲ್ಲಾ ಕಾರಣಗಳಿಂದ ಈ ಬಾರಿ ನಮಗೆ ಅಗ್ರ ಸ್ಥಾನ ತಪ್ಪಿತು ಎಂದು ಡಾ. ರಾಜೇಂದ್ರ ಹೇಳಿದರು.

ಜ.22ರ ನಂತರ ಅಯೋಧ್ಯೆಗೆ ಭೇಟಿ ನೀಡಿ ಶ್ರೀರಾಮನಿಗೆ ಪೂಜೆ

● ಮುಖ್ಯಮಂತ್ರಿ ಸಿದ್ದರಾಮಯ್ಯ ನಿರ್ಧಾರ ● ನಮ್ಮ ಕಾರ್ಯಕರ್ತರು ಸಹ ಭೇಟಿ ನೀಡಿ ಪೂಜೆ ಸಲ್ಲಿಸುತ್ತಾರೆ



ಬೆಂಗಳೂರು, ಜ.12(ಕೆಎಂಶಿ)– ಜನವರಿ 22ರ ನಂತರ ಅಯೋಧ್ಯೆಗೆ ಭೇಟಿ ನೀಡಿ ರಾಮನಿಗೆ ಪೂಜೆ ಸಲ್ಲಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಶಿವಮೊಗ್ಗದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಿಸಿ ಬಿಜೆಪಿ ರಾಜಕೀಯ ಮಾಡಲು ಹೊರಟಿದೆ, ದೇವರನ್ನು ರಾಜಕೀಯವಾಗಿ ಬಳಸಿಕೊಳ್ಳುವುದನ್ನು ವಿರೋಧಿಸುತ್ತೇವೆಯೇ ಹೊರತು ರಾಮಚಂದ್ರನನ್ನು ವಿರೋಧಿಸುವುದಿಲ್ಲ ಎಂದರು. ಈ ತಿಂಗಳ 22ನೇ ತಾರೀಖಿನ ನಂತರ ಅಯೋಧ್ಯೆಗೆ ಭೇಟಿ ನೀಡುವುದಲ್ಲದೆ, ಇಡೀ ರಾಜ್ಯದಲ್ಲಿ ಪಕ್ಷದ ಕಾರ್ಯಕರ್ತರು ಸಹ ದೇವಾಲಯಕ್ಕೆ ತೆರಳಿ ಪೂಜೆ ಸಲ್ಲಿಸುತ್ತಾರೆ.

ಮೂವರು ಉಪ ಮುಖ್ಯಮಂತ್ರಿ ಸ್ಥಾನದ ಕುರಿತು ಚರ್ಚಿಸುವುದಿಲ್ಲ, ಗ್ಯಾರಂಟಿ ಯೋಜನೆಗಳಿಗೆ ಯಾರದ್ದೋ ದುಡ್ಡು, ಯಲ್ಲಮ್ಮನ ಜಾತ್ರೆ ಎಂಬ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಟೀಕೆ ಬರೀ ಸುಳ್ಳು, ಕುಮಾರಸ್ವಾಮಿ ಎಂದರೆ ಸುಳ್ಳು, ಸುಳ್ಳು ಎಂದರೆ ಕುಮಾರಸ್ವಾಮಿ, ಅವರ ಟೀಕೆಗೆ ಉತ್ತರಿಸುವುದಿಲ್ಲ ಎಂದರು. ವಿರೋಧ ಪಕ್ಷಗಳು ತಮ್ಮ ಸರ್ಕಾರದ ಅವಧಿಯಲ್ಲಿ ಯಾವುದೇ ಗ್ಯಾರಂಟಿಗಳನ್ನು ನೀಡಿಲ್ಲವಾದ್ದರಿಂದ ಅವರಿಗೆ ಈ ಯೋಜನೆಗಳು ನುಂಗಲಾರದ ತುತ್ತಾಗಿವೆ ಎಂದರು.

ಐಪಿಎಸ್ ಅಧಿಕಾರಿ ರೂಪ ಬೇಷರತ್ ಕ್ಷಮೆ ಕೇಳಬೇಕು

ಸುಪ್ರೀಂಕೋರ್ಟ್‌ನಲ್ಲಿ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಬಿಗಿ ಪಟ್ಟು

● ಕಾವೇರಿದ ವಾದ–ಪ್ರತಿವಾದ ● ಮಧ್ಯ ಪ್ರವೇಶಿಸಿದ ನ್ಯಾಯಮೂರ್ತಿಗಳು ● ಇಬ್ಬರು ಅಧಿಕಾರಿಗಳಿಗೆ ಬುದ್ಧಿವಾದ



ಸಿಂಧೂರಿ



ಡಿ.ರೂಪ

ನವದೆಹಲಿ, ಜ.12(ಬಿಎಲ್‌ಯು)– ಸಾಮಾಜಿಕ ಮಾಧ್ಯಮದಲ್ಲಿ ತಮ್ಮ ಬಗ್ಗೆ ಅವಹೇಳನಕಾರಿ ಪೋಸ್ಟ್ ಮಾಡಿರುವ ಐಪಿಎಸ್ ಅಧಿಕಾರಿ ಡಿ.ರೂಪ ಬೇಷರತ್ ಕ್ಷಮೆ ಕೇಳಬೇಕೆಂದು ಮೈಸೂರು ಜಿಲ್ಲಾಧಿಕಾರಿಯಾಗಿದ್ದ ರೋಹಿಣಿ ಸಿಂಧೂರಿ ಸುಪ್ರೀಂ ಕೋರ್ಟ್‌ನಲ್ಲಿ ಬಿಗಿ ಪಟ್ಟು ಹಿಡಿದಿದ್ದಾರೆ.

ರೋಹಿಣಿ ಸಿಂಧೂರಿ ಸಲ್ಲಿಸಿದ್ದ ಕ್ರಿಮಿನಲ್ ಮಾನನಷ್ಟ ಪ್ರಕರಣದ ಬಗ್ಗೆ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ಏಕ ಸದಸ್ಯ ಪೀಠದಲ್ಲಿ ಇಂದು ವಿಚಾರಣೆ ನಡೆಯಿತು.

ಈ ಸಂದರ್ಭದಲ್ಲಿ ವಾದ ಮಂಡಿಸಿದ ರೋಹಿಣಿ ಸಿಂಧೂರಿ ಪರ ವಕೀಲರು, ರೂಪ ಅವರು ಹಾಕಿರುವ ಅವಹೇಳನಕಾರಿ ಪೋಸ್ಟ್‌ಗಳನ್ನು ಸಾಮಾಜಿಕ ಮಾಧ್ಯಮಗಳಿಂದ ಡಿಲೀಟ್ ಮಾಡಿರಬಹುದು. ಆದರೆ ಇಂತಹ ಪೋಸ್ಟ್‌ಗಳಿಂದ ನನ್ನ ಕುಟುಂಬಕ್ಕೆ ಘಾಸಿಯಾಗಿದೆ. ಇದರಿಂದ ನಾನು ಸಾರ್ವಜನಿಕ ಜೀವನದಲ್ಲಿ ಕೆಲಸ ಮಾಡುವುದು ಹೇಗೆ? ಹೀಗಾಗಿ ರೂಪ ಬೇಷರತ್ ಕ್ಷಮೆ ಕೇಳಬೇಕೆಂದು ರೋಹಿಣಿ ಸಿಂಧೂರಿ ಪಟ್ಟು ಹಿಡಿದಿದ್ದಾರೆ ಎಂದು ನ್ಯಾಯಾಲಯಕ್ಕೆ ತಿಳಿಸಿದರು. ಇದಕ್ಕೆ ಪ್ರತಿಕ್ರಿಯೆ ನೀಡಿದ ರೂಪ ಪರ ವಕೀಲರು, ರೋಹಿಣಿ ಸಿಂಧೂರಿ ಕೂಡ ರೂಪಾಗೆ ಬುದ್ಧಿ ಭ್ರಮಣೆಯಾಗಿದೆ ಎಂದು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ ಎಂದು ಹೇಳಿದರು.

ಇದಕ್ಕೆ ತಕ್ಷಣ ಪ್ರತಿಕ್ರಿಯೆ ನೀಡಿದ ರೋಹಿಣಿ ಸಿಂಧೂರಿ ಪರ ವಕೀಲರು, ಹೌದು, ಬುದ್ಧಿ ಭ್ರಮಣೆಯಾದವರು ಈ ರೀತಿಯಾಗಿ ಪೋಸ್ಟ್ ಮಾಡುತ್ತಾರೆ. ಆದರೆ ಅವರಿಗೆ ಬುದ್ಧಿ ಭ್ರಮಣೆಯಾಗಿದೆ ಎಂದು ಎಲ್ಲೂ ಹೇಳಿಲ್ಲ ಎಂದು ಸ್ಪಷ್ಟಪಡಿಸಿದರು. ವಾದ ಪ್ರತಿವಾದ ಆಲಿಸಿದ ನ್ಯಾಯಮೂರ್ತಿ ಓಕಾ, ಇಬ್ಬರಿಗೂ ಉಜ್ವಲ ಭವಿಷ್ಯವಿದೆ. ಈ ಹಿನ್ನೆಲೆಯಲ್ಲಿ ಇಬ್ಬರೂ ಒಂದು ನಿರ್ಧಾರಕ್ಕೆ ಬರಬೇಕು. ಈ ಮೂಲಕ ಪ್ರಕರಣದ ಇತ್ಯರ್ಥಕ್ಕೆ ಯೋಜಿಸಿದ್ದೇವೆ. ಆದರೆ ಅವರೇ ಸ್ವಯಂ ನಿರ್ಧಾರಕ್ಕೆ ಬಾರದೇ ಇದ್ದಲ್ಲಿ ನಾವು ಒತ್ತಾಯ ಮಾಡಲು ಸಾಧ್ಯವಿಲ್ಲ ಎಂದು ಬುದ್ಧಿಮಾತು ಹೇಳಿದರು.

ಇದಕ್ಕೆ ಪ್ರತಿಕ್ರಿಯೆ ನೀಡಿದ ರೋಹಿಣಿ ಸಿಂಧೂರಿ ಪರ ವಕೀಲರು, ಉಜ್ವಲ ಭವಿಷ್ಯ ಇರಬಹುದು. ಆದರೆ ಜನರು ನನ್ನ ಕಕ್ಷಿದಾರರನ್ನು ಬೇರೆ ರೀತಿ ನೋಡುತ್ತಿದ್ದಾರೆ. ಹೀಗಿರುವಾಗ ಮೌನವಾಗಿರಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು.

ಈ ವೇಳೆ ಮಧ್ಯ ಪ್ರವೇಶಿಸಿದ ನ್ಯಾಯಮೂರ್ತಿ ಓಕಾ, ಮೌನವಾಗಿರಲು ಅಥವಾ ಅರ್ಜಿ ವಾಪಸು ಪಡೆಯುವಂತೆ ನಾವು ಒತ್ತಾಯ ಮಾಡುವುದಿಲ್ಲ. ಆದರೆ ಈ ಸಂಬಂಧ ಒಂದು ತಿಂಗಳ ಸಮಯ ನೀಡಿದ್ದೇವೆ. ಫೆಬ್ರವರಿ 16ಕ್ಕೆ ಮುಂದಿನ ವಿಚಾರಣೆಗೆ ಪಟ್ಟಿ ಮಾಡಲಾಗುವುದು. ಅಲ್ಲಿವರೆಗೆ ಮಧ್ಯಂತರ ಆದೇಶ ಮುಂದುವರೆಯಲಿದೆ. ಆದರೆ ಇಬ್ಬರೂ ಆರೋಪ–ಪ್ರತ್ಯಾರೋಪ ಮಾಡಬಾರದು. ಈ ಸಂಬಂಧ ಸಾಮಾಜಿಕ ಮಾಧ್ಯಮಗಳಲ್ಲಿ ಯಾವುದೇ ಪೋಸ್ಟ್ ಮಾಡಬಾರದು ಎಂದು ತಾಕೀತು ಮಾಡಿದರು.

ಗನ್‌ಹೌಸ್ ಬಳಿ ವೃತ್ತದಲ್ಲಿ ಪ್ರತಿಮೆ ತೆರವುಗೊಳಿಸುವಂತೆ ಆಗ್ರಹಿಸಿ ಪ್ರತಿಭಟನೆ



ಮೈಸೂರಿನ ಗನ್‌ಹೌಸ್ ಬಳಿಯ ವೃತ್ತದಲ್ಲಿ ನಿರ್ಮಿಸಿರುವ ಪ್ರತಿಮೆಯನ್ನು ತೆರವುಗೊಳಿಸಬೇಕು ಎಂದು ಆಗ್ರಹಿಸಿ ಕಾನೂನು ಬಾಹಿರ ಪ್ರತಿಮೆ ತೆರವು ಹೋರಾಟ ಸಮಿತಿಯು ಶುಕ್ರವಾರ ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿತು.

ಮೈಸೂರು,ಜ.12(ಜಿಎ)–ಮೈಸೂರಿನ ಗನ್‌ಹೌಸ್ ಬಳಿಯ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ವೃತ್ತದಲ್ಲಿ ನಿರ್ಮಿಸಿರುವ ಪ್ರತಿಮೆಯನ್ನು ತೆರವುಗೊಳಿಸಬೇಕು ಎಂದು ಆಗ್ರಹಿಸಿ 'ಕಾನೂನು ಬಾಹಿರ ಪ್ರತಿಮೆ ತೆರವು ಹೋರಾಟ ಸಮಿತಿ'ಯು ಶುಕ್ರವಾರ ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿತು.

ಹಳೆ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು ಸುಪ್ರೀಂ ಕೋರ್ಟ್ ಆದೇಶದ ವಿರುದ್ಧ ಪ್ರತಿಮೆ ನಿರ್ಮಾಣ ಸಲ್ಲ', 'ಮೈಸೂರಿನ ಪಾರಂಪರಿಕತೆಗೆ ಧಕ್ಕೆಯಾಗಬಾರದು', 'ಪ್ರತಿಮೆ ತೆರವಾಗುವವರೆಗೂ ಹೋರಾಟ' ಇತ್ಯಾದಿ ಫಲಕಗಳನ್ನು ಪ್ರದರ್ಶಿಸಿ ಜಿಲ್ಲಾಧಿಕಾರಿ ಹಾಗೂ ಅಧಿಕಾರಿಗಳ ವಿರುದ್ಧ ವಿವಿಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ದಸಂಸ ಮುಖಂಡ ಚೋರನಹಳ್ಳಿ ಶಿವಣ್ಣ ಮಾತನಾಡಿ, ಜಿಲ್ಲಾಧಿಕಾರಿಗಳು ಹಾಗೂ ಇತರೆ ಅಧಿಕಾರಿಗಳು ಪ್ರತಿಮೆ ನಿರ್ಮಾಣಕ್ಕೆ ಅವಕಾಶ ನೀಡಿ ಸಹಿ ಹಾಕಿರುವುದು ಖಂಡನೀಯ. ಇದನ್ನು ಮರುಪರಿಶೀಲಿಸಿ, ತಪ್ಪಿತಸ್ಥರ ವಿರುದ್ಧ ಕ್ರಮವಾಗಬೇಕು ಎಂದು ಒತ್ತಾಯಿಸಿದರು. ಏಳು ರಸ್ತೆಗಳು ಸೇರುವ ವೃತ್ತದಲ್ಲಿ ಪ್ರತಿಮೆ ನಿರ್ಮಿಸುವ ಅಗತ್ಯವಿರಲಿಲ್ಲ. ಅದಕ್ಕೆ ಜಿಲ್ಲಾಡಳಿತ ಹಾಗೂ ಪಾಲಿಕೆ ಅವಕಾಶ ನೀಡಬಾರದು. ಸುತ್ತೂರು ಮಠದ ಸ್ವಾಮೀಜಿಯವರು ಮನಸ್ಸು ಮಾಡಿದರೆ ಈ ವಿವಾದ ಇತ್ಯರ್ಥವಾಗುತ್ತದೆ. ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅನೇಕ ಸಮಾಜ ಸುಧಾರಣಾ ಕೆಲಸ ಮಾಡಿದ್ದಾರೆ. ಅವರ ಹೆಸರನ್ನು ವಿವಾದಾತ್ಮಕ ವಿಚಾರಗಳಲ್ಲಿ ಬಳಸುತ್ತಿರುವುದು ಸರಿಯಲ್ಲ. ನಗರದ ವಿವಿಧೆಡೆ ಖಾಲಿ ಇರುವ ವೃತ್ತಗಳಲ್ಲಿ ಸ್ವಾಮೀಜಿಯವರ ಪ್ರತಿಮೆಯನ್ನು ಗೌರವಯುತವಾಗಿ ಪ್ರತಿಷ್ಠಾಪಿಸೋಣ. ರೀತಿ, ನೀತಿಗಳನ್ನು ಮೀರಿ ಪ್ರತಿಮೆ ನಿರ್ಮಾಣ ಮಾಡುವುದು ಬೇಡ ಎಂದರು. ಅರಸು ಮಂಡಳಿ ಅಧ್ಯಕ್ಷ ಹೆಚ್.ಎಂ.ಟಿ.ಲಿಂಗರಾಜೇ ಅರಸ್ ಮಾತನಾಡಿ, 'ನ್ಯಾಯಾಲಯವು ಪ್ರತಿಮೆ ನಿರ್ಮಾಣದ ಬಗ್ಗೆ ಜಿಲ್ಲಾ ಮಟ್ಟದ ಸಮಿತಿ ರಚಿಸಿ ಪರಿಶೀಲನೆ ನಡೆಸುವಂತೆ ಜಿಲ್ಲಾಧಿಕಾರಿಗೆ ಸೂಚಿಸಿತ್ತು. ಜಿಲ್ಲಾಧಿಕಾರಿಗಳು ಡಿ.5ರಂದು ತಿಳುವಳಿಕೆ ಪತ್ರದ ಮೂಲಕ 'ಅಲ್ಲಿ ಯಾವುದೇ ಹಳೆಯ ಪ್ರತಿಮೆ ಇಲ್ಲ, ಹೊಸ ಪ್ರತಿಮೆ ಸ್ಥಾಪಿಸಬಹುದು' ಎಂದು ತಿಳಿಸಿದ್ದಾರೆ. ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಪ್ರತಿಮೆ ಸ್ಥಾಪಿಸಲು ಸಮ್ಮತಿಸಿರುವುದನ್ನು, ಜಿಲ್ಲಾಡಳಿತ ಪುನರ್ ಪರಿಶೀಲಿಸಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಸಮಿತಿಯ ಸಂಚಾಲಕ ಮೈ.ಕಾ.ಪ್ರೇಮ್ ಕುಮಾರ್, ಯಮುನಾ, ಮಹದೇವಸ್ವಾಮಿ, ಅರಸು ಮಂಡಳಿಯ ಅಮರ್‌ನಾಥ್ ರಾಜೇ ಅರಸ್ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

ಗನ್‌ಹೌಸ್ ಬಳಿಯ ವೃತ್ತದಲ್ಲಿನ ಪ್ರತಿಮೆ ಅನಾವರಣಕ್ಕೆ 'ಸುಪ್ರೀಂ' ತಡೆ



ಮೈಸೂರಿನ ಅಗ್ರಹಾರದಲ್ಲಿರುವ ಅರಸು ಮಂಡಳಿ ಸಂಘದ ಕಚೇರಿಯಲ್ಲಿ ಸಂಘದ ಅಧ್ಯಕ್ಷ ಎಚ್‌ಎಂಟಿ ಲಿಂಗರಾಜೇ ಅರಸ್ ಶುಕ್ರವಾರ ಪತ್ರಿಕಾಗೋಷ್ಠಿ ನಡೆಸಿದರು. ದೇವರಾಜ ಮಾರುಕಟ್ಟೆ ಮಳಿಗೆದಾರರ ಸಂಘದ ಅಧ್ಯಕ್ಷ ಪೈ.ಮಹದೇವ್, ಜಿಲ್ಲಾ ಒಕ್ಕಲಿಗರ ವಿಕಾಸ ವೇದಿಕೆಯ ಅಧ್ಯಕ್ಷೆ ಯಮುನಾ, ಮೈ.ಕಾ. ಪ್ರೇಮ್ ಕುಮಾರ್, ದಸಂಸದ ಚೋರನಹಳ್ಳಿ ಶಿವಣ್ಣ, ಅಮರನಾಥ ರಾಜೇ ಅರಸ್ ಉಪಸ್ಥಿತರಿದ್ದರು.

> "ಗನ್ ಹೌಸ್‌ವೃತ್ತದಲ್ಲಿ ಪ್ರತಿಮೆ ನಿರ್ಮಾಣ ಕಾಮಗಾರಿಗೆ ತಡೆಯಾಜ್ಞೆ ನೀಡುವಂತೆ ಸುಪ್ರಿಂಕೋರ್ಟ್‌ನಲ್ಲಿ ಸ್ಪೆಷಲ್ ಲೀವ್ ಪಿಟಿಷನ್ ಸಲ್ಲಿಸಲಾಗಿತ್ತು. ನಮ್ಮ ವಾದ ಆಲಿಸಿದ ಕೋರ್ಟ್ ಪ್ರತಿಮೆ ಅನಾವರಣಕ್ಕೆ ತಡೆಯಾಜ್ಞೆ ನೀಡಿದೆ.
> –ಸಿ.ಎಂ.ಸುಬ್ರಹ್ಮಣ್ಯ, ಹೈಕೋರ್ಟ್ ವಕೀಲರು.

ಮೈಸೂರು, ಜ.12(ಎಂಕೆ)– ನಗರದ ಗನ್ ಹೌಸ್ ಬಳಿಯ ವೃತ್ತದಲ್ಲಿ ಪ್ರತಿಮೆ ಅನಾವರಣ ಮಾಡುವುದಕ್ಕೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿದ್ದು, ಕೋರ್ಟ್‌ನಿಂದ ತಡೆಯಾಜ್ಞೆ ಸಿಕ್ಕಿರುವುದು ಸರ್ವ ಜನಾಂಗದ ಸಮಿತಿ ನಡೆಸುತ್ತಿದ್ದ ಹೋರಾಟಕ್ಕೆ ಸಂದ ಜಯವಾಗಿದೆ ಎಂದು ಸಮಿತಿ ಸಂಚಾಲಕ ಹಾಗೂ ಅರಸು ಮಂಡಳಿ ಸಂಘದ ಅಧ್ಯಕ್ಷ ಎಚ್‌ಎಂಟಿ ಲಿಂಗರಾಜೇ ಅರಸ್ ತಿಳಿಸಿದರು.

ಅಗ್ರಹಾರದಲ್ಲಿರುವ ಅರಸು ಮಂಡಳಿ ಸಂಘದ ಕಚೇರಿಯಲ್ಲಿ ಶುಕ್ರವಾರ ಸುದ್ದಿಗೋಷ್ಠಿ ನಡೆಸಿದ ಅವರು, ವೃತ್ತದಲ್ಲಿ ಪ್ರತಿಮೆ ನಿರ್ಮಾಣ ಕಾಮಗಾರಿ ನಡೆಯುತ್ತಿರುವ ಹಿನ್ನೆಲೆಯಲ್ಲಿ ಮೈಸೂರಿನ ವಕೀಲರಾದ ಸುಬ್ರಹ್ಮಣ್ಯ ಅವರು ತಮ್ಮ ವಕೀಲರ ಮೂಲಕ ಹೈಕೋರ್ಟ್‌ನಲ್ಲಿ ಮೊಕದ್ದಮೆ ಹೂಡಿದ್ದರು. ವಿಚಾರಣೆ ನಡೆಸಿದ ನ್ಯಾಯಾಧೀಶರು, ಪ್ರತಿಮೆ ನಿರ್ಮಾಣ ಸಂಬಂಧ ಜಿಲ್ಲಾ ಕಮಿಟಿಯಲ್ಲಿರುವ ಜಿಲ್ಲಾಧಿಕಾರಿ ಸೇರಿದಂತೆ ಇತರೇ ಅಧಿಕಾರಿಗಳಿಗೆ ನೋಟಿಸ್ ನೀಡಿ ವಿವರಣೆ ನೀಡುವಂತೆ ನಿರ್ದೇಶನ ನೀಡಿತ್ತು. ಆದರೆ ಕಾಮಗಾರಿ ಸ್ಥಗಿತಕ್ಕೆ ತಡೆಯಾಜ್ಞೆ ನೀಡದ ಹಿನ್ನಲೆಯಲ್ಲಿ ಸುಬ್ರಹ್ಮಣ್ಯ ಅವರು ಸುಪ್ರಿಂ ಕೋರ್ಟ್‌ಗೆ ಕಳೆದ ಜ.8 ರಂದು ತಮ್ಮ ವಕೀಲರಾದ ದಾಮಾ ಶೇಷಾದ್ರಿ ನಾಯ್ಡು ಅವರು ಸ್ಪೇಷಲ್ ಲೀವ್ ಪಿಟಿಷನ್ ಸಲ್ಲಿಸಿದ್ದರು. ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ, ಪ್ರಶಾಂತ್ ಕುಮಾರ್ ಮಿಶ್ರಾ ಹಾಗೂ ಸಂದೀಪ್ ಮೆಹ್ತಾ ಅವರು ಪ್ರತಿಮೆ ಅನಾವರಣಕ್ಕೆ ತಡೆಯಾಜ್ಞೆ ನೀಡಿದೆ ಎಂದು ಮಾಹಿತಿ ನೀಡಿದರು.

ಸುಪ್ರೀಂಕೋರ್ಟ್‌ನಿಂದ ಬಂದಿರುವ ತಡೆಯಾಜ್ಞೆ ಆದೇಶದ ಬಗ್ಗೆ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಮಾಹಿತಿ ನೀಡಲಿದ್ದು, ಕಾಮಗಾರಿ ನಡೆಸದಂತೆ ಮನವಿ ಸಲ್ಲಿಸಲಾಗುವುದು. ಕಾಮಗಾರಿ ನಡೆಸಲು ಯಾರು ಅನುಮತಿ ನೀಡಿದ್ದಾರೆ ಎಂದು ಪ್ರಶ್ನೆ ಮಾಡಿದರೆ ಜಿಲ್ಲಾಡಳಿತ, ಪಾಲಿಕೆ ಸೇರಿದಂತೆ ಸಂಬಂಧಪಟ್ಟ ಯಾವುದೇ ಇಲಾಖೆಯ ಅಧಿಕಾರಿಗಳು ಮಾಹಿತಿ ನೀಡದೇ ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ದೂರಿದರು. ದೇವರಾಜ ಮಾರುಕಟ್ಟೆ ಮಳಿಗೆದಾರರ ಸಂಘದ ಅಧ್ಯಕ್ಷ ಪೈ.ಮಹದೇವ್, ಜಿಲ್ಲಾ ಒಕ್ಕಲಿಗರ ವಿಕಾಸ ವೇದಿಕೆಯ ಅಧ್ಯಕ್ಷೆ ಯಮುನಾ, ಮೈ.ಕಾ. ಪ್ರೇಮ್ ಕುಮಾರ್, ದಸಂಸದ ಚೋರನಹಳ್ಳಿ ಶಿವಣ್ಣ, ಅಮರನಾಥ ರಾಜೇ ಅರಸ್ ಮತ್ತಿತರರಿದ್ದರು.

ಸ್ವಾಮಿ ವಿವೇಕಾನಂದರ ರಥ ಯಾತ್ರೆ



ಸ್ವಾಮಿ ವಿವೇಕಾನಂದರ 161 ನೇ ಜಯಂತಿ ಹಿನ್ನೆಲೆಯಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಮೈಸೂರಿನಲ್ಲಿ ರಥ ಯಾತ್ರೆ ನಡೆಸಿತು.

ಮೈಸೂರು, ಜ.12(ಬಿಎಲ್‌ಯು)– ಸ್ವಾಮಿ ವಿವೇಕಾನಂದರ 161ನೇ ಜಯಂತಿ ಹಿನ್ನೆಲೆ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಮೈಸೂರಿನಲ್ಲಿ ಇಂದು ರಥ ಯಾತ್ರೆ ಹಮ್ಮಿಕೊಂಡಿತ್ತು. ಮೈಸೂರಿನ ಮಹಾರಾಜ ಕಾಲೇಜಿನಿಂದ ಆರಂಭವಾದ ರಥಯಾತ್ರೆಗೆ ಮಹಾರಾಜ ಕಾಲೇಜಿನ ಪ್ರಾಂಶುಪಾಲ ಉದಯಶಂಕರ್ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಎಬಿವಿಪಿ ಕರ್ನಾಟಕ ದಕ್ಷಿಣ ಪ್ರಾಂತ ಕಾರ್ಯದರ್ಶಿ ಹೆಚ್.ಕೆ.ಪ್ರವೀಣ್, ಫಾರ್ಮಾ ವಿಷನ್ ಸಂಯೋಜಕ ಪ್ರಜ್ವಲ್, ಮಹಾನಗರ ಕಾರ್ಯದರ್ಶಿ ಐಶ್ವರ್ಯ ಹಾಜರಿದ್ದರು. ರಥ ಯಾತ್ರೆ ಮಹಾರಾಣಿ ಪಿಯು ಕಾಲೇಜು, ಸದ್ವಿದ್ಯಾ ಪಿಯು ಕಾಲೇಜು, ಮರಿಮಲ್ಲಪ್ಪ ಪಿಯು ಕಾಲೇಜು, ಲಕ್ಷ್ಮಿಪುರಂ ಸರ್ಕಾರಿ ಪದವಿ ಪೂರ್ವ ಕಾಲೇಜು, ಎಸ್‌ಡಿಎಂ ಪಿಯು ಕಾಲೇಜಿನ ಬಳಿ ಬಂದ ವೇಳೆ ಆಯಾ ಕಾಲೇಜಿನ ಪ್ರಾಂಶುಪಾಲರು ಪುಷ್ಪಾರ್ಚನೆ ಮಾಡಿ ಬೀಳ್ಕೊಟ್ಟರು. ಹೀಗೆ ನಗರದ ಪ್ರಮುಖ ರಸ್ತೆಯಲ್ಲಿ ಸಾಗಿದ ರಥ ಯಾತ್ರೆ ಸಮಾರೋಪ ಸಮಾರಂಭ ನಡೆಯುತ್ತಿದ್ದ ಲಕ್ಷ್ಮಿಪುರಂನ ಗೋಪಾಲಸ್ವಾಮಿ ಪಿಯು ಕಾಲೇಜಿನಲ್ಲಿ ಸಮಾಪ್ತಿಗೊಂಡಿತು.

ವಿವಿಧ ಬೇಡಿಕೆ ಈಡೇರಿಕೆಗಾಗಿ ಜ.26ರಂದು ಜಿಲ್ಲಾ ಕೇಂದ್ರಗಳಲ್ಲಿ ರೈತ ಸಂಘದಿಂದ ಟ್ರ್ಯಾಕ್ಟರ್ ರ್‍ಯಾಲಿ



ಮೈಸೂರಿನ ಕರ್ಜನ್ ಪಾರ್ಕ್‌ನಲ್ಲಿರುವ ತೋಟಗಾರಿಕಾ ಇಲಾಖೆಯ ಸಭಾಂಗಣದಲ್ಲಿ ರೈತ ಮುಖಂಡರೊಂದಿಗೆ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಸಭೆ ನಡೆಸಿದರು.

ಮೈಸೂರು, ಜ.12(ಎಂಟಿವೈ)– ಕೇಂದ್ರ ಸರ್ಕಾರ ಕೃಷಿ ಚಟುವಟಿಕೆಗೆ ಮಾರಕವಾದ ನಿಲುವು ತಾಳುವುದನ್ನು ವಿರೋಧಿಸುವುದರೊಂದಿಗೆ ರೈತರ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಜ.26 ರಂದು ಬೆಂಗಳೂರು ಸೇರಿದಂತೆ ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಟ್ರ್ಯಾಕ್ಟರ್ ರ್‍ಯಾಲಿ ನಡೆಸುತ್ತಿರುವುದಾಗಿ ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ತಿಳಿಸಿದ್ದಾರೆ.

ಮೈಸೂರಿನ ಕರ್ಜನ್ ಪಾರ್ಕ್‌ನಲ್ಲಿರುವ ತೋಟಗಾರಿಕಾ ಇಲಾಖೆಯ ಸಭಾಂಗಣದಲ್ಲಿ ರೈತ ಮುಖಂಡರೊಂದಿಗೆ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ಜಾರಿಗೊಳಿಸಲು ಮುಂದಾಗಿದ್ದ ಕೃಷಿಗೆ ಮಾರಕವಾದ ಮೂರು ತಿದ್ದುಪಡಿ ಕಾಯ್ದೆಗಳನ್ನು ಹಿಂಪಡೆದಿದೆ. ಆದರೆ, ಮಾರಕವಾದ ಮೂರು ಕೃಷಿ ಕಾಯ್ದೆಗಳನ್ನು ಪರೋಕ್ಷವಾಗಿ ರೈತರ ಮೇಲೆ ಹೇರುವ ಸಂಚನ್ನು ಸರ್ಕಾರ ಮಾಡುತ್ತಿದೆ. ಈ ಕುರಿತು ಜಿ.20 ಶೃಂಗಸಭೆಯಲ್ಲಿ ಚರ್ಚಿಸಿರುವುದು ಬಹಿರಂಗವಾಗಿದೆ ಎಂದು ಕಿಡಿಕಾರಿದರು.

ರೈತರು ಕೇಂದ್ರ ಸರ್ಕಾರದ ರೈತ ವಿರೋಧಿ ನೀತಿ ಖಂಡಿಸಿ ಮತ್ತೆ ಹೋರಾಟ ಮಾಡಬೇಕಾದ ಅನಿವಾರ್ಯತೆ ಸೃಷ್ಟಿಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ರೈತರಿಗೆ ಮಾರಕವಾಗುವ ಯಾವುದೇ ತೀರ್ಮಾನಗಳನ್ನು ಪರೋಕ್ಷವಾಗಿ ರೈತರ ಮೇಲೆ ಹೇರಿಕೆ ಮಾಡುವುದನ್ನು ಕೈಬಿಡಬೇಕು. ರೈತರು ಬೆಳೆದ ಬೆಳೆಗಳಿಗೆ ವೈಜ್ಞಾನಿಕ ಬೆಲೆ ನಿಗದಿ ಮಾಡಬೇಕು. ವೈಜ್ಞಾನಿಕ ಬೆಲೆ ನಿಗದಿ ಸಾಧ್ಯವಾಗದಿದ್ದರೆ ಬೆಂಬಲ ಬೆಲೆಯನ್ನಾದರೂ ನಿಗದಿ ಮಾಡಬೇಕು.

ದೆಹಲಿಯಲ್ಲಿ ರೈತರು ನಡೆಸಿದ ಹೋರಾಟದ ಸಂದರ್ಭ ರೈತರ ಮೇಲೆ ಹೂಡಿದ ಪ್ರಕರಣಗಳನ್ನು ಹಿಂಪಡೆಯುವುದಾಗಿ ಕೇಂದ್ರ ಸರ್ಕಾರ ಭರವಸೆ ನೀಡಿತ್ತು. ಕೂಡಲೇ ಸರ್ಕಾರ ಪ್ರಕರಣವನ್ನು ಹಿಂಪಡೆಯುವ ತೀರ್ಮಾನ ಕೈಗೊಳ್ಳಬೇಕು. ದೆಹಲಿ ಹೋರಾಟದಲ್ಲಿ 700 ಕ್ಕೂ ಹೆಚ್ಚು ರೈತರು ಹುತಾತ್ಮರಾಗಿದ್ದು. ಅವರ ನೆನಪಿನಲ್ಲಿ ದೆಹಲಿಯಲ್ಲಿ ಹುತಾತ್ಮರ ಸ್ಮಾರಕ ನಿರ್ಮಾಣಕ್ಕೆ ಜಾಗ ನೀಡಲಾಗುವುದು ಎಂದು ಕೇಂದ್ರ ಸರ್ಕಾರ ಭರವಸೆ ನೀಡಿದರೂ ಭರವಸೆಯನ್ನು ಈಡೇರಿಸಿಲ್ಲ. ರೈತರು ಹಾಗೂ ದೇಶದ ಜನರ ಸಮಸ್ಯೆಗಳನ್ನು ಬಗೆಹರಿಸಲು ಕೇಂದ್ರ ಸರ್ಕಾರ ವಿಫಲವಾಗಿದ್ದು, ಈ ಹಿನ್ನೆಲೆಯಲ್ಲಿ ಜನರನ್ನು ದಿಕ್ಕು ತಪ್ಪಿಸಲು ಬಿಜೆಪಿ ಪ್ರಮುಖರು ಅಪೂರ್ಣಗೊಂಡಿರುವ ರಾಮಮಂದಿರವನ್ನು ಉದ್ಘಾಟಿಸಿ 2024ರ ಲೋಕಸಭಾ ಚುನಾವಣೆಯಲ್ಲಿ ಗೆಲುವು ಸಾಧಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ಟೀಕಿಸಿದರು. ರೈತ ಸಂಘದ ಸಂಸ್ಥಾಪಕ ಪ್ರೊ. ಎಂ.ಡಿ.ನಂಜುಂಡಸ್ವಾಮಿ ಅವರ ಜನ್ಮ ದಿನಾಚರಣೆಯನ್ನು ಫೆ.10ರಂದು ಬೆಂಗಳೂರಿನ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನದಲ್ಲಿ ಹಮ್ಮಿಕೊಳ್ಳಲಾಗಿದ್ದು, ಅಂದು ಸರ್ಕಾರಕ್ಕೆ ರೈತರ ಹಕ್ಕೊತ್ತಾಯವನ್ನು ಮಂಡಿಸಲಾಗುವುದು. ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆಹ್ವಾನಿಸಲಾಗಿದೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ರೈತ ಸಂಘದ ಪದಾಧಿಕಾರಿಗಳಾದ ಹೊಸೂರು ಕುಮಾರ್, ಹೊಸಕೋಟೆ ಬಸವರಾಜ್, ರವಿಕಿರಣ್ ಪೂಣಚ್ಚ, ಕೃಷ್ಣಪ್ಪ, ಮಂಜುನಾಥ್, ಆದಿತ್ಯ, ಸನ್ನಿ ಡಿಸೋಜ, ಪ್ರೇಮ್ ಕುಮಾರ್ ಹಾಗೂ ಇತರರು ಇದ್ದರು.

ಇಂದು 'ಮಲ್ಲಾಡಿಹಳ್ಳಿಯ ಮಹಾಯೋಗಿ' ಕೃತಿ ಬಿಡುಗಡೆ

ಮೈಸೂರು, ಜ.12–ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮತ್ತು ಹಿಮಾಲಯ ಪ್ರತಿಷ್ಠಾನದ ಸಂಯುಕ್ತಾಶ್ರಯದಲ್ಲಿ ಮಲ್ಲಾಡಿಹಳ್ಳಿ ಶ್ರೀ ರಾಘವೇಂದ್ರ ಸ್ವಾಮೀಜಿಗಳ ಸಂಸ್ಮರಣೋತ್ಸವ, ಯೋಗ ಶಿಕ್ಷಕ ಎನ್. ಅನಂತ ಸಂಪಾದಿತ ಕೃತಿ 'ಮಲ್ಲಾಡಿಹಳ್ಳಿಯ ಮಹಾಯೋಗಿ' ಜ.13ರಂದು ಬೆಳಗ್ಗೆ 11.30ಕ್ಕೆ ಬಿಡುಗಡೆಯಾಗಲಿದೆ.

ಮೈಸೂರಿನ ನಂಜನಗೂಡು ರಸ್ತೆಯಲ್ಲಿರುವ ಅವಧೂತ ದತ್ತ ಪೀಠದ ಪ್ರಾರ್ಥನಾ ಮಂದಿರದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು ಸಾನ್ನಿಧ್ಯ ವಹಿಸಿ ಕೃತಿ ಬಿಡುಗಡೆ ಮಾಡಲಿದ್ದಾರೆ. ಅವಧೂತ ದತ್ತ ಪೀಠದ ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಗಳು ಮಲ್ಲಾಡಿಹಳ್ಳಿ ಶ್ರೀಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಿದ್ದು, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಪ್ರಾಸ್ತಾವಿಕ ನುಡಿ ಆಡಲಿದ್ದಾರೆ. ಡಾ. ಕೆ.ಕೃಷ್ಣಮೂರ್ತಿ ಸಂಶೋಧನಾ ಪ್ರತಿಷ್ಠಾನದ ನಿರ್ದೇಶಕಿ ಡಾ. ಕೆ.ಲೀಲಾ ಪ್ರಕಾಶ್ ಕೃತಿ ಕುರಿತು ಮಾತನಾಡಲಿದ್ದಾರೆ. ಹಿರಿಯ ವಕೀಲ ಓ.ಶ್ಯಾಂ ಭಟ್, ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಹಿರಿಯ ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ರಸ್ತೆಯಲ್ಲಿ ಬೆಳೆ ಒಕ್ಕಣೆಯಿಂದ ಅನಾಹುತ: ಹುರುಳಿ ಸೆತ್ತೆ ಸಿಲುಕಿ ನ್ಯಾನೋ ಕಾರು ಅಗ್ನಿಗಾಹುತಿ; ಕಾರಿನಲ್ಲಿದ್ದ ಐವರು ಅಚ್ಚರಿ ರೀತಿ ಪಾರು



ನಂಜನಗೂಡು, ಜ.12–ರಸ್ತೆಯಲ್ಲಿ ಒಕ್ಕಣೆ ಮಾಡು ವುದರಿಂದ ನಾನಾ ರೀತಿಯ ಅನಾಹುತ ಸಂಭವಿ ಸುತ್ತಿರುವ ಬಗ್ಗೆ ಎಚ್ಚರಿಸುತ್ತಲೇ ಬಂದರೂ, ರೈತ ಸಮುದಾಯ ಮಾತ್ರ ಅನಿವಾರ್ಯವೆಂಬಂತೆ ರಸ್ತೆಯಲ್ಲಿ ಬೆಳೆ ಒಕ್ಕಣೆ ಮಾಡುತ್ತಿರುವುದರಿಂದ ಅವಘಡಗಳು ಮುಂದುವರೆದಿವೆ. ಇಂದು ಸಹ ಅದೃಷ್ಟವಶಾತ್ ಮಹಾ ಅನಾಹುತವೊಂದು ತಪ್ಪಿದೆ. ಟಾಟಾ ನ್ಯಾನೋ ಕಾರಿಗೆ ರಸ್ತೆಯಲ್ಲಿ ಒಕ್ಕಣೆಗೆ ಹಾಕಿದ್ದ ಹುರುಳಿ ಸಿಲುಕಿ ಕಾರು ಹೊತ್ತಿ ಉರಿದು, ಸಂಪೂರ್ಣ ಕರಕಲಾಗಿದ್ದು, ಅದೃಷ್ಟವಶಾತ್ ಕಾರಿನಲ್ಲಿದ್ದ ಐವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಈ ಘಟನೆ ನಂಜನಗೂಡು ತಾಲೂಕು ಹೊಸಕೋಟೆ ಬಳಿ ಶುಕ್ರವಾರ ಬೆಳಗ್ಗೆ ಸಂಭವಿಸಿದೆ.

ಮೈಸೂರಿನ ರಾಜೀವ್‌ನಗರದ ನಿವಾಸಿ ರಿಚರ್ಡ್ ಎಂಬುವರಿಗೆ ಸೇರಿದ ಕಾರಿದು. ರಿಚರ್ಡ್ ಅವರು ಕೆಲಸದ ನಿಮಿತ್ತ ತಮ್ಮ ಟಾಟಾ ನ್ಯಾನೋ ಕಾರಿ(ಕೆಎ 01 ಎಂಜೆ 3416)ನಲ್ಲಿ ತಮ್ಮ ತಾಯಿ ಸೇರಿದಂತೆ ಐವರೊಂದಿಗೆ ನಂಜನಗೂಡಿಗೆ ತೆರಳಿ, ವಾಪಸ್ ಸುತ್ತೂರು–ಹೊಸಕೋಟೆ ಮಾರ್ಗವಾಗಿ ಮೈಸೂರಿಗೆ ಹಿಂತಿರುಗುತ್ತಿದ್ದರು. ಹೊಸಕೋಟೆ ಬಳಿ ರಸ್ತೆಯಲ್ಲಿ ಸುಮಾರು ಎರಡು ಅಡಿಗೂ ಹೆಚ್ಚು ಎತ್ತರವಾಗಿ ಹುರುಳಿಯನ್ನು ಹಾಕಿ ಒಕ್ಕಣೆ ಮಾಡಲಾಗುತ್ತಿತ್ತು. ಇದನ್ನು ಕಂಡು ರಿಚರ್ಡ್, ಸಾಧ್ಯವಾದಷ್ಟು ಕಾರನ್ನು ತೀರಾ ರಸ್ತೆ ಬದಿಯಲ್ಲಿ ಸ್ವಲ್ಪವೇ ಹುರುಳಿ ಸೆತ್ತೆಯನ್ನು ದಾಟಿ ಮುಂದೆ ಸಾಗಿದರು. ಈ ವೇಳೆ ಕಾರಿನ ತಳಭಾಗಕ್ಕೆ ಹುರುಳಿ ಸೆತ್ತೆ ಸಿಲುಕಿ ಬೆಂಕಿ ಹೊತ್ತಿಕೊಂಡಿದೆ. ಇದು ರಿಚರ್ಡ್ ಅವರ ಗಮನಕ್ಕೆ ಬಾರದೆ ಕಾರನ್ನು ಚಲಾಯಿಸಿಕೊಂಡು ಮುಂದಕ್ಕೆ ಸಾಗಿದ್ದಾರೆ. ಇದನ್ನು ಕಂಡ ಕೆಲ ಗ್ರಾಮಸ್ಥರು ಕಾರಿಗೆ ಬೆಂಕಿ ತಗುಲಿರುವ ವಿಚಾರವನ್ನು ತಿಳಿಸಲು ಕೂಗಿಕೊಂಡಿದ್ದಾರೆ. ಆದರೆ, ರಿಚರ್ಡ್ ಅವರು ಯಾರೋ ಯಾರಿಗೋ ಏನೋ ಹೇಳುತ್ತಿದ್ದಾರೆ ಎಂದು ತಲೆ ಕೆಡಿಸಿಕೊಳ್ಳದೆ ಮುಂದಕ್ಕೆ ಸಾಗಿದ್ದಾರೆ. ಈ ವೇಳೆ ಕೆಲವರು ಬೈಕಿನಲ್ಲಿ ಕಾರನ್ನು ಓವರ್ ಟೇಕ್ ಮಾಡಿಕೊಂಡು ಬಂದು ಕಾರಿಗೆ ಬೆಂಕಿ ಬಿದ್ದಿರುವ ವಿಚಾರ ತಿಳಿಸಿದ್ದಾರೆ. ಇದರಿಂದ ಗಾಬರಿಗೊಂಡ ರಿಚರ್ಡ್ ತಕ್ಷಣ ಕಾರನ್ನು ನಿಲ್ಲಿಸಿ ಕಾರಿನಲ್ಲಿದ್ದವರನ್ನೆಲ್ಲಾ ಇಳಿಸಿದ್ದಾರೆ. ನೋಡ–ನೋಡುತ್ತಿದ್ದಂತೆ ಕಾರು ಧಗಧಗನೆ ಹೊತ್ತಿ ಉರಿದಿದೆ. ಊರಿನವರು ಕಾರಿನ ಬೆಂಕಿ ನಂದಿಸಲು ಪ್ರಯತ್ನಿಸಿದರಾದರೂ, ಅಷ್ಟರಲ್ಲಿ ಕಾರು ಸಂಪೂರ್ಣ ಸುಟ್ಟು ಕರಕಲಾಯಿತು.

ನನ್ನ ಕಾರು 2012ನೇ ಸಾಲಿನದು. ಇನ್ಶೂರೆನ್ಸ್ 3ನೇ ಪಾರ್ಟಿಗೆ ಸಂಬಂಧಪಟ್ಟಿದ್ದಾಗಿದೆ. ಆದ್ದರಿಂದ ನನ್ನ ಕಾರಿಗೆ ಯಾವುದೇ ಇನ್ಶೂರೆನ್ಸ್ ಸಿಗುವುದಿಲ್ಲ ಎಂದು ರಿಚರ್ಡ್ ತಮ್ಮನ್ನು ಸಂಪರ್ಕಿಸಿದ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ರವೀಂದ್ರ ಎಂಬುವರಿಗೆ ಸೇರಿದ್ದ ಹುರುಳಿಯನ್ನು ರಸ್ತೆಯಲ್ಲಿಯೇ ಒಕ್ಕಣೆ ಮಾಡಲಾಗುತ್ತಿತ್ತು. ಈ ವೇಳೆ ರವೀಂದ್ರ ಕೂಡ ಸ್ಥಳದಲ್ಲಿದ್ದು, ಕಾರಿಗೆ ಬೆಂಕಿ ಬಿದ್ದಿದ್ದನ್ನು ಕಂಡು ಕೂಗಿ ಹೇಳಲು ಪ್ರಯತ್ನಿಸಿದರಂತೆ. ಆದರೆ ಅಷ್ಟರಲ್ಲಾಗಲೇ ಕಾರು ಮುಂದಕ್ಕೆ ಸಾಗಿತ್ತು ಎನ್ನಲಾಗಿದೆ. ಬಿಳಿಗೆರೆ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ನಂತರ ಊರಿನವರ ಸಮ್ಮುಖದಲ್ಲಿ ನಡೆದ ಪಂಚಾಯ್ತಿ ಫಲಕಾರಿಯಾಗದ ಕಾರಣ ರಿಚರ್ಡ್ ಅವರು ಪೊಲೀಸರಿಗೆ ದೂರು ದಾಖಲಿಸಿದ್ದಾರೆ.

ಶ್ರೀ ಶೈಲ ಜಗದ್ಗುರುಗಳ ಇಷ್ಟಲಿಂಗ ಮಹಾಪೂಜೆ, ಲಿಂಗೈಕ್ಯ ಶ್ರೀ ಮಹಾಲಿಂಗಸ್ವಾಮಿಗಳ ಪುಣ್ಯ ಸ್ಮರಣೋತ್ಸವ ಕಾರ್ಯಕ್ರಮ

ಧರ್ಮದಿಂದ ಜನರ ಕಷ್ಟಗಳು, ಸಮಸ್ಯೆಗಳು ದೂರ

ತಿ.ನರಸೀಪುರ, ಜ.12– ಮನುಷ್ಯ ಯಾವಾಗ ಧರ್ಮದ ಹಾದಿಯಲ್ಲಿ ನಡೆಯುತ್ತಾನೋ, ಧರ್ಮವನ್ನು ಸರಿಯಾಗಿ ಅರ್ಥೈಸಿಕೊಂಡು ಅದನ್ನು ತನ್ನ ಜೀವನದಲ್ಲಿ ಅಳವಡಿಸಿಕೊಳ್ಳುತ್ತಾನೋ ಆಗ ಮಾತ್ರವೇ ಆತನ ಕಷ್ಟಗಳು ಮತ್ತು ಸಮಸ್ಯೆಗಳು ದೂರಾಗಲು ಸಾಧ್ಯ ಎಂದು ಶ್ರೀ ಶೈಲ ಪೀಠದ 1008ನೇ ಜಗದ್ಗುರು ಡಾ.ಚನ್ನ ಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರು ತಿಳಿಸಿದ್ದಾರೆ.

ತಾಲೂಕಿನ ಮುಡುಕುತೊರೆ ತೋಪಿನ ಮಠದಲ್ಲಿ ಶ್ರೀ ಶೈಲ ಜಗದ್ಗುರುಗಳ ಇಷ್ಟಲಿಂಗ ಮಹಾಪೂಜೆ, ಲಿಂಗೈಕ್ಯ ಶ್ರೀ ಮಹಾಲಿಂಗಸ್ವಾಮಿಗಳ 3ನೇ ವರ್ಷದ ಪುಣ್ಯ ಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ನಂತರ ನಡೆದ ಧಾರ್ಮಿಕ ಸಮಾರಂಭದ ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ಮನುಷ್ಯನಿಗೆ ಜೀವನದಲ್ಲಿ ಅನೇಕ ಕಷ್ಟಗಳು, ಸಮಸ್ಯೆಗಳು ಬರುತ್ತವೆ. ಎಲ್ಲ ಸಮಸ್ಯೆಗಳಿಗೆ ಧರ್ಮ ಎಂಬುದು ಮಾತ್ರವೇ ಪರಿಹಾರ ಸೂಚಿಸುತ್ತದೆ. ಅದಕ್ಕಾಗಿ ಮನುಷ್ಯ ಧರ್ಮದ ಹಾದಿಯಲ್ಲಿ ನಡೆದು, ಸರಿಯಾಗಿ ಅರ್ಥೈಸಿಕೊಳ್ಳುತ್ತಾನೋ ಅವನ ಎಲ್ಲಾ ಕಷ್ಟಗಳು ಮತ್ತು ಸಮಸ್ಯೆಗಳು ದೂರಾಗುತ್ತವೆ. ಅದಕ್ಕಾಗಿ ಮನುಷ್ಯ ಧರ್ಮ ಎನ್ನುವ ಅಮೃತವನ್ನು ಸೇವಿಸಿ ಸುಖಿಗಳಾಗಬೇಕು ಎಂದರು.

ಮೌಲ್ಯಾದಾರಿತ, ವಿಚಾರಾತ್ಮಕವಾಗಿರುವ ಧರ್ಮ ಎಂದರೆ ಅಹಿಂಸಾ ಮಾರ್ಗದಲ್ಲಿ ನಡೆಯುವುದು ಯಾರಿಗೆ ಯಾವುದೇ ರೀತಿಯಾದ ಹಿಂಸೆ, ಕಷ್ಟವನ್ನು ಕೊಡದೇ ಇರುವಂತದ್ದು, ಇನ್ನೊಬ್ಬರಿಗೆ ನಾವೆಂದು ಅಪಕಾರ ಮಾಡಬಾರದು,ನೀವು ಯಾರಿಗಾದರೂ ಕೆಟ್ಟದ್ದನ್ನು ಬಯಸಿದರೆಂದರೆ, ಅವರಿಗೆ ಕೆಟ್ಟದ್ದಾಗುತ್ತೋ ಇಲ್ಲವೋ ಆದರೆ ನಿಮಗೆ ಮಾತ್ರ ಕೆಟ್ಟದಾಗುತ್ತೆ. ಯಾಕೆಂದರೆ ಮಾಡಿದ್ದುಣ್ಣೋ ಮಹಾರಾಯ ಎಂಬಂತೆ ನಾವು ಏನು ಮಾಡುತ್ತೀವೋ ಅದನ್ನು ನಾವು ಪಡೆಯುತ್ತೇವೆ. ಅದು ಯಾರನ್ನೂ ಬಿಟ್ಟಿಲ್ಲ, ಎಷ್ಟೇ ದೊಡ್ಡ ಮನುಷ್ಯರಾದರೂ ಸಣ್ಣ ಕೆಟ್ಟ ಕೆಲಸ ಅವರಿಂದ ನಡೆದರೆ ಅದರ ಪ್ರತಿಫಲವನ್ನು ಆ ದೊಡ್ಡ ಮನುಷ್ಯನೂ ಅನುಭವಿಸಬೇಕಾಗುತ್ತದೆ. ಹಾಗಾಗಿ ನಾವು ಒಳ್ಳೆಯದನ್ನು ಮಾಡಿದಾಗ ಮಾತ್ರ ಒಳ್ಳೆಯದನ್ನು ಪಡೆಯಬಹುದಾಗಿದ್ದು, ಸತ್ಯವನ್ನೇ ಮಾತನಾಡಬೇಕು ಅಹಿಂಸೆ ಮಾಡಬಾರದು ಎಂದರು.

ಸತ್ಯಕ್ಕೆ ಸಮನಾದ ತಪಸ್ಸು ಮತ್ತೊಂದಿಲ್ಲ, ಸುಳ್ಳಿಗೆ ಸಮನಾದ ಪಾಪ ಮತ್ತೊಂದಿಲ್ಲ ಎಂದು ನುಡಿದ ಶ್ರೀಗಳು ನಾವು ಯಾವಾಗಲೂ ಸತ್ಯವನ್ನೇ ಅವಲಂಬಿಸಿಕೊಂಡಿರಬೇಕು, ಕಳ್ಳತನ ಮಾಡಬಾರದು, ಯಾವುದೇ ವಸ್ತುವನ್ನು ಕೇಳಿ ಪ್ರೀತಿಯಿಂದ ಪಡೆಯಬೇಕು. ಇಲ್ಲವಾದಲ್ಲಿ ಅದು ನಮ್ಮ ಪ್ರಾಯಶ್ಚಿತ್ತಕ್ಕೆ ಕಾರಣವಾಗುತ್ತದೆ ಎಂದರು.

ಸುತ್ತೂರು ಮಠ ಹೃದಯ ಶ್ರೀಮಂತಿಕೆಯ ಮಠ: ಸುತ್ತೂರು ಶ್ರೀಗಳು ಎಲ್ಲ ಮಠಗಳ ಮೇಲೂ ವಿಶೇಷವಾದ ಅಭಿಮಾನ, ಗೌರವ ಹೊಂದಿದ್ದಾರೆ. ಇಂತಹ ಸ್ವಾಮೀಜಿಗಳಿಂದ ಮಠಾಧೀಶರ ವಲಯವೇ ಹೆಮ್ಮೆ ಪಡುವಂತಾಗಿದೆ. ಎಲ್ಲ ಮಠಗಳ ಮೇಲೂ ಪ್ರೀತಿ, ವಾತ್ಸಲ್ಯ ಇಟ್ಟುಕೊಂಡು ಬಹು ದೊಡ್ಡ ಬೆಂಬಲ ಕೊಡುತ್ತಿರುವುದು ಅವರ ವ್ಯಕ್ತಿತ್ವ, ಹೃದಯ ವೈಶಾಲ್ಯತೆಗೆ ಹಿಡಿದ ಕೈಗನ್ನಡಿಯಾಗಿದೆ, ಸುತ್ತೂರು ಮಠ ಕೇವಲ ಆರ್ಥಿಕವಾಗಿ ಶ್ರೀಮಂತಿಕೆ ಹೊಂದಿರದ ಮಠವಾಗಿರದೇ ಹೃದಯ ಶ್ರೀ ಮಂತಿಕೆ ಹೊಂದಿದ ಮಠವಾಗಿದೆ ಎಂದು ಸುತ್ತೂರು ಮಠದ ವೈಶಾಲ್ಯತೆಯನ್ನು ಶ್ರೀಗಳು ಕೊಂಡಾಡಿದರು.

ತೋಪಿನಮಠದ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ಅಪಾರ ಹೃದಯ ವೈಶಾಲ್ಯತೆ ಹೊಂದಿರುವ ಸ್ವಾಮೀಜಿಗಳಾಗಿದ್ದು, ಇಂದು ಅವರ ಕರೆಗೆ ಧಾರ್ಮಿಕ ವೇದಿಕೆಯೇ ತುಂಬಿ ಹೋಗಿದೆ. ಇದಕ್ಕೆ ಕಾರಣ ಲಿಂಗೈಕ್ಯ ಮಹಾಸ್ವಾಮಿಗಳ ತಪಶ್ಶಕ್ತಿಯ ಜೊತೆಗೆ ಮಲ್ಲಿಕಾರ್ಜುನಸ್ವಾಮಿಯ ಹೃದಯ ವೈಶಾಲ್ಯತೆ ಕೂಡ ಕಾರಣ, ತೋಪಿನಮಠದೊಂದಿಗೆ ಎಲ್ಲಾ ಮಠಗಳು ಸಹಕರಿಸಿ ಮತ್ತಷ್ಟು ಧಾರ್ಮಿಕ ಕಾರ್ಯಕ್ರಮ ನಡೆಯಲು ಅವರೊಂದಿಗೆ ಕೈ ಜೋಡಿಸಬೇಕೆಂದರು.


ಶ್ರೀ ಶೈಲ ಜಗದ್ಗುರುಗಳ ಇಷ್ಟಲಿಂಗ ಮಹಾಪೂಜೆ, ಲಿಂಗೈಕ್ಯ ಶ್ರೀ ಮಹಾಲಿಂಗಸ್ವಾಮಿಗಳವರ 3ನೇ ವರ್ಷದ ಪುಣ್ಯ ಸ್ಮರಣೋತ್ಸವ ಹಾಗೂ ಧಾರ್ಮಿಕ ಸಮಾರಂಭದ ಕಾರ್ಯಕ್ರಮವನ್ನು ಶ್ರೀಶೈಲ ಮಠದ ಜಗದ್ಗುರು ಡಾ.ಚನ್ನ ಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರು ಉದ್ಘಾಟಿಸಿದರು.

ಸುತ್ತೂರು ವೀರ ಸಿಂಹಾಸನ ಮಹಾಸಂಸ್ಥಾನ ಮಠದ ಜಗದ್ಗುರು ಶ್ರೀ ಶಿವರಾತ್ರಿ ದೇಶೀಕೇಂದ್ರ ಮಹಾಸ್ವಾಮಿಗಳು ಧಾರ್ಮಿಕ ಸಭೆಯ ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಮುಡುಕುತೊರೆ ತೋಪಿನಮಠದ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿ ಕಾರ್ಯಕ್ರಮದ ನೇತೃತ್ವ ವಹಿಸಿದ್ದರು.

ಕನಕಪುರ ಮರಳೇ ಗವಿಮಠದ ಮುಮ್ಮಡಿ ಶಿವರುದ್ರ ಮಹಾಸ್ವಾಮಿ, ಚಂದೂಪುರ ಹೊನ್ನಲಗೆರೆ ರೇಣುಕಾಶ್ರಮದ ಶಿವಲಿಂಗ ಶಿವಾಚಾರ್ಯ ಸ್ವಾಮಿ, ಧನಗೂರು ವೀರ ಸಿಂಹಾಸನ ಮಠದ ಮುಮ್ಮಡಿ ಷಡಕ್ಷರಿ ದೇಶಿ ಕೇಂದ್ರ ಶಿವಾಚಾರ್ಯ ಸ್ವಾಮಿಗಳು, ತಲಕಾಡು ಡಾ.ಸಿದ್ದ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿ, ಪರಿಣಾಮಿಪುರ ಮಠದ ಗುರುಸಿದ್ದ ಸ್ವಾಮಿಗಳು, ಚಿದರವಳ್ಳಿ ಗವಿಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು, ದೊಡ್ಡ ಬೂಹಳ್ಳಿ, ಶಿವಪ್ಪ ಸ್ವಾಮಿಗಳು, ಮುಡುಕನಪುರ ಹಲವಾರ ಮಠದ ಷಡಕ್ಷರಸ್ವಾಮಿ, ಮೇದನಿ ಮಠದ ಶಿವಲಿಂಗಸ್ವಾಮಿ, ಮಾಡ್ರಹಳ್ಳಿಪಟ್ಟದ ಮಠದ ಶಾಂತಮಲ್ಲಿಕಾರ್ಜುನ ಸ್ವಾಮಿ, ಸೋಸಲೆ ತೋಪಿನಮಠದ ಇಮ್ಮಡಿ ಷಡಕ್ಷರ ಸ್ವಾಮಿಗಳು ಹಾಗೂ ಹರ ಗುರು ಚರಮೂರ್ತಿಗಳು, ಶಾಸಕ ಶ್ರೀವತ್ಸ, ಮಾಜಿ ಶಾಸಕ ನಂಜುಂಡಸ್ವಾಮಿ, ಬಿಜೆಪಿ ಮುಖಂಡ ಡಾ.ರೇವಣ್ಣ, ತಾಯೂರು ವಿಠಲಮೂರ್ತಿ, ರೇಣುಕಾ ಪ್ರಸಾದ್, ವಕೀಲ ತೊಟ್ಟವಾಡಿ ಮಹದೇವಸ್ವಾಮಿ, ಸಹಕಾರಿ ಹಾಲು ಮಹಾ ಮಂಡಲ ನಿರ್ದೇಶಕ ಎಂ.ನಂಜುಂಡ ಸ್ವಾಮಿ, ಮೈಮೂಲ್ ಮಾಜಿ ನಿರ್ದೇಶಕ ಎಸ್.ಸಿ.ಅಶೋಕ್, ವೀರಶೈವ ಸಮಾಜದ ಅಧ್ಯಕ್ಷ ಎಸ್.ಶಾಂತರಾಜು (ಜಿಪ್ಪಿ), ವೀರಶೈವ ಮಹಾಸಭಾಧ್ಯಕ್ಷ ತೊಟ್ಟವಾಡಿ ಮಹಾದೇವಸ್ವಾಮಿ, ಎನ್.ಶೇಖರ್, ಮೋಹನ್ ಮತ್ತಿತರರಿದ್ದರು.

ಸಲಗ ದಾಳಿ: ನಿವೃತ್ತ ಯೋಧನ ಪತ್ನಿಗೆ ಗಾಯ

ಹನಗೋಡು, ಜ.12– ಹುಣಸೂರು ತಾಲೂಕು ಹನಗೋಡು ಹೋಬಳಿಯಲ್ಲಿ ಕಾಡಾನೆಗಳ ಹಾವಳಿ ಮುಂದುವರಿದಿದ್ದು, ಕಿಕ್ಕೆರಿಕಟ್ಟೆ ಗ್ರಾಮದಲ್ಲಿ ಕಾಡಾನೆ ದಾಳಿಯಿಂದ ನಿವೃತ್ತ ಯೋಧರ ಪತ್ನಿಯೊಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಕಿಕ್ಕೇರಿ ಕಟ್ಟೆ ಗ್ರಾಮದ ನಿವೃತ್ತ ಯೋಧ ಬಿಟಿ ರಾಜು ಅವರ ಪತ್ನಿ ಕಾವೇರಿ(68) ಅವರ ಕಾಲಿಗೆ ಗಂಭೀರ ಗಾಯವಾಗಿದೆ. ಅವರು ತಮ್ಮ ಮನೆಯ ಹಿಂದೆ ಎಂದಿನಂತೆ ಹಸುಗಳನ್ನು ಕಟ್ಟಲು ಹೋದಾಗ ಹಿಂದೆಯಿಂದ ಬಂದ ಸಲಗ ಅವರ ಮೇಲೆ ಹಠಾತ್ ದಾಳಿ ನಡೆಸಿದೆ. ತಕ್ಷಣ ಪಕ್ಕದಲ್ಲೇ ಇದ್ದ ಅವರ ಪತಿ ಕಿರುಚಿಕೊಂಡಾಗ ಗಾಬರಿಯಾಗಿ ಸಲಗ ಬಿಟ್ಟು ಅರಣ್ಯದ ಕಡೆ ಓಡಿ ಹೋಗಿದೆ.

ಸದ್ಯ ಪ್ರಾಣಾಪಾಯದಿಂದ ಪಾರಾಗಿದ್ದು, ಗಾಯಾಳು ಕಾವೇರಿ ಅವರನ್ನು ಚಿಕಿತ್ಸೆಗಾಗಿ ಹನಗೋಡು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ನೀಡಲಾಗಿದೆ. ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ವಿಷಯ ತಿಳಿದ ಶಾಸಕ ಜಿ.ಡಿ.ಹರೀಶ್ ಗೌಡರು ಹಾಗೂ ಅಧಿಕಾರಿಗಳು ಆಸ್ಪತ್ರೆಗೆ ಭೇಟಿ ನೀಡಿ, ಕಾವೇರಿ ಅವರ ಆರೋಗ್ಯ ವಿಚಾರಿಸಿದರು. ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಅಪೋಲೋ ಆಸ್ಪತ್ರೆಗೆ ದಾಖಲಿಸಲು ಹೇಳಿ ವೈಯಕ್ತಿಕವಾಗಿ ಧನ ಸಹಾಯ ಮಾಡಿ ಚಿಕಿತ್ಸಾ ವೆಚ್ಚವನ್ನು ಅರಣ್ಯ ಇಲಾಖೆ ವತಿಯಿಂದ ಕೊಡಿಸುವುದಾಗಿ ತಿಳಿಸಿದರು.

ಆಕ್ರೋಶ: ಹೆಚ್ಚುತ್ತಿರುವ ಕಾಡಾನೆ ದಾಳಿ ತಡೆಗೆ ಅಧಿಕಾರಿಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿಲ್ಲ ಕೇವಲ ಪರಿಹಾರ ಘೋಷಿಸಿ ಕೈತೊಳೆದುಕೊಳ್ಳುತ್ತಿದೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದು, ಶಾಶ್ವತ ಪರಿಹಾರಕ್ಕೆ ಆಗ್ರಹಿಸಿದರು. ಗ್ರಾಮಸ್ಥರು ಶಾಸಕರ ಮುಂದೆ ತಮ್ಮ ನೋವನ್ನು ಹೇಳಿಕೊಂಡರು. ಶಾಸಕರು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸಾರ್ವಜನಿಕರಿಗೆ ತೊಂದರೆ ಆಗದಂತೆ ಆನೆ ಕಂದಕಗಳಿಗೆ ರೈಲ್ವೆ ಬ್ಯಾರಿಕ್ಯಾಡ್ ಅಳವಡಿಸಿ ಮತ್ತು ಹುಲಿಗಳನ್ನು ಸೆರೆ ಹಿಡಿಯಲು ಸೂಕ್ತ ಕ್ರಮ ವಹಿಸಬೇಕು ಎಂದು ಆದೇಶಿಸಿದರು. ಅರಣ್ಯಾಧಿಕಾರಿಗಳು ಸಲಗವನ್ನು ಅರಣ್ಯದಿಂದ ಆಚೆ ಬರದಂತೆ ಕ್ರಮ ಜರುಗಿಸುವ ಭರವಸೆ ನೀಡಿದರು

ಅರಣ್ಯಾಧಿಕಾರಿಗಳಾದ ದಯಾನಂದ್, ಸುಬ್ರಹ್ಮಣ್ಯ, ಸಿದ್ದರಾಜು, ಮುಖಂಡರಾದ ಕಿರಂಗೂರು ಬಸವರಾಜ್, ಎಚ್.ಆರ್. ರಮೇಶ್, ಗಣಪತಿ, ಶಿವರಾಜ್, ಗ್ರಾಪಂ ಅಧ್ಯಕ್ಷ ಚೆನ್ನಯ್ಯ ಹಾಜರಿದ್ದರು.


ಗಾಯಾಳು ಆರೋಗ್ಯ ವಿಚಾರಿಸುತ್ತಿರುವ ಶಾಸಕ ಜಿ.ಡಿ.ಹರೀಶ್‌ಗೌಡರು.

ಕೊಣನೂರು ಸುತ್ತಮುತ್ತ ಕಾಡಾನೆಗಳ ದಾಂಧಲೆ; ರೈತರ ಫಸಲು ನಾಶ

ತಗಡೂರು/ನಂಜನಗೂಡು, ಜ.12– ಆಹಾರವನ್ನು ಅರಸಿ ಮೂರು ಕಾಡಾನೆಗಳು ತಾಲೂಕಿನ ಕೊಣನೂರು ಸುತ್ತಮುತ್ತಲಿನ ಗ್ರಾಮಗಳಿಗೆ ಲಗ್ಗೆ ಇಟ್ಟು ದಾಂಧಲೆ ನಡೆಸಿ ರೈತರ ಬೆಳೆಗಳನ್ನು ನಾಶಪಡಿಸಿ ಗ್ರಾಮಸ್ಥರಲ್ಲಿ ಆತಂಕ ಮೂಡಿಸಿವೆ.

ಚಾಮರಾಜನಗರ ಭಾಗದಿಂದ ಬಂದಿರುವ ಈ ಮೂರು ಕಾಡಾನೆಗಳು ಮೊದಲಿಗೆ ಕೊಣನೂರು ಗ್ರಾಮದ ಕೆರೆ ಸಮೀಪದಲ್ಲಿ ಕಾಣಿಸಿಕೊಂಡಿವೆ. ನಂತರ ಕೊಣನೂರು ಗ್ರಾಮದ ಪ್ರಕಾಶ್ ಎಂಬುವರ ಜಮೀನಿನಲ್ಲಿ ಬೆಳೆದಿದ್ದ ಅರಿಸಿನ ಬೆಳೆಯನ್ನು ತುಳಿದು ನಾಶಪಡಿಸಿವೆ. ಅದೇ ಗ್ರಾಮದ ರೈತ ಮಹೇಂದ್ರ ಅವರ ಬಾಳೆ ತೋಟಕ್ಕೆ ನುಗ್ಗಿ ಬಾಳೆ ಬೆಳೆ ನಾಶಪಡಿಸಿ ಸೋಲಾರ್ ತಂತಿ ಬೇಲಿಯನ್ನೂ ತುಳಿದು ಕಿತ್ತು ಹಾಕಿದೆ.

ತಾಲೂಕಿನ ಹನುಮನಪುರದಲ್ಲೂ ಸಹ ರೈತರ ಬೆಳೆಯನ್ನು ನಾಶಪಡಿಸಿ ಕಾರ್ಯ ಶ್ರೀ ಸಿದ್ದೇಶ್ವರ ಬೆಟ್ಟದಲ್ಲಿ ಆನೆಗಳು ಬೀಡು ಬಿಟ್ಟಿವೆ. ಅರಣ್ಯ ಇಲಾಖೆಯ ಸಿಬ್ಬಂದಿಗಳು ಕಾಡಾನೆಗಳನ್ನು ಕಾಡಿನತ್ತ ಓಡಿಸಲು ಹರಸಾಹಸ ಪಡುತ್ತಿದ್ದಾರೆ. ಇದೇ ಮೊದಲ ಬಾರಿಗೆ ಕೊಣನೂರು, ಕವಲಂದೆ ಭಾಗದಲ್ಲಿ ಕಾಡಾನೆಗಳು ಕಾಣಿಸಿಕೊಂಡಿರುವ ಕಾರಣ ಗ್ರಾಮಸ್ಥರಲ್ಲೂ ಆತಂಕ ಮನೆ ಮಾಡಿದೆ. ಅರಣ್ಯಾಧಿಕಾರಿ ನಿತಿನ್‌ಕುಮಾರ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ 3 ಕಾಡಾನೆಗಳು ಚಾಮರಾಜನಗರ ಭಾಗದಿಂದ ಬಂದು ತಾಲೂಕಿನ ಕಾರ್ಯ ಶ್ರೀ ಸಿದ್ದೇಶ್ವರ ಬೆಟ್ಟದಲ್ಲಿ ಬೀಡು ಬಿಟ್ಟಿವೆ. ಆಹಾರವನ್ನು ಅರಸಿ ನಾಡಿಗೆ ಬಂದಿರುವ ಕಾಡಾನೆಗಳು ಯಾವ ಕಡೆಯಿಂದ ಬಂದಿರುತ್ತವೆಯೋ ಆ ಕಡೆಗೆ ಹಿಂತಿರುಗಿ ಹೋಗುವುದು ಸಹಜ. ಈ 3 ಕಾಡಾನೆಗಳನ್ನು ಕಾಡಿನತ್ತ ಓಡಿಸಲು ಕಾರ್ಯಾಚರಣೆ ನಡೆಸುತ್ತಿದ್ದೇವೆ ಎಂದರು.


ಕಾರ್ಯ ಶ್ರೀ ಸಿದ್ದೇಶ್ವರ ಬೆಟ್ಟದಲ್ಲಿ ಬೀಡು ಬಿಟ್ಟಿರುವ ಕಾಡಾನೆಗಳು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಗುಂಟೂರು ಖಾರಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಮೇರಿ ಕ್ರಿಸ್ಮಸ್(ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಾಟೇರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಾಟೇರ (ಕ)	4 ಪ್ರದರ್ಶನಗಳು
ರಾಜಕಮಲ್	
ಅಯಲಾಮ್ (ತ)	4 ಪ್ರದರ್ಶನಗಳು
ಸಂಗಂ	
ಕ್ಯಾಪ್ಟನ್ ಮಿರರ್(ಕ) 2 ಪ್ರದರ್ಶನಗಳು ಕ್ಯಾಪ್ಟನ್ ಮಿರರ್(ತ)	2 ಪ್ರದರ್ಶನಗಳು
ಲಿಡೋ	
ಹನುಮಾನ್ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಟೈಗರ್–3 (ಹಿಂ)	4 ಪ್ರದರ್ಶನಗಳು
ಪ್ರಭಾ	
ಗುಂಟೂರು ಖಾರಂ(ತೆ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಗುಂಟೂರು ಕಾರಂ (ತೆ): ಬೆ.9.05ಕ್ಕೆ, ಮ.3.50ಕ್ಕೆ, ಕಾಟೇರ (ಕ): ಮ.12.15ಕ್ಕೆ, ರಾ.7ಕ್ಕೆ, ರಾ.10.25ಕ್ಕೆ.
ಸ್ಕ್ರೀನ್ 2	ಅಯಲಾನ್ (ತ): ಬೆ.10ಕ್ಕೆ, ಸಂ.4.05ಕ್ಕೆ, ಮೇರಿ ಕ್ರಿಸ್‌ಮಸ್ (ತ): ಮ.1.10ಕ್ಕೆ, ಮೇರಿ ಕ್ರಿಸ್‌ಮಸ್ (ಹಿಂ): ರಾ.7.15ಕ್ಕೆ, ಅಬ್ರಾಹಂ ಓಜ್ಲರ್ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಕ್ಯಾಪ್ಟನ್ ಮಿಲ್ಲರ್ (ಕ): ಬೆ.9.55ಕ್ಕೆ, ಕ್ಯಾಪ್ಟನ್ ಮಿಲ್ಲರ್ (ತ): ಮ.1ಕ್ಕೆ, ರಾ.10.20ಕ್ಕೆ, ಹನುಮಾನ್ (ತೆ): ಸಂ.4.05ಕ್ಕೆ, ರಾ.7.10ಕ್ಕೆ.
ಸ್ಕ್ರೀನ್ 4	ಕಾಟೇರ (ಕ): ಬೆ.9.35ಕ್ಕೆ, ಗುಂಟೂರು ಕಾರಂ (ತೆ): ಮ.1ಕ್ಕೆ, ರಾ.7.15ಕ್ಕೆ, ರಾ.10.25ಕ್ಕೆ, ಕ್ಯಾಪ್ಟನ್ ಮಿಲ್ಲರ್ (ತ): ಸಂ.4.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಗುಂಟೂರು ಕಾರಂ (ತೆ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಮೇರಿ ಕ್ರಿಸ್‌ಮಸ್ (ಹಿಂ): ಬೆ.8.55ಕ್ಕೆ, ಕಾಟೇರ (ಕ): ಬೆ.11.50ಕ್ಕೆ, ಸಂ.6.50ಕ್ಕೆ, ರಾ.10.30ಕ್ಕೆ, ಅಯಲಾನ್ (ತ): ಮ.3.30ಕ್ಕೆ.
ಸ್ಕ್ರೀನ್ 3	ಕಾಟೇರ (ಕ): ಬೆ.8.50ಕ್ಕೆ, ಕ್ಯಾಪ್ಟನ್ ಮಿಲ್ಲರ್ (ತ): ಮ.12.25ಕ್ಕೆ, ರಾ.10.10ಕ್ಕೆ, ಕ್ಯಾಪ್ಟನ್ ಮಿಲ್ಲರ್ (ಕ): ಮ.3.45ಕ್ಕೆ, ಮೇರಿ ಕ್ರಿಸ್‌ಮಸ್ (ಹಿಂ): ರಾ.7.05ಕ್ಕೆ.
ಸ್ಕ್ರೀನ್ 4	ಸೈಂಧವ್ (ತೆ): ಬೆ.9.10ಕ್ಕೆ, ಮ.3.35ಕ್ಕೆ, ಹನುಮಾನ್ (ತೆ): ಮ.12.10ಕ್ಕೆ, ರಾ.10ಕ್ಕೆ, ಅಯಲಾನ್ (ತ): ಸಂ.6.40ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮ ಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ): ಬೆ.9.35ಕ್ಕೆ, ಮ.3.55ಕ್ಕೆ, ರಾ.10ಕ್ಕೆ, ಡಂಕಿ (ಹಿಂ): ಬೆ.9ಕ್ಕೆ, ಬೆ.11.40ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ಸಂ.6.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ನೆರು (ಮ): ರಾ.10.10ಕ್ಕೆ, ಸಲಾರ್ –1 (ಮ): ಸಂ.6.35ಕ್ಕೆ, ಸಲಾರ್–1 (ಹಿಂ): ಮ.2.50ಕ್ಕೆ, ಸಂ.5.55ಕ್ಕೆ, ರಾ.10ಕ್ಕೆ, ಸಲಾರ್–1 (ಕ): ಬೆ.8.05ಕ್ಕೆ, ಬೆ.11.15ಕ್ಕೆ, ಮ.3ಕ್ಕೆ, ಸಂ.6.25ಕ್ಕೆ, ಸಲಾರ್– 1(ತೆ): ಬೆ.7.10ಕ್ಕೆ, ಬೆ.7.40ಕ್ಕೆ, ಬೆ.8.10ಕ್ಕೆ, ರಾ.10.45ಕ್ಕೆ, ಬೆ.11.45ಕ್ಕೆ, ಮ.12.20ಕ್ಕೆ, ಮ.3.20ಕ್ಕೆ, ಮ.2.20ಕ್ಕೆ, ಸಂ.6.55ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಜೀರ್ಣೋದ್ಧಾರಗೊಂಡ ಅರಸನ ಕೆರೆ ಉದ್ಘಾಟನೆ

ಬಕಾರ್ಡಿ ಕಂಪನಿ ಕಾರ್ಯವನ್ನು ಶ್ಲಾಘಿಸಿದ ಶಾಸಕ ದರ್ಶನ್ ಧ್ರುವನಾರಾಯಣ್

ನಂಜನಗೂಡು, ಜ.12– ಬಕಾರ್ಡಿ ಕಂಪನಿಯವರು ತಮ್ಮ ಸಿಎಸ್‌ಆರ್ ಅನುದಾನದಲ್ಲಿ ಐತಿಹಾಸಿಕ ಅರಸನ ಕೆರೆಯ ಜೀರ್ಣೋದ್ಧಾರ ಮಾಡಿರುವುದು ಶ್ಲಾಘನೀಯ ಕೆಲಸವಾಗಿದೆ. ರೈತರು ಈ ಕೆರೆಯ ಸಂರಕ್ಷಣೆ ಮಾಡುವ ಮೂಲಕ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ಹೇಳಿದರು.

ತಾಲೂಕಿನ ಚಿನ್ನದಗುಡಿ ಹುಂಡಿ ಬಳಿಯಲ್ಲಿ ಬಕಾರ್ಡಿ ಕಂಪನಿಯವರು ತಮ್ಮ ಸಿಎಸ್‌ಆರ್ ಅನುದಾನ ಬಳಸಿ ಜೀರ್ಣೋದ್ಧಾರ ಪಡಿಸಿರುವ ಅರಸನಕೆರೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ನಮ್ಮ ಹಿರಿಯರು ಜಮೀನುಗಳಲ್ಲಿ ಮಳೆ ನೀರು ನಿಲ್ಲಲು ಒಡ್ಡುಗಳನ್ನು ನಿರ್ಮಿಸುತ್ತಿದ್ದರು. ಹಾಗೆಯೇ ಊರಿಗೊಂದು ಕೆರೆ ನಿರ್ಮಿಸುತ್ತಿದ್ದರು. ಇಂದಿನ ದಿನಗಳಲ್ಲಿ ಕೆರೆಗಳು ನಾಶವಾಗುತ್ತಿರುವ ಕಾರಣ ಅಂತರ್ಜಲ ಮಟ್ಟ ಕುಸಿಯುತ್ತಿದೆ. ಇದರಿಂದ ಇಂದಿನ ದಿನಗಳಲ್ಲಿ ಮಳೆಯಿಲ್ಲದೆ ಭೂಮಿ ಆಳಕ್ಕೆ ಅಗೆದರೂ ಸಹ ನೀರು ದೊರಕುತ್ತಿಲ್ಲ, ಇನ್ನೂ ನಾವು ಎಚ್ಚೆತ್ತುಕೊಂಡು ಕೆರೆಗಳ ಸಂರಕ್ಷಣೆಗೆ ಮುಂದಾಗದಿದ್ದರೆ ನಮಗೆ ಕುಡಿಯುವ ನೀರಿಗೂ ತೊಂದರೆ ಎದುರಾಗಬಹುದಾಗಿದೆ ಎಂದು ಅವರು ಕಳವಳ ವ್ಯಕ್ತಪಡಿಸಿದರು.

ಕೆರೆ ತುಂಬುವುದರಿಂದ ಪರಿಸರ ಸಂರಕ್ಷಣೆ, ಜೀವ ವೈವಿಧ್ಯಗಳನ್ನು ಸಂರಕ್ಷಿಸುವುದರ ಜೊತೆಗೆ ಅಂತರ್ಜಲ ಹೆಚ್ಚಾಗಿ ಈ ಭಾಗದ ರೈತರ ಜಮೀನುಗಳಿಗೆ ನೀರು ದೊರಕಿ ಅನುಕೂಲವಾಗಲಿದೆ. ಆದ್ದರಿಂದ ಎಲ್ಲರೂ ಕೆರೆ ಕಟ್ಟೆಗಳ ಸಂರಕ್ಷಣೆ ಮೂಲಕ ಪರಿಸರವನ್ನು ಸಂರಕ್ಷಿಸಲು ಮುಂದಾಗಬೇಕು ಎಂದರು. ಬಕಾರ್ಡಿ ಕಂಪನಿ ತಮ್ಮ ಸಿಎಸ್ ಆರ್ ಅನುದಾನವನ್ನು ಬಳಸಿ ಈ ಐತಿಹಾಸಿಕ ಅರಸನ ಕೆರೆಯ 11 ಎಕರೆ ಪ್ರದೇಶವನ್ನು ಹೂಳು ತೆಗೆದು ಮೊದಲನೆ ಭಾಗವನ್ನು ಜೀರ್ಣೋದ್ಧಾರ ಪಡಿಸಿ ಪೂರ್ಣಗೊಳಿಸಿ ಸುತ್ತಮುತ್ತಲಿನ ಗ್ರಾಮಸ್ಥರಿಗೆ ಅನುಕೂಲ ಮಾಡಿಕೊಟ್ಟಿದೆ. ಇನ್ನುಳಿದ ಭಾಗಗಳನ್ನೂ ಅಭಿವೃದ್ಧಿಪಡಿಸಲು ಮುಂದಾಗಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಈ ಭಾಗದ ಕೈಗಾರಿಕೆಗಳು ತಮ್ಮ ಸಿಎಸ್‌ಆರ್ ಅನುದಾನವನ್ನು ಬಳಕೆ ಮಾಡಿ ಸಾಮಾಜಿಕ ಕೆಲಸಗಳನ್ನು ಮಾಡಲು ಮುಂದಾಗಬೇಕು. ಜೊತೆಗೆ ಕಾಡಂಚಿನ ಗ್ರಾಮಗಳ ಶಾಲೆಗಳಲ್ಲಿ ಮೂಲಭೂತ ಸೌಕರ್ಯದ ಕೊರತೆಯಿದೆ. ಹಲವಾರು ಕೈಗಾರಿಕೆಗಳು ಸಿಎಸ್‌ಆರ್ ಅನುದಾನ ಬಳಸಿ ಮೂಲಭೂತಸೌಕರ್ಯ ಒದಗಿಸುವ ಜೊತೆಗೆ ಅಗತ್ಯ ಪೀಠೋಪಕರಣಗಳನ್ನು ಕೊಡುಗೆಯಾಗಿ ನೀಡಬೇಕು ಎಂದು ಮನವಿ ಮಾಡಿದರು.

ಮಾಜಿ ಗ್ರಾಪಂ ಅಧ್ಯಕ್ಷ ಕುಳ್ಳಯ್ಯ ಮಾತನಾಡಿ ಕೆಲವು ಕೈಗಾರಿಕೆಗಳು ಸಿಎಸ್‌ಆರ್ ಅನುದಾನವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದರು.

ಇದೇ ಸಂಧರ್ಭದಲ್ಲಿ ಅರಸನ ಕೆರೆ ಪಕ್ಕದಲ್ಲಿ ಎಲ್‌ಆರ್‌ಎಫ್ ಭೂ ಸುಧಾರಣೆ ಕಾಯ್ದೆಯಡಿ ಮಂಜೂರಾಗಿರುವ ವೀರದೇವನಪುರ ಗ್ರಾಮದ ರೈತರ ಜಮೀನುಗಳನ್ನು ಪೋಡಿ ಮಾಡಿ ದುರಸ್ತಿಪಡಿಸಿಕೊಡಬೇಕೆಂದು ಶಾಸಕ ದರ್ಶನ್ ಧ್ರುವನಾರಾಯಣ್ ಅವರಿಗೆ ವೀರದೇವನಪುರ ರೈತರು ಕಾಂಗ್ರೆಸ್ ಜಿಲ್ಲಾ ಕಾರ್ಯದರ್ಶಿ ಪ್ರದೀಪ್ ನೇತೃತ್ವದಲ್ಲಿ ಮನವಿ ಸಲ್ಲಿಸಿದರು.

ಸಮಾರಂಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುರಹಟ್ಟಿ ಮಹೇಶ್, ಶ್ರೀಕಂಠನಾಯಕ, ಕಾಂಗ್ರೆಸ್ ಜಿಲ್ಲಾ ಕಾರ್ಯದರ್ಶಿ ಪ್ರದೀಪ್‌ಕುಮಾರ್, ಮುಖಂಡರಾದ ವಿಜಯ್‌ಕುಮಾರ್, ಶ್ರೀನಿವಾಸಮೂರ್ತಿ, ರಂಗದಾಸ್, ವಾಲೆ ನಾಗರಾಜು, ಕುಮಾರ್‌ಗೌಡ, ದೊರೆಸ್ವಾಮಿನಾಯಕ, ಗ್ರಾಪಂ ಸದಸ್ಯ ಶಿವಸ್ವಾಮಿ ಬಕಾರ್ಡಿ ಕಂಪನಿ ನಿರ್ದೇಶಕ ಮುತ್ತುಕುಮಾರ್, ಹ್ಯಾಂಡ್ಸ್ ಆನ್ ಸಂಸ್ಥೆ ಅಧ್ಯಕ್ಷ ಗುರುನಂದನ್, ಹರ್ಷತೇಜ್, ಸೇರಿದಂತೆ ಗ್ರಾಮಸ್ಥರು ಇದ್ದರು.


ನಂಜನಗೂಡು ತಾಲೂಕಿನ ಚಿನ್ನದಗುಡಿಹುಂಡಿ ಬಳಿಯಲ್ಲಿ ಬಕಾರ್ಡಿ ಕೈಗಾರಿಕೆಯವರು ತಮ್ಮ ಸಿಎಸ್‌ಆರ್ ಅನುದಾನ ಬಳಸಿ ಜೀರ್ಣೋದ್ಧಾರ ಪಡಿಸಿರುವ ಅರಸನಕೆರೆಯನ್ನು ಶಾಸಕ ದರ್ಶನ್ ಧ್ರುವನಾರಾಯಣ್ ಉದ್ಘಾಟಿಸಿದರು.

5ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 5 ವರ್ಷ ಕಳೆದರೂ ನಿಮ್ಮ ನೆನಪು ನಮ್ಮ ಹೃದಯದಲ್ಲಿ ಸದಾ ಹಸಿರಾಗಿದೆ. ನಿಮ್ಮ ದಿವ್ಯ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.


ದುಃಖಿತಪ್ತರು:

ಜಯ, ಸಂತೋಷ್ ಕುಮಾರ, ಸುಮಿತ್ರ, ಹೇಮಪ್ರಭ, ಶಮಂತ್ ಹಾಗೂ ಕುಟುಂಬವರ್ಗದವರು ಮಹದೇಶ್ವರ ಬಡಾವಣೆ, ಮೈಸೂರು–16. 9945973735

ಶ್ರೀ ಕೃಷ್ಣ

ನಿಧನ: 13.01.2019

13ನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಕೆಂಪಮ್ಮನವರು

ನಿಧನ: 13.01.2011

ಇಂತಿ ದುಃಖತಪ್ತರು

ಶ್ರೀಮಾನ್ ಬಂದೀಗೌಡರು ಹಾಗೂ ಕುಟುಂಬವರ್ಗದವರು, ಚಿಕ್ಕೇಗೌಡನಹುಂಡಿ, ಮೈಸೂರು

ಮೊದಲನೇ ವರ್ಷದ ಪುಣ್ಯತಿಥಿ



ಶ್ರೀ ಪಿ.ಸಿ. ಶೇಖರ್

22.05.1960 - 13.01.2023

(ಶ್ರೀ ಆರ್. ಪರಮಶಿವಣ್ಣನವರ ದ್ವಿತೀಯ ಪುತ್ರ)

ಮೆ. ವಿಜಯ ಎಂಟರ್‌ಪ್ರೈಸಸ್
ಬೆಂಗಳೂರು

ಆರ್. ಪರಮಶಿವಣ್ಣ ಅಂಡ್ ಕಂ.
ಮೈಸೂರು

ಸದಾ ನಿಮ್ಮದೇ ನೆನಪಿನಲ್ಲಿರುವ ಕುಟುಂಬದವರು

ರಿಟರ್ನಿಂಗ್ ಆಫೀಸರ್, ಅಗಸ್ತ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಮೈಸೂರು ರವರ ಕಾರ್ಯಾಲಯ

ಪತ್ರಿಕಾ ಪ್ರಕಟಣೆ

ಅಗಸ್ತ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಮೈಸೂರು ಈ ಸಹಕಾರ ಸಂಘದ ಆಡಳಿತ ಮಂಡಳಿಗೆ ಚುನಾವಣಾ ದಿನಾಂಕದಿಂದ ಮುಂದಿನ 05 ವರ್ಷಗಳ ಅವಧಿಗೆ ಚುನಾವಣೆಯನ್ನು ದಿನಾಂಕ: 28–01–2024 ರಂದು ಭಾನುವಾರ ಬೆಳಿಗ್ಗೆ 09–00 ಗಂಟೆಯಿಂದ ಸಂಜೆ 04–00 ಗಂಟೆಯವರೆಗೆ ಶ್ರೀ ವಿವೇಕ ಬಾಲೋದ್ಯಾನ ಪಬ್ಲಿಕ್ ಶಾಲೆ, 4ನೇ ಮುಖ್ಯ ರಸ್ತೆ, 6ನೇ ಕ್ರಾಸ್, ಜಯನಗರ ಮೈಸೂರು ಇಲ್ಲಿ ನಡೆಸಲು ನಿಗಧಿಪಡಿಸಲಾಗಿರುತ್ತದೆ. ಚುನಾವಣೆಯಲ್ಲಿ ಸ್ಪರ್ಧಿಸಲು ಇಚ್ಛಿಸುವವರು ನಾಮಪತ್ರಗಳನ್ನು ದಿನಾಂಕ: 14.01.2024 ರಿಂದ 20.01.2024 ರವರೆಗೆ ಬೆಳಿಗ್ಗೆ 11–00 ಗಂಟೆಯಿಂದ ಮಧ್ಯಾಹ್ನ 2–00 ಗಂಟೆಯವರೆಗೆ ಸಂಘದ ಕಛೇರಿಯಲ್ಲಿ ಸ್ವೀಕರಿಸಲಾಗುವುದು ಹಾಗೂ ನಾಮಪತ್ರಗಳ ಪರಿಶೀಲನೆಯನ್ನು ದಿನಾಂಕ: 21.01.2024 ರಂದು ಬೆಳಗ್ಗೆ 11–00 ಗಂಟೆಗೆ ನಡೆಸಲಾಗುವುದು. ಚುನಾವಣಾ ವೇಳಾ ಪಟ್ಟಿಯನ್ನು ಎಲ್ಲಾ ಅರ್ಹ ಸದಸ್ಯರುಗಳಿಗೆ ಅಂಚೆ ಮೂಲಕ ಈಗಾಗಲೇ ರವಾನಿಸಲಾಗಿದ್ದು, ಹೆಚ್ಚಿನ ವಿವರಗಳಿಗಾಗಿ ಸಂಘದ ಮುಖ್ಯ ಕಾರ್ಯನಿರ್ವಾಹಕರನ್ನು/ ರಿಟರ್ನಿಂಗ್ ಅಧಿಕಾರಿಯನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/–
(ರಾಜು. ಬಿ), ರಿಟರ್ನಿಂಗ್ ಅಧಿಕಾರಿ,
ಅಗಸ್ತ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ, ಮೈಸೂರು

ಮೈಸೂರು ಜಿಲ್ಲಾ ಮಹಿಳಾ ಸಹಕಾರ ಬ್ಯಾಂಕ್ ನಿಯಮಿತ

"ಸಹಕಾರ ಸಂಕೀರ್ಣ", ಸಹಕಾರ ಭವನ ಆವರಣ, ಚಾಮರಾಜ ಜೋಡಿ ರಸ್ತೆ, ಮೈಸೂರು-570004

2024–28ನೇ ಸಾಲಿನ ಆಡಳಿತ ಮಂಡಳಿ ಚುನಾವಣೆ

ದಿನಾಂಕ 14–01–2024ರ ಭಾನುವಾರದಂದು ಬೆಳಿಗ್ಗೆ 9ರಿಂದ ಸಂಜೆ 4ರವರೆಗೆ ಹಾರ್ಡ್ವಿಕ್ ಹೈಸ್ಕೂಲ್, (ಹಿಂದಿನ ಬಿಗ್‌ಬಜಾರ್ ಎದುರು) ರಾಮಸ್ವಾಮಿ ವೃತ್ತ, ಮೈಸೂರು, ಇಲ್ಲಿ ಮೇಲ್ಕಂಡ ಬ್ಯಾಂಕಿಗೆ 2024–28ನೇ ಅವಧಿಯ ಆಡಳಿತ ಮಂಡಳಿ ಚುನಾವಣೆಯು ನಡೆಯಲಿದ್ದು, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಿಂದ ಬ್ಯಾಂಕಿನ ಕಾರ್ಯಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ವಿವಿಧ ಕ್ಷೇತ್ರಗಳಿಗೆ ಈ ಕೆಳಕಂಡ ನಾವುಗಳು ನಿರ್ದೇಶಕರುಗಳ ಸ್ಥಾನಕ್ಕೆ ಸ್ಪರ್ಧಿಸುತ್ತಿದ್ದು, ಮಾನ್ಯ ಮತದಾರರಾದ ತಾವುಗಳು ಈ ಕೆಳಗೆ ನಮೂದಿಸಿರುವ ನಮ್ಮೆಲ್ಲರಿಗೆ ತಮ್ಮ ಅಮೂಲ್ಯವಾದ ಮತವನ್ನು ಚಲಾಯಿಸಿ ನಮ್ಮನ್ನು ಬ್ಯಾಂಕಿನ ನಿರ್ದೇಶಕರುಗಳನ್ನಾಗಿ ಆಯ್ಕೆ ಮಾಡಿ ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಲು ನಮಗೆ ಅವಕಾಶ ಮಾಡಿಕೊಡಬೇಕಾಗಿ ತಮ್ಮಲ್ಲಿ ಕಳಕಳಿಯ ಮನವಿ ಸಲ್ಲಿಸುತ್ತಿದ್ದೇವೆ.

ಬ್ಯಾಂಕಿನ ಸಂಸ್ಥಾಪಕ ಅಧ್ಯಕ್ಷರಾದ ಡಾ. ಎಂ.ವಿ. ಬೃಹದಂಬರವರ ಮುಂದಾಳತ್ವದಲ್ಲಿ ಬ್ಯಾಂಕನ್ನು ಪ್ರಗತಿ ಪಥದಲ್ಲಿ ತೆಗೆದುಕೊಂಡು ಹೋಗಲು ತಮ್ಮಗಳ ಸಹಕಾರವನ್ನು ಕೋರುತ್ತೇವೆ. ಈಗಾಗಲೇ ನಮ್ಮಲ್ಲಿ ಹಲವರು ಮೇಲ್ಕಂಡ ಬ್ಯಾಂಕಿನಲ್ಲಿ ಸಂಸ್ಥಾಪಕರಾಗಿ, ಉಪಾಧ್ಯಕ್ಷರಾಗಿ, ನಿರ್ದೇಶಕರಾಗಿ ಹಲವಾರು ವರ್ಷಗಳಿಂದ ಸೇವೆ ಸಲ್ಲಿಸುತ್ತಾ ಬಂದಿದ್ದೇವೆ. ಬ್ಯಾಂಕ್ ತನ್ನೆಲ್ಲಾ ಸದಸ್ಯರಿಗೆ ಹಲವಾರು ಸೌಲಭ್ಯಗಳನ್ನು ನೀಡುತ್ತಿದ್ದು, ಸಾವಿರಾರು ಸದಸ್ಯರು ಇದರ ಸದುಪಯೋಗ ಪಡೆದುಕೊಂಡು ಬ್ಯಾಂಕನ್ನು ಮುನ್ನಡೆಸುತ್ತಿದ್ದಾರೆ. ನಮ್ಮ ಈ ತಂಡಕ್ಕೆ ತಮ್ಮ ಅಮೂಲ್ಯವಾದ 19 ಮತಗಳನ್ನು ಹಾಕಿ ನಮ್ಮನ್ನು ಜಯಶೀಲರನ್ನಾಗಿಸಿ ಆರ್ಥಿಕ ಪ್ರಗತಿಯ ಕಾರ್ಯಗಳನ್ನು ಮುಂದುವರೆಸಲು ನಮಗೆ ಅವಕಾಶ ಕಲ್ಪಿಸಿಕೊಡಬೇಕೆಂದು ತಮ್ಮಲ್ಲಿ ಸವಿನಯದಿಂದ ಪ್ರಾರ್ಥಿಸುತ್ತೇವೆ.

ಡಾ. ಎಂ.ವಿ. ಬೃಹದಂಬರವರ ತಂಡ

ಕ್ರಮ ಸಂಖ್ಯೆ	ಹೆಸರು
1	ಹಿಂದುಳಿದ ವರ್ಗದ ಸದಸ್ಯರುಗಳ ಕ್ಷೇತ್ರ — ಶ್ರೀಮತಿ ಅಶ್ವಿನಿ ಗಿರೀಶ್, Dip. In Elec. ಹಾಲಿ ನಿರ್ದೇಶಕರು ಮೊ. 8762373824
2	ಮೈಸೂರು ನಗರ ಕ್ಷೇತ್ರ — ಶ್ರೀಮತಿ ಪಿ. ಆಶಾ ಭವಾನಿ, Dip. In Elec. ಕೈಗಾರಿಕೋದ್ಯಮಿ, ಮೊ. 9481530441
3	ಮೈಸೂರು ನಗರ ಕ್ಷೇತ್ರ — ಶ್ರೀಮತಿ ಆಶಾಲತ ಎಸ್., BSc.,Dip. In Journalism. (ಆಶಾ ಸ್ವಾಮಿ) ಹಾಲಿ ನಿರ್ದೇಶಕರು ಮೊ. 9448753112
5	ಹುಣಸೂರು ತಾಲ್ಲೂಕು ಕ್ಷೇತ್ರ — ಶ್ರೀಮತಿ ಸಿ.ಎಸ್. ಕೋಮಲ w/o ಸದಾಶಿವಪ್ಪ ಹೆಚ್.ಪಿ., ಶಿಕ್ಷಕರು ಹಾಲಿ ಉಪಾಧ್ಯಕ್ಷರು ಮೊ. 8884815161
13	ಕೆ.ಆರ್. ನಗರ ತಾಲ್ಲೂಕು ಕ್ಷೇತ್ರ — ಶ್ರೀಮತಿ ಪ್ರಭಾಮಣಿ w/o ಎಂ. ಷಡಕ್ಷರಿ, ನಿರ್ದೇಶಕರು, ಅ.ಭಾ.ವೀ.ಮ. ಸಭಾ., ಮೈ. ನಗರ ಘಟಕ ಮಾಜಿ ಉಪಾಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರು ಮೊ. 9449049556
14	ಕೊಳ್ಳೇಗಾಲ ತಾಲ್ಲೂಕು ಕ್ಷೇತ್ರ — ಶ್ರೀಮತಿ ಪ್ರಭಾ ಸುರೇಂದ್ರ D/o ಚಿಕ್ಕಮರಿಗೌಡರು ಹಾಲಿ ನಿರ್ದೇಶಕರು ಮೊ. 7019531977
15	ಮೈಸೂರು ನಗರ ಕ್ಷೇತ್ರ — ಶ್ರೀಮತಿ ಪ್ರಮೀಳ ಎಂ., ಬಿ.ಎ., W/o ಲೋಕೇಶ್ ಆರ್. ಮೊ. 6363335342
17	ಮೈಸೂರು ನಗರ ಕ್ಷೇತ್ರ — ಶ್ರೀಮತಿ ಬಿ.ಎಸ್. ಪ್ರೇಮ ಕುಮಾರಿ ಎಂ.ಎ., ನಿವೃತ್ತ ಪ್ರಾಧ್ಯಾಪಕರು, ಜೆ.ಎಸ್.ಎಸ್. ಕಾಲೇಜು, ಮೈಸೂರು ಹಾಲಿ ನಿರ್ದೇಶಕರು ಮೊ. 9886468110
18	ಪರಿಶಿಷ್ಟ ಜಾತಿಕ್ಷೇತ್ರ — ಡಾ॥ ಭಾಗೀರಥಿ ಎನ್.ಎಂ., ಎಂ.ಬಿ.ಬಿ.ಎಸ್.,ಡಿ.ಜಿ.ಒ., ಹೆಚ್.ಹೆಚ್.ಎಂ ನಿವೃತ್ತ ಸ್ಥಾನಿಕ ವೈದ್ಯಾಧಿಕಾರಿಗಳು, ಚೆಲುವಾಂಬ ಆಸ್ಪತ್ರೆ, ಮೈಸೂರು ಹಾಲಿ ನಿರ್ದೇಶಕರು ಮೊ. 9448750405
19	ನಂಜನಗೂಡು ತಾಲ್ಲೂಕು ಕ್ಷೇತ್ರ — ಶ್ರೀಮತಿ ಬಿ.ಟಿ. ಭಾಗೀರಥಿ ಶ್ರೀ ಅಶ್ವಿನಿ ಪ್ರಿಂಟರ್ಸ್, ನಂಜನಗೂಡು ಮಾಜಿ ಉಪಾಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರು ಮೊ. 9739779888
22	ಮೈಸೂರು ನಗರ ಕ್ಷೇತ್ರ — ಡಾ ಎಂ.ವಿ. ಬೃಹದಂಬ, ಎಂ.ಎ.,ಪಿಹೆಚ್.ಡಿ., ನಿವೃತ್ತ ಪ್ರಾಂಶುಪಾಲರು, ಜೆಎಸ್‌ಎಸ್ ಕಾಲೇಜು, ಮೈಸೂರು ಸಂಸ್ಥಾಪಕ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರು ಮೊ. 9481169993
23	ಪರಿಶಿಷ್ಟ ಪಂಗಡ ಕ್ಷೇತ್ರ — ಶ್ರೀಮತಿ ಎಸ್. ಮಹಾಲಕ್ಷ್ಮಿ ಮೊ. 9900444050
24	ಟಿ. ನರಸೀಪುರ ತಾಲ್ಲೂಕು ಕ್ಷೇತ್ರ — ಮಲ್ಲಿಕಾ ಎನ್. ಎಂ.ಎ.ಪಿ.ಹೆಚ್.ಡಿ. W/o ಶಿವಶಂಕರಸ್ವಾಮಿ ಪಿ., ಹಾಲಿ ನಿರ್ದೇಶಕರು ಮೊ. 9480770855
25	ಹಿಂದುಳಿದ ವರ್ಗದ ಸದಸ್ಯರುಗಳ ಕ್ಷೇತ್ರ — ಶ್ರೀಮತಿ ಮೀನಾ ಶ್ರೀನಿವಾಸ್ W/o ತೂಗುದೀಪ ಶ್ರೀನಿವಾಸ್ ಮಾಜಿ ನಿರ್ದೇಶಕರು ಮೊ. 9880023385
34	ಮೈಸೂರು ನಗರ ಕ್ಷೇತ್ರ — ಶ್ರೀಮತಿ ಶಿವಕುಮಾರಿ ಮಾಜಿ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರು ಮೊ. 9480167969 ನಿರ್ದೇಶಕರು, ಜ್ಞಾನಗಂಗಾ ಗೃ.ನಿ.ಸ.ಸಂಘ,
35	ಚಾಮರಾಜನಗರ ತಾಲ್ಲೂಕು ಕ್ಷೇತ್ರ — ಡಾ. ಡಿ. ಶೀಲಾ ಕುಮಾರಿ, ಎಂ.ಎ.ಪಿ.ಹೆಚ್.ಡಿ. ನಿವೃತ್ತ ಸಂಸ್ಕೃತ ಸಹ ಪ್ರಾಧ್ಯಾಪಕರು, ಮಹಾರಾಣಿ ಮಹಿಳಾ ಕಾಲೇಜು, ಮೈಸೂರು ಹಾಲಿ ಅಧ್ಯಕ್ಷರು ಮೊ. 9740328196
37	ಗುಂಡ್ಲುಪೇಟೆ ತಾಲ್ಲೂಕು ಕ್ಷೇತ್ರ — ಶ್ರೀಮತಿ ಶ್ವೇತ ವಿ. ಹಾಲಿ ನಿರ್ದೇಶಕರು ಮೊ. 8147469961 ನಿರ್ದೇಶಕರು, ಜ್ಞಾನಗಂಗಾ ಗೃ.ನಿ.ಸ.ಸಂಘ,
40	ಮೈಸೂರು ತಾಲ್ಲೂಕು ಕ್ಷೇತ್ರ — ಶ್ರೀಮತಿ ಸುಶೀಲಾನಂಜಪ್ಪ, ಎಂ.ಎ. ಮಾಜಿ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರು ಮೊ. 9964450069
41	ಮೈಸೂರು ನಗರ ಕ್ಷೇತ್ರ — ಶ್ರೀಮತಿ ಸುಶ್ಮಿತಾ ಎಂ.ಎಸ್. W/o ಡಾ. ನವೀನ್‌ಕುಮಾರ್ ಆರ್.ಎಂ., ಮೊ. 9886563348 ಉಪನ್ಯಾಸಕರು, ವಿಜಯ ವಿಠಲ ಸಂಯುಕ್ತ ಪದವಿ ಪೂರ್ವ ಕಾಲೇಜು, ಮೈಸೂರು

ವಿಶೇಷ ಸೂಚನೆ : ಮತ ಚಲಾಯಿಸಲು ಬ್ಯಾಂಕ್ ನೀಡಿರುವ ಗುರುತಿನ ಚೀಟಿ ಕಡ್ಡಾಯವಾಗಿದ್ದು ಸದಸ್ಯರುಗಳು ಗುರುತಿನ ಚೀಟಿಯನ್ನು ತಪ್ಪದೇ ತರಬೇಕಾಗಿ ಕೋರಲಾಗಿದೆ.

* ಬ್ಯಾಂಕಿನ ಗುರುತಿನ ಚೀಟಿ ಇಲ್ಲದವರು 2 ಪಾಸ್ ಪೋರ್ಟ್ ಸೈಜ್ ಫೋಟೋ ತಂದು ಸ್ಥಳದಲ್ಲೇ ಗುರುತಿನ ಚೀಟಿ ಪಡೆದುಕೊಳ್ಳಬಹುದು.

ಚುನಾವಣೆಯ ದಿನಾಂಕ : 14-01-2024ನೇ ಭಾನುವಾರ ಸಮಯ : ಬೆಳಗ್ಗೆ 9.00 ರಿಂದ ಸಂಜೆ 4.00ರವರೆಗೆ

ಸ್ಥಳ : ಹಾರ್ಡ್ವಿಕ್ ಹೈಸ್ಕೂಲ್ (Hardwick High School), (ಹಿಂದಿನ ಬಿಗ್ ಬಜಾರ್ ಎದುರು), ರಾಮಸ್ವಾಮಿ ವೃತ್ತ, ಮೈಸೂರು